ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 25

ಜೂನ್ 21, 2009

ಕನ್ನಡ ವಾರಪತ್ರಿಕೆ

5/-



ಜಾರುವ ಹಾದಿಯಲ್ಲಿ ಬಿಜೆಪಿ ಪಕ್ಷ





ಬಳ್ಳಾರಿ ಕ್ಷೇತ್ರದಲ್ಲಿ ಗೆದ್ದದ್ದು ಜನತೆ

ರಾಮನಗರ ಜಿಲ್ಲೆ: ಅರಣ್ಯ ಇಲಾಖೆಯಿಂದ ರೈತರ ಭೂಮಿ ಕಬಳಿಕೆ



ಮರಳಿ ಪಡೆದ ಹೋರಾಟ



ಮೆಗಾಸಿಟಿಯಲ್ಲಿ ಕಟ್ಟಡ ಕಾರ್ಮಿಕರ ಸಂಕಷ್ಟಗಳು




ನರೇಂದ್ರ ಮೋದಿ ಅಪರಾಧಿ ನಂ.1

ಜನಶಕ್ತಿ ಕನ್ನಡ ವಾರಪತ್ರಿಕೆ
ಜೂನ್ 21, 20

ಸಾಗುವಳಿ ಮಾಡಿದ ಅರಣ್ಯಭೂಮಿಯ ಮೇಲೆ ರೈತರಿಗೆ ಹಾಗೂ ಆದಿವಾಸಿಗಳಿಗೆ ಈಗ ಕಾನೂನುಬದ್ಧವಾಗಿಯೇ ಹಕ್ಕು ಸ್ಥಾಪಿಸಲಾಗಿದೆ. ಇತ್ತೀಚಿನ ಅರಣ್ಯ ಹಕ್ಕು ಕಾಯ್ದೆ ಅದನ್ನು ಖಾತ್ರಿ ಪಡಿಸುತ್ತದೆ. ಆದರೆ ಹಲವು ದಶಕಗಳಿಂದ ಸಾಗುವಳಿ ಮಾಡುತ್ತಾ ಬಂದ ಅರಣ್ಯಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸುವ ಕೆಲಸವು ರಾಮನಗರ ಜಿಲ್ಲೆಯಲ್ಲಿ ಭರದಿಂದ ನಡೆದಿದೆ. ಇದರ ವಿರುದ್ಧ ಕರ್ನಾಟಕ ಪ್ರಾಂತ ರೈತ ಸಂಘ ತೀವ್ರ ಸ್ವರೂಪದ ಹೋರಾಟಗಳನ್ನು ನಡೆಸಿ ರೈತರ ಭೂಮಿಯನ್ನು ಉಳಿಸಿಕೊಂಡಿದೆ. ಈ ಹಿನ್ನೆಲೆಯಲ್ಲಿ ಸಂಘದ ಜಿಲ್ಲಾ ಅಧ್ಯಕ್ಷರಾದ ವೆಂಕಟಾಚಲಯ್ಯ ಅವರ ಸಂದರ್ಶನ

'ರೈತರ ಭೂಮಿ ಕಬಳಿಸಲು ಅರಣ್ಯ ಇಲಾಖೆಗೆ ಅವಕಾಶವಿಲ್ಲ'



ವೆಂಕಟಾಚಲಯ್ಯ ಸಂದರ್ಶನ

ಸಂದರ್ಶಕರು : ಆರ್.ಕೆ.

ಜನಶಕ್ತಿ : ರಾಮನಗರ ಜಿಲ್ಲೆಯಲ್ಲಿ ಸದ್ಯ ನಡೆಯುತ್ತಿರುವ ಚಳುವಳಿ ಯಾಕಾಗಿ? ಏನು ಸಮಸ್ಯೆ?

ವೆಂಕಟಾಚಲಯ್ಯ : ಇಡೀ ರಾಮನಗರ ಜಿಲ್ಲೆಯಲ್ಲಿ 40 ರಿಂದ 50 ವರ್ಷಗಳಿಂದ ಕೆಲವರು 100 ವರ್ಷಗಳಿಂದ ಅರಣ್ಯ ಭೂಮಿ ಉಳುಮೆ ಮಾಡುತ್ತಾ ಬಂದಿದ್ದಾರೆ. ಇವರಲ್ಲಿ ಕೆಲವು ಬಡ ರೈತರಿಗೆ ಈಗಾಗಲೇ ಉಳುಮೆ ಚೀಟಿ ಸಿಕ್ಕಿದೆ. ಆದರೆ ಅನೇಕರಿಗೆ ಇನ್ನೂ ಸಿಕ್ಕಿಲ್ಲ. ಉಳುಮೆ ಚೀಟಿ ಸಿಕ್ಕವರು ಬೋರ್ ಹಾಕಿಸಿಕೊಂಡು, ತೆಂಗು ಸಪೋಟ, ಮಾವು, ಅಡಿಕೆ, ಆಹಾರಧಾನ್ಯ ಇತ್ಯಾದಿ ಬೆಳೆದು ಜೀವನ ಸಾಗಿಸುತ್ತಿದ್ದಾರೆ.

ಈ ರೀತಿ ವ್ಯವಸಾಯ ಮಾಡುತ್ತಿರುವವರು ರಾಮನಗರ ಜಿಲ್ಲೆಯಲ್ಲಿ ತುಂಬಾ ಜನ ಇದ್ದಾರೆ. ಜಿಲ್ಲೆಯ ನಾಲ್ಕೂ ತಾಲ್ಲೂಕುಗಳು ಮಳೆ ಆಶ್ರಿತ ಪ್ರದೇಶಗಳು. ನೀರಾವರಿ ಸೌಲಭ್ಯವಿಲ್ಲ, ಇಂಥ ಪರಿಸ್ಥಿತಿಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳು 'ಸುಪ್ರೀಂಕೋರ್ಟ್‌ನಿಂದ ಆದೇಶ ಬಂದಿದೆ. ಅರಣ್ಯ ಭೂಮಿ ಆಕ್ರಮಣ ಮಾಡಿರುವವರನ್ನು ಒಕ್ಕಲೆಬ್ಬಿಸಬೇಕು' ಎಂದು ಹೇಳಿ ಜೆಸಿಬಿ ಯಂತ್ರ ತಂದು ಬೆಳೆದ ಬೆಳೆನಾಶ ಮಾಡಿ ಅರಣ್ಯೀಕರಣದ ಹೆಸರಿನಲ್ಲಿ ಸಸಿ ನೆಡುತ್ತಿದ್ದಾರೆ. ರೈತರನ್ನು ಒಕ್ಕಲೆಬ್ಬಿಸುತ್ತಿದ್ದಾರೆ.

ಮಾಗಡಿ ತಾಲ್ಲೂಕಿನ 100 ರಿಂದ 120 ಹಳ್ಳಿಗಳಲ್ಲಿ ಇಂತಹ ಪ್ರಶ್ನೆಯಿದೆ. 500 ಮನೆಗಳಿರುವ ಗ್ರಾಮವಾದ ಅರಳೀಕಟ್ಟೆ ದೊಡ್ಡಿ, ದಲಿತರದ್ದೇ ಆದ 150 ಮನೆಗಳಿರುವ ಗಟ್ಟಿಪುರ ಕಾಲೋನಿ, 150 ಮನೆಗಳಿರುವ ಕೋರಮಂಗಲ ಗ್ರಾಮಗಳಲ್ಲಿ ಇಡೀ ಗ್ರಾಮವನ್ನು ತೊರೆದು ಎಲ್ಲರೂ ಬೇರೆಡೆ ಹೋಗಬೇಕೆಂದು ಅರಣ್ಯ ಇಲಾಖೆ ಒಕ್ಕಲೆಬ್ಬಿಸಲು ಹೊರಟಿದೆ.

ರಾಮನಗರದಲ್ಲಿ ಚುಂಚಗ, ಕುಂಬೇನಹಳ್ಳಿ ಮುಂತಾದ ಹಲವಾರು ಗ್ರಾಮಗಳಿಂದಲೂ ರೈತರನ್ನು ಇಡಿಯಾಗಿ ಒಕ್ಕಲೆಬ್ಬಿಸಲು ಅರಣ್ಯ ಇಲಾಖೆ ಹೊರಟಿದೆ. ಅದೇ ರೀತಿ ಸುಮಾರು 150 ದಲಿತ ಕುಟುಂಬಗಳಿರುವ ಕನಕಪುರ ಗುಳ್ಳಟ್ಟಿ ಕಾವಲು ಗ್ರಾಮದಲ್ಲಿ ಇಡಿಯಾಗಿ ಒಕ್ಕಲೆಬ್ಬಿಸಲಾಗುತ್ತಿದೆ. ಅವರು ತಲೆತಲಾಂತರದಿಂದ ವಾಸ ಮಾಡುತ್ತಾ, ಉಳುಮೆ ಮಾಡುತ್ತಾ ಬರುತ್ತಿರುವವರು. ಗುಳ್ಳಟ್ಟಿ ಕಾವಲಿಗೆ ರಸ್ತೆ ಮಾಡಲು 1 ಕೋಟಿ ಬಿಡುಗಡೆಯಾಗಿದೆ. ಆದರೆ ಅರಣ್ಯ ಇಲಾಖೆಯವರು ರಸ್ತೆ ಮಾಡಲು ಅವಕಾಶ ನೀಡದೇ ತಡೆಒಡ್ಡಿದ್ದಾರೆ. ಇಲ್ಲಿನ ಜಮೀನಿಗೆ ಬನ್ನೇರುಘಟ್ಟ ಅರಣ್ಯ ಪ್ರದೇಶದ ಆನೆಗಳನ್ನು ಬಿಟ್ಟು ರೈತರು ಬೆಳೆದ ಬೆಳೆನಾಶ ಮಾಡುತ್ತಿದ್ದಾರೆ. ನಿರಂತರ ಕಿರುಕುಳ ನೀಡುತ್ತಿದ್ದಾರೆ.

2008 ರಿಂದ ಅರಣ್ಯ ಹಕ್ಕು ಕಾಯ್ದೆ ಜಾರಿಗೆ ಬಂದಿದೆ. ಆದರೂ ಅರಣ್ಯ ಇಲಾಖೆಯೇ ಕಾನೂನು ಉಲ್ಲಂಘನೆ ಮಾಡುತ್ತಿದೆ.

ಜನಶಕ್ತಿ : ಸಮಸ್ಯೆಗೆ ಪ್ರಾಂತ ರೈತಸಂಘ ಹೇಗೆ ಸ್ಪಂದಿಸಿದೆ?

ವೆಂಕಟಾಚಲಯ್ಯ : ಈ ಬಗ್ಗೆ ಕರ್ನಾಟಕ ಪ್ರಾಂತ ರೈತಸಂಘದಿಂದ 20.11.2008 ರಂದು ಮಾಗಡಿ ತಾಲ್ಲೂಕು ಕಛೇರಿ ಮುಂದೆ ಪ್ರತಿಭಟನೆ ಮಾಡಲಾಯಿತು. ತಹಶೀಲ್ದಾರರು ಒಕ್ಕಲೆಬ್ಬಿಸುವಿಕೆ ತಡೆಯುತ್ತೇವೆಂದು ಭರವಸೆ ನೀಡಿದರು. ಅರಣ್ಯ ಇಲಾಖೆ ಅದನ್ನೂ ಲೆಕ್ಕಕ್ಕೇ ತೆಗೆದುಕೊಂಡಿಲ್ಲ. ನಾವು ರಾಮನಗರದಲ್ಲಿ ಜನವರಿ 12, 2009 ರಂದು ರಾಮನಗರ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬೃಹತ್ ಪ್ರತಿಭಟನೆ ಮಾಡಿ ಮನವಿ ಸಲ್ಲಿಸಿದೆವು. ಮನವಿ ಸಲ್ಲಿಸಿದ ಮಾರನೇ ದಿನವೇ ಉಸ್ತುವಾರಿ ಸಚಿವರಾದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಜಿಲ್ಲಾಧಿಕಾರಿಗಳು, ತಹಶೀಲ್ದಾರರು ಎಲ್ಲಾ ಸೇರಿ, ತೀರ್ಮಾನಿಸಿ ರೈತರನ್ನು ಒಕ್ಕಲೆಬ್ಬಿಸಬಾರದೆಂದು ಆದೇಶ ನೀಡಿದ್ದರು. ಆದರೂ ಅರಣ್ಯ ಇಲಾಖೆ ಅದನ್ನು ಪರಿಗಣಿಸಲಿಲ್ಲ.

ಮಾರ್ಚ್ 2, 2009 ರಂದು 1400 ರಿಂದ 1500 ಜನರು ಪಾದಯಾತ್ರೆಯ ಮೂಲಕ ಮಾಗಡಿ, ರಾಮನಗರಗಳಿಂದ ಬಂದು ಬೆಂಗಳೂರು ಟೌನ್ ಹಾಲ್‌ನಿಂದ ಮೆರವಣಿಗೆ ಹೊರಟು ಹಳೇ ಜೈಲಿನ ಬಳಿ ಪ್ರತಿಭಟನೆ ನಡೆಸಲಾಯಿತು. ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಕಟ್ಟಾಸುಬ್ರಹ್ಮಣ್ಯ ನಾಯ್ಡು ಅಲ್ಲಿಗೆ ಬಂದು ನಾವು ಒಕ್ಕಲೆಬ್ಬಿಸಲು ಆದೇಶ ನೀಡಿಲ್ಲ. ಅರಣ್ಯ ಇಲಾಖೆಯ ಕ್ರಮಕ್ಕೆ ತಡೆ ಹಾಕುತ್ತೇವೆಂದರು. ಆದರೆ ಒಕ್ಕಲೆಬ್ಬಿಸುವಿಕೆಗೆ ತಡೆ ಬೀಳಲಿಲ್ಲ. ರೈತಮುಖಂಡರ ಸಭೆ ಕರೆಯುತ್ತೇವೆ ಎಂದಿದ್ದರು ಸಭೆಯನ್ನು ಸಹ ಕರೆಯಲಿಲ್ಲ.

ಜನಶಕ್ತಿ : ಹೋರಾಟ ಈಗ ಯಾವ ಹಂತಕ್ಕೆ ಬಂದಿದೆ?

ವೆಂಕಟಾಚಲಯ್ಯ : ಇದಕ್ಕೆ ಸಂಬಂಧಿಸಿ ಸುಮಾರು 3000 ಅರ್ಜಿಯನ್ನು ರೈತರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ್ದಾರೆ. ಇಷ್ಟೆಲ್ಲಾ ಆದರೂ ಮಾಗಡಿ ತಾಲ್ಲೂಕಿನ ಗಟ್ಟಿಪುರ ಎಂಬ ಗ್ರಾಮದಲ್ಲಿ ಅರಣ್ಯ ಇಲಾಖೆಯವರು ಸಸಿ ನೆಡಲು ಮುಂದಾಗಿದ್ದಾರೆ. ಆಗ ಸುತ್ತಮುತ್ತಲು 8 ರಿಂದ 10 ಗ್ರಾಮಗಳ ಬಗರ್‌ಹುಕುಂ ಸಾಗುವಳಿದಾರರು ಸೇರಿ ಭೂಮಿ ಉಳುಮೆ ಮಾಡಿ ಸಸಿ ಹಾಕಲು ಬಂದವರನ್ನೂ ತಡೆದು ಪ್ರತಿಭಟನೆ ಮಾಡಿದ್ದಾರೆ. ಈ ಪ್ರತಿಭಟನೆಯ ಭಾಗವಾಗಿ ಜೂನ್ 9, 2009 ರಂದು 400 ರಿಂದ 500 ಜನರು ಮಾಗಡಿ ಅರಣ್ಯ ಇಲಾಖೆಗೆ ಮುತ್ತಿಗೆ ಹಾಕಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಉಪ ಅರಣ್ಯಾಧಿಕಾರಿ ಬಂದು ಉನ್ನತ ಅಧಿಕಾರಿಗಳೊಂದಿಗೆ ಮಾತನಾಡಿ ರೈತ ಪ್ರತಿನಿಧಿಗಳೊಂದಿಗೆ ಸಭೆ ನಿಗದಿಪಡಿಸುವುದಾಗಿ ತಿಳಿಸಿದ್ದಾರೆ.

ಜನಶಕ್ತಿ : ಈಗ ಸಮಸ್ಯೆಗೆ ಸಂಬಂಧಿಸಿ ನಿಮ್ಮ ನಿರ್ದಿಷ್ಟ ಬೇಡಿಕೆಯೇನು?

ವೆಂಕಟಾಚಲಯ್ಯ : ಸರಕಾರ ಮಾತುಕತೆಗೆ ಕರೆಯಬೇಕು. ಈಗಾಗಲೇ ಮಳೆ ಆಗಿದೆ. ರೈತರು ಉಳುಮೆ ಮಾಡಲು ಹೋಗುತ್ತಾರೆ. ಅರಣ್ಯ ಇಲಾಖೆಯವರು ಸಸಿ ನೆಡಲು ಬರುತ್ತಾರೆ. ಖಂಡಿತವಾಗಿ ತಿಕ್ಕಾಟ ನಡೆಯಲಿದೆ. ಕರ್ನಾಟಕ ಪ್ರಾಂತ ರೈತ ಸಂಘ ಈ ಪ್ರಶ್ನೆಯನ್ನು ದೃಢವಾಗಿ ಕೈಗೆತ್ತಿಕೊಂಡಿದೆ. ಹೋರಾಟ ಮುಂದುವರಿಸುತ್ತದೆ. ನ್ಯಾಯಬದ್ಧವಾಗಿ, ಈಗ ಕಾನೂನುಬದ್ಧವಾಗಿ ಸಹ ಈ ಬಡರೈತರು ತಾವು ಉಳುಮೆ ಮಾಡುವ ಭೂಮಿಯ ಹಕ್ಕುದಾರರಾಗಿದ್ದಾರೆ. ಈ ಎಲ್ಲ ರೈತರಿಗೆ ಉಳುಮೆ ಚೀಟಿ ಕೊಡಬೇಕು. ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಬೇಕು. ರೈತರಿಗೆ ಸೇರಿದ ಈ ಜಮೀನಿನಲ್ಲಿ ಅರಣ್ಯ ಸಸಿ ನೆಡುವುದನ್ನು ಮತ್ತು ಊರೂರುಗಳನ್ನೇ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಬೇಕು. ಅರಣ್ಯ ಇಲಾಖೆಯ ಕಿರುಕುಳ ನಿಲ್ಲಲೇಬೇಕು.

ಮಾರ್ಚ್ 2, 2009 ರ ಪಾದಯಾತ್ರೆ





ಮಾಗಡಿ ತಾಲ್ಲೂಕು ಕಛೇರಿ ಮುಂದೆ ಪ್ರತಿಭಟನೆ ನವೆಂಬರ್ 2, 2009

ಇರುಳಿಗರನ್ನು ಜೈಲಿಗಟ್ಟಿದ ಅರಣ್ಯ ಇಲಾಖೆ

"ಜೋಡುಗಟ್ಟೆ ಎಂಬುದು ಮಾಗಡಿ ತಾಲ್ಲೂಕಿನಲ್ಲಿ ಸುಮಾರು 250 ರಿಂದ 300 ಆದಿವಾಸಿ ಕುಟುಂಬಗಳಿರುವ ಗ್ರಾಮ. ಅರಣ್ಯವನ್ನೇ ಆಶ್ರಯಿಸಿ ಬದುಕುವ ಇರುಳಿಗರು ಇಲ್ಲಿದ್ದಾರೆ. ಆದರೆ ಇತ್ತೀಚೆಗೆ ಅರಣ್ಯ ಇಲಾಖೆಯವರು ಇವರನ್ನು ಒಕ್ಕಲೆಬ್ಬಿಸಲು ಬಂದು ಇರುಳಿಗರಿಗೂ, ಅರಣ್ಯ ಇಲಾಖೆಯವರಿಗೂ ಘರ್ಷಣೆ ಆಗಿದೆ. 20 ಜನರ ಮೇಲೆ ಕೇಸ್ ಹಾಕಿ ಜೈಲಿಗಟ್ಟಲಾಗಿತ್ತು. ಈಗವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ. ಇಂತಹ ದೌರ್ಜನ್ಯಗಳು ತತ್‌ಕ್ಷಣ ನಿಲ್ಲಬೇಕು"

- ವೆಂಕಟಾಚಲಯ್ಯ

ಸಂಪಾದಕೀಯ

ಸರ್ಕಾರ, ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಶಾಹಿ

'ಅಧಿಕಾರಿಗಳೇ ಹುಷಾರ್', 'ಅನ್ನ ತಿಂತಿರೋ, ಮಣ್ಣು ತಿನ್ನುತ್ತಿರೋ', 'ಮನೆಗೆ ಕಳುಹಿಸಿಬಿಡಿ' 'ವರ್ತನೆ ತಿದ್ದಿಕೊಳ್ಳದಿದ್ದರೆ ಬೇರೆ ದಾರಿ ತೋರಿಸುತ್ತೇವೆ' ಹೀಗೆ ಬುಧವಾರದ ಪತ್ರಿಕೆಗಳಲ್ಲಿ ತಲೆಬರಹಗಳು ವಿಜೃಂಭಿಸಿದವು. ಇಡೀ ರಾಜ್ಯದ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯಾಧಿಕಾರಿಗಳು, ರಾಜ್ಯ ಮಟ್ಟದ ಅಧಿಕಾರಿಗಳು, ಸರ್ಕಾರದ ಕಾರ್ಯದರ್ಶಿಗಳ ಸಭೆಯಲ್ಲಿ ಮುಖ್ಯಮಂತ್ರಿಗಳು ಆಡಿದ ಮಾತು, ನೀಡಿದ ಎಚ್ಚರಿಕೆಗಳು ಈ ರೀತಿಯ ತಲೆಬರಹಗಳಾಗಿವೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮೇಲಿಂದ ಮೇಲೆ ಮುಖ್ಯಮಂತ್ರಿಗಳು ಸರ್ಕಾರಿ ಅಧಿಕಾರಿಗಳಿಗೆ ಎಚ್ಚರಿಕೆ ಕೊಡುತ್ತಿದ್ದಾರೆ. ಅಥವಾ ಕೊಡಬೇಕಾಗಿ ಬಂದಿದೆ. ಇದಕ್ಕೆ ಕಾರಣವೇನು? ಇಂದಿನ ಸರ್ಕಾರಿ ಆಡಳಿತದಲ್ಲಿ ಭ್ರಷ್ಟಾಚಾರ, ಅದಕ್ಷತೆ, ವಿಳಂಬ, ಜನವಿರೋಧಿ ಕ್ರಮಗಳು ವ್ಯಾಪಕವಾಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದ್ದರಿಂದ ಆಡಳಿತದ ಎಲ್ಲಾ ಹಂತಗಳಲ್ಲಿ ಭ್ರಷ್ಟಾಚಾರ ತೊಲಗಬೇಕು, ದಕ್ಷತೆ ಹೆಚ್ಚಬೇಕು, ಜನರ ಅಹವಾಲುಗಳಿಗೆ ಸ್ಪಂದಿಸಬೇಕು. ಅಂತಹ ವ್ಯವಸ್ಥೆಯನ್ನು ರೂಪಿಸಬೇಕು. ಅದಕ್ಕಾಗಿ ಎಚ್ಚರಿಕೆಗಳು, ಶಿಸ್ತಿನ ಕ್ರಮಗಳು ಕೂಡಾ ಅವಶ್ಯಕ. ಆದರೆ ಇಂತಹ ಹೀನ ಪರಿಸ್ಥಿತಿಗೆ ಕೇವಲ ಸರ್ಕಾರಿ ಅಧಿಕಾರಿಗಳು, ನೌಕರರು ಮಾತ್ರವೇ ಹೊಣೆಗಾರರೇ, ಅವರನ್ನು ಮಾತ್ರ ಸುಧಾರಿಸಿದರೆ ಸಾಕೆ? ಅವರು ದಕ್ಷರಾಗಿ, ಭ್ರಷ್ಟತೆಯಿಲ್ಲದೆ ಕೆಲಸಮಾಡಲು ಅನುಕೂಲವಾಗುವಂತಹ ವಾತಾವರಣವನ್ನು ನಾಶ ಮಾಡಿ ದಕ್ಷರಾಗಿ, ಜನಕ್ಕೆ ಸ್ಪಂದಿಸಿ ಕೆಲಸ ಮಾಡಲು ಒತ್ತಾಯಿಸಿದರೆ ಅದು ಕಾರ್ಯಸಾಧುವೆ? ಈ ಪ್ರಶ್ನೆಗಳು ಉದ್ಭವಿಸುತ್ತವೆ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಎಲ್ಲ ಅಧಿಕಾರದ ಮೂಲ

ಪ್ರಜಾಪ್ರಭುತ್ವದಲ್ಲಿ ಜನತೆಯದೇ ಪರಮಾಧಿಕಾರ. ಜನರ ಹಿತಕ್ಕಾಗಿ, ಜನರ ಸಮಸ್ಯೆಗಳಿಗೆ ಸ್ಪಂದಿಸುವುದೇ ಇಡೀ ವ್ಯವಸ್ಥೆಯ ಅಸ್ತಿತ್ವದ ಆಧಾರ. ಜನತೆಗಾಗಿ ಕೆಲಸ ಮಾಡುವುದಕ್ಕಾಗಿಯೇ ಜನರಿಂದ ಚುನಾಯಿತವಾದ ಪ್ರತಿನಿಧಿ, ಆದ್ದರಿಂದ ಅಧಿಕಾರ ವರ್ಗ, ನೌಕರರು, ಚುನಾಯಿತ ಪ್ರತಿನಿಧಿಗಳ ನಿರ್ದೇಶನದಲ್ಲಿ ಕೆಲಸಮಾಡಬೇಕು. ಆದರೆ ಅದಕ್ಕೆ ಪ್ರಜಾಪ್ರಭುತ್ವಬದ್ಧ ಸೂತ್ರಗಳು, ನಿಯಮಗಳು ಇವೆ. ಶಾಸನ ಸಭೆಯ ಮೂಲಕ ಚುನಾಯಿತ ಪ್ರತಿನಿಧಿಗಳ ಅಧಿಕಾರ ನಿರೂಪಗೊಳ್ಳಬೇಕು. ಶಾಸನಸಭೆಗೆ ಬದ್ಧವಾದ ಕಾರ್ಯಾಂಗ- ಸರ್ಕಾರದ ನಿರ್ದೇಶನದಂತೆ ಸರ್ಕಾರಿ ಅಧಿಕಾರಿಗಳು, ನೌಕರರು ನಡೆಯಬೇಕು. ಆದರೆ ಜನತೆಯ ಹಿತದಿಂದ ಪ್ರತ್ಯೇಕಗೊಂಡ, ಅವರ ಹಿತಕ್ಕೆ ವಿರೋಧವಾದ ಚುನಾಯಿತ ಪ್ರತಿನಿಧಿಗಳ ದರ್ಬಾರಿಗೆ ಪ್ರಜಾಪ್ರಭುತ್ವದಲ್ಲಿ ಅವಕಾಶವಿಲ್ಲ. ಅದಕ್ಕಾಗಿಯೇ ಕಾನೂನುಗಳು, ನೀತಿ, ನಿಯಮಗಳನ್ನು ಚುನಾಯಿತ ಪ್ರತಿನಿಧಿಗಳೇ ರೂಪಿಸಬೇಕು. ಹಾಗೆ ರೂಪಿಸಿದ ಕಾನೂನು, ನಿಯಮಗಳಿಗೆ ಚುನಾಯಿತ ಪ್ರತಿನಿಧಿಗಳೂ ಸೇರಿ, ಮಂತ್ರಿ ಮಾನ್ಯರು, ಮೇಲಿನ ಕೆಳಗಿನ ಅಧಿಕಾರಿಗಳು ಎಲ್ಲರೂ ಅವುಗಳಿಗೆ ಬದ್ಧರಾಗಬೇಕು, ಪಾಲಿಸಬೇಕು. ಈ ಸೂತ್ರಗಳು ಮಾತ್ರವೇ ಆಡಳಿತಾಂಗ ದಕ್ಷತೆಯಿಂದ ಕೆಲಸ ಮಾಡಲು ಬೇಕಾದ ವಾತಾವರಣವನ್ನು ನಿರ್ಮಾಣ ಮಾಡುತ್ತವೆ. ಆದರೆ ಇಂದು ಆ ಪರಿಸ್ಥಿತಿ ಇದೆಯೇ?

ಚುನಾಯಿತ ಪ್ರತಿನಿಧಿಗಳ, ಅದರಲ್ಲಿಯೂ ಮುಖ್ಯಮಂತ್ರಿಗಳ ಮಟ್ಟದಲ್ಲಿ ಸಚಿವ ಸಂಪುಟದ ಮಟ್ಟದಲ್ಲಿ ಶಾಸಕರ ಮಟ್ಟದಲ್ಲಿ ಮಿತಿಮೀರಿದ ಭ್ರಷ್ಟಾಚಾರ, ಅದಕ್ಕಾಗಿ ಎಲ್ಲಾ ಕಾನೂನು, ನಿಯಮ, ನೀತಿಗಳ ದಿನನಿತ್ಯದ ಉಲ್ಲಂಘನೆ, ರಾಜ್ಯಮಟ್ಟದ ಅಧಿಕಾರಿಗಳಿಂದ ಕೆಳಮಟ್ಟದ ಅಧಿಕಾರಿಗಳ ವರೆಗೆ ವಿಪರೀತ ಒತ್ತಡಗಳು, ಬೆದರಿಕೆಗಳು, ವರ್ಗಾವಣೆಗಳು, ನೇಮಕಾತಿಗಳಲ್ಲಿ ಅರ್ಹತೆ, ದಕ್ಷತೆಗಳಿಗೆ ಮಾನ್ಯತೆಯಿಲ್ಲದೆ ಅತ್ಯಂತ ದುಬಾರಿ ಭ್ರಷ್ಟಾಚಾರ, ವರ್ಗಾವಣೆಗಳಲ್ಲಿ ಸ್ವತಃ ಮುಖ್ಯಮಂತ್ರಿಗಳ ಆಶ್ರಯದಲ್ಲಿಯೇ ಭ್ರಷ್ಟಾಚಾರ, ಯಾವ ಹುದ್ದೆಯಲ್ಲಿಯೂ ಗಮನವಿಟ್ಟು ಕೆಲಸ ಮಾಡಲಾಗದಂತೆ ಮನಸೋ ಇಚ್ಛೆಯ ವರ್ಗಾವಣೆಗಳು.

ಇದರ ಜೊತೆಗೆ ಜಾತಿ ರಾಜಕೀಯ. ಮುಖ್ಯಮಂತ್ರಿಗಳು, ಇತರ ಮಂತ್ರಿಗಳು ತಮ್ಮ ತಮ್ಮ ಅಧಿಕಾರ ವಲಯದಲ್ಲಿ ಕೇವಲ ತಮ್ಮ ಜಾತಿಗಳವರಿಗೆ ಪ್ರಾಧಾನ್ಯ. ಪ್ರಾಧಾನ್ಯ ಪಡೆದ ಅಧಿಕಾರಿವರ್ಗ, ನೌಕರ ವರ್ಗ ಅವರಿಗೆ ಋಣಿಯಾಗಿ ಎಲ್ಲಾ ಕಾನೂನುಗಳನ್ನು ಪಕ್ಕಕ್ಕಿಟ್ಟು ಅವರ ಆದೇಶದಂತೆ ಕುಣಿಯಬೇಕು (ಬಳ್ಳಾರಿ ಜಿಲ್ಲೆ ಎಂಬ ಬಹುದೊಡ್ಡ ಉದಾಹರಣೆ) ಉಳಿದ ಜಾತಿಗಳ ಅಧಿಕಾರಿ, ನೌಕರ ವರ್ಗಕ್ಕೆ ಸಿಟ್ಟು, ಅಸಮಾಧಾನ, ದಕ್ಷತೆಗೆ ಮನ್ನಣೆ ಇಲ್ಲವೆಂಬ ಭಾವನೆ. ಇಂತಹ ವಾತಾವರಣದಲ್ಲಿ ಅಧಿಕಾರಿ ನೌಕರರ ವರ್ಗವನ್ನು ಮಾತ್ರ ದೂರುವುದು ಎಷ್ಟು ಸರಿ?

ಇವುಗಳಿಲ್ಲದರ ಮೇಲೆ ಬಿಜೆಪಿಯ ಸಂಘ ಪರಿವಾರದ ಅಜೆಂಡಾ ಸಾಧಿಸುವುದಕ್ಕಾಗಿ ಚರ್ಚ್ ಮೇಲೆ ಧಾಳಿ, ಗೋಸಾಗಾಣಿಕೆಯ ಮೇಲೆ ಧಾಳಿ, ಕೋಮು ಗಲಭೆಗಳಲ್ಲಿ ಅಧಿಕಾರಿಗಳು ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಾಗದ ಅಸಹಾಯಕತೆ, ಕೋಮುವಾದಿ ಅಧಿಕಾರಿಗಳಿಗೆ ಮಾನ್ಯತೆ, ಭಜರಂಗದಳ, ಹಿಂದೂ ಸೇನೆ, ವಿಶ್ವಹಿಂದೂ ಪರಿಷತ್, ಆರೆಸ್ಸೆಸ್ ಕಾರ್ಯಕರ್ತರ ದರ್ಬಾರಿಗೆ ಅಧಿಕಾರಿಗಳು ಅಧೀನ. ಕಾನೂನು, ನೀತಿ, ನಿಯಮಗಳ ಪರಮ ಉಲ್ಲಂಘನೆಯಲ್ಲಿ ಅಧಿಕಾರಿಗಳು, ನೌಕರರ ಪ್ರಾಮಾಣಿಕರಾಗಿ ಕೆಲಸ ಮಾಡಲು ಸಾಧ್ಯವೇ? ○



ಇವರಿಗೆ ಫೋನ್ ಮಾಡಿದ್ರೆ, 'ಈ ಅಧಿಕಾರಿಯು ನಿಮ್ಮ ಅಧಿಕಾರದ ವ್ಯಾಪ್ತಿಯಿಂದ ಹೊರಗಿದ್ದಾರೆ' ಅಂತ ಮೆಸೇಜ್ ಬರ್ತಿದೆ!!

ಮುಖ್ಯಮಂತ್ರಿಗಳೇ ಮಣ್ಣು ತಿನ್ನುತ್ತಿರುವವರು ಯಾರು ?

ಈ ವಾರ

ಜಿ.ಎನ್.ನಾಗರಾಜ್

ಮಾನ್ಯ ಮುಖ್ಯಮಂತ್ರಿಗಳೇ "ನೀವೇನು ಅನ್ನ ತಿಂತಿರೋ, ಮಣ್ಣು ತಿಂತಿರೋ" ಎಂದು ನೀವು ನಿಮ್ಮ ಸಚಿವಾಲಯದ ಅಧಿಕಾರಿಗಳ ಮುಂದೆ ಗುಡುಗಿದ್ದೀರಿ ಎಂದು ರಾಜ್ಯಾದ್ಯಂತ ಮಾಧ್ಯಮ - ಪತ್ರಿಕೆಗಳು ವರದಿ ಮಾಡಿವೆ. ಈ ಪ್ರಶ್ನೆಯನ್ನು ನೀವು ಕೇಳುತ್ತಿದ್ದುದು ಬಳ್ಳಾರಿಯ ಗಣಿ ಧಣಿಗಳಲ್ಲಿ ಕಿರು ಧಣಿಯಾದ ಸೋಮಶೇಖರ ರೆಡ್ಡಿಯವರನ್ನು ಸಂತೃಪ್ತಪಡಿಸಲು ಕರೆದ ವಿಶೇಷ ಭೇಟಿಯೊಂದರ ಸಂದರ್ಭದಲ್ಲಿ. ಬಳ್ಳಾರಿಯ ಧಣಿಗಳನ್ನು ಸಂತೃಪ್ತಪಡಿಸುವುದು ನಿಮಗೆ ಎಷ್ಟೊಂದು ಮುಖ್ಯ ಎಂಬುದು ಇತ್ತೀಚಿನ ವಾರಗಳಲ್ಲಿ ನಿಮ್ಮ ವಿರುದ್ಧ ನಿಮ್ಮ ಪಕ್ಷದೊಳಗೇ ಎದ್ದಿರುವ ಬಂಡಾಯಗಳನ್ನು, ಇತ್ತೀಚಿನ ವರ್ಷಗಳಲ್ಲಿ ಬಳ್ಳಾರಿಯ ಗಣಿ ಧಣಿಗಳು ನಿಮ್ಮ ಸರ್ಕಾರವನ್ನು ರೂಪಿಸಿರುವ, ನಿಯಂತ್ರಿಸುತ್ತಿರುವ ರೀತಿಯನ್ನು ಗಮನಿಸಿದ ಯಾರಿಗಾದರೂ ಆಶ್ಚರ್ಯದ ಸಂಗತಿಯೇನಲ್ಲ. ಆದರೆ ಈ ಪ್ರಶ್ನೆಯನ್ನು ಯಾರ ಮುಂದೆ ಯಾರಿಗೆ ಕೇಳುತ್ತಿದ್ದೀರಿ ಎಂಬುದು ಮಾತ್ರ ನೀವು ಹಾಗೂ ನಿಮ್ಮ ಪಕ್ಷ ತಲುಪಿರುವ ಸ್ಥಿತಿಯ ಬಗೆಗಿನ ಐತಿಹಾಸಿಕ ವ್ಯಂಗ್ಯ. ನೀವು ಕೇಳಿದ ಪ್ರಶ್ನೆಯನ್ನೇ ರಾಜ್ಯದ ಪ್ರಜ್ಞಾವಂತ ಜನತೆ ನಿಮ್ಮ ಸಂಪುಟದ ಸಚಿವ ರನೇಕರನ್ನು, ನೇರವಾಗಿ ನಿಮ್ಮನ್ನೇ ಕೇಳಬಯಸುತ್ತದೆ. ಅದಕ್ಕೆ ನಿಮ್ಮ ಸಚಿವ ಸಂಪುಟದ ಸಚಿವರಾಗಲೀ ನೀವಾಗಲೀ ಜನರ ಮನಸೊಪ್ಪುವಂತ ಉತ್ತರ ನೀಡಬಲ್ಲಿರಾ?

ನಿಮಗೆ ಇದೇ ಪ್ರಶ್ನೆಯನ್ನು ನಿಮ್ಮ ಸಚಿವ ಸಂಪುಟದ ಸಚಿವರಿಗೆ ಹಾಕುವ ತಾಕತ್ತಿದೆಯೆ? ಯಾರನ್ನು ತೃಪ್ತಿಪಡಿಸಲು ಈ ಪ್ರಶ್ನೆಯನ್ನು ಕೇಳುತ್ತಿದ್ದಿರೋ ಅವರು, ನಿಮ್ಮ ಸಂಪುಟದ ಆಧಾರಸ್ತಂಭವಾದ ಗಣಿ ದಣಿಗಳು ಕರ್ನಾಟಕದ ಗಡಿಯನ್ನು ಒತ್ತುವರಿ ಮಾಡಿ, ಕರ್ನಾಟಕದ ಮಣ್ಣನ್ನು ತಿಂದೇ ನಿಮ್ಮ ಸರ್ಕಾರವನ್ನು ಅಸ್ತಿತ್ವಕ್ಕೆ ತಂದಿದ್ದಾರೆ. ಯಾವಾಗಲೂ ನಿಮ್ಮ ಎಡಬಲ ಸುತ್ತುವ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಅಶೋಕ್, ಕೋಲಾರದ ಕೃಷ್ಣಯ್ಯ ಶೆಟ್ಟಿ, ಮಂಗಳೂರಿನ ಪಾಲೆಮಾರ್ ಹೀಗೆ ಇನ್ನೂ ಎಷ್ಟೋ ಮಂದಿ ಬೆಂಗಳೂರಿನ, ಕರ್ನಾಟಕದ ವಿವಿಧ ಪ್ರದೇಶಗಳ ಮಣ್ಣು ತಿಂದೇ ಕೊಬ್ಬಿ ಬೆಳೆದಿದ್ದಾರೆ. ನಿಮ್ಮ ಪಕ್ಷವನ್ನು ಕೊಬ್ಬಿಸಿದ್ದಾರೆ. ದಯವಿಟ್ಟು ಕರ್ನಾಟಕದ ಜನತೆಯ ಪರವಾಗಿ ಕೇಳುವ ಧೈರ್ಯ ನಿಮಗೆ ಬಂದ ದಿನ ಈ ಪ್ರಶ್ನೆಯನ್ನು ಯಾರಿಗಾದರೂ ಹಾಕುವ ನೈತಿಕ ಸ್ಥೈರ್ಯ ನಿಮಗೆ ಬರುತ್ತದೆ. ಅಲ್ಲಿಯವರೆಗೆ ನಿಮ್ಮ ಪ್ರಶ್ನೆ ನಿಮಗೇ ತಿರುಗುಬಾಣವಾಗುತ್ತದೆ. ಹಾಗೆಂದ ಮಾತ್ರಕ್ಕೆ ಕೆಲಸ ಮಾಡದ, ವಿಳಂಬ ಮಾಡುವ ಅಥವಾ ಜನರಿಗೆ ಅನ್ಯಾಯವಾಗುವಂತೆ ವರ್ತಿಸುವ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳ ಬಾರದೆಂದು ಅರ್ಥವಲ್ಲ (ವಿವರಗಳಿಗೆ ಸಂಪಾದಕೀಯದಲ್ಲಿ ನೋಡಿ).

ಯಡ್ಡಿಯೂರಪ್ಪನವರಿಗೆ ಲಗಾಮು ಹಾಕಲು ಮುಂದುವರೆದ ಪ್ರಯತ್ನಗಳು

ಯಡ್ಡಿಯೂರಪ್ಪನವರಿಗೆ ಮೂಗು ಚುಚ್ಚಿ, ಮೂಗುದಾರ ಹಾಕಿ, ಲಗಾಮು ಹಾಕಲು ನಡೆಯುತ್ತಿರುವ ಬಿಜೆಪಿಯಲ್ಲಿನ ಭಿನ್ನಮತ, ಬಂಡಾಯ - ಮೊದಲಾದ ಪ್ರಯತ್ನಗಳು ಇನ್ನೂ ತೀವ್ರವಾಗಿಯೇ, ಒಳಗೊಳಗೇ ಮುಂದುವರಿದಿವೆ. ಬಿಜೆಪಿಯ ಹೈಕಮಾಂಡ್ ಅಣತಿಯ ಮೇರೆಗೆ ಬಹಿರಂಗ ಬಂಡಾಯಕ್ಕೆ ಬಿರಟೆ ಹಾಕಲಾಗಿದೆ ಅಷ್ಟೇ. ಈಶ್ವರಪ್ಪನವರ ಮೂಲಕ ಅನಂತಕುಮಾರ್ ಗುಂಪು, ಇತರ ಭಿನ್ನಮತೀಯರು ಒಂದು ಕಡೆ, ಜನಾರ್ಧನ ರೆಡ್ಡಿಯ ಗುಂಪು ಮತ್ತೊಂದು ಕಡೆ ತಮ್ಮ ತಮ್ಮ ಗುಂಪಿನ ಬೇಡಿಕೆಗಳನ್ನು ಮಂಡಿಸುತ್ತಾ ನಡೆದಿವೆ. ಗಡುವುಗಳನ್ನೂ ವಿಧಿಸಿದ್ದಾರೆ. ಆದರೆ ಎರಡೂ ಕಡೆಯಿಂದ ನಡೆಯುತ್ತಿರುವ ಪ್ರಯತ್ನಗಳೂ ಯಡಿಯೂರಪ್ಪನವರಿಗೆ ಹಾಗೂ ಅವರ ಸರ್ಕಾರಕ್ಕೆ ಕೇವಲ ಆರೆಸ್ಸೆಸ್ ಹಾಗೂ ರೆಡ್ಡಿ ಲಗಾಮುಗಳನ್ನು ಹಾಕುವುದಕ್ಕೆ ಮಾತ್ರ ಸೀಮಿತ. ಬಿಜೆಪಿಯ ಈ ಒಳ ಗುದ್ದಾಟದಲ್ಲಿ ಜನತೆಯ ಹಿತವೇನೂ ಅಡಗಿಲ್ಲ. ವಿವಿಧ ಬಂಡವಾಳಶಾಹಿ -

ಪುಟ 4ಕ್ಕೆ

ಸುದ್ದಿ ಬಿಂಬ

ವಿವೇಚನೆ ಇಲ್ಲದ ಕ್ರಮ

ಅತಿ ಹಿಂದುಳಿದ ಜಾತಿಗಳಿಗೆ ಮೀಸಲು ಸೌಲಭ್ಯ ಕಲ್ಪಿಸುವ ಪ್ರವರ್ಗ 2ಎ ಜಾತಿ ಪತ್ರಗಳನ್ನು ಸಾದರ ಲಿಂಗಾಯತ ಜಾತಿಗಳಿಗೂ ನೀಡಬೇಕೆಂದು ಒಂದು ತಿಂಗಳ ಹಿಂದೆಯಷ್ಟೇ ಹೊರಡಿಸಿದ್ದ ವಿವಾದಿತ ಆದೇಶವನ್ನು ರಾಜ್ಯ ಸರ್ಕಾರ ಗುರುವಾರ ಹಿಂತೆಗೆದುಕೊಂಡಿದೆ. ಈ ಮೂಲಕ ತಾನು ಮಾಡಿದ ಆದೇಶ ಸರಿಯಾಗಿರಲಿಲ್ಲ ಎಂಬುದನ್ನು ಸರ್ಕಾರವೇ ಒಪ್ಪಿಕೊಂಡಂತಾಗಿದೆ. ವಿವೇಚನೆಯಿಲ್ಲದ ಇಂತಹ ನಿರ್ಧಾರದಿಂದ ಸರ್ಕಾರ ತನಗೆ ತಾನೇ ಮುಖಭಂಗ ಮಾಡಿಕೊಂಡಿದೆ. ಹಿಂದುಳಿದ ಜಾತಿಗಳ ಪಟ್ಟಿಗೆ ಯಾವುದೇ ಒಂದು ಜಾತಿಯನ್ನು ಸೇರಿಸುವ ಅಥವಾ ತೆಗೆದುಹಾಕುವ ಪ್ರಸ್ತಾಪವನ್ನು ಹಿಂದುಳಿದ ವರ್ಗಗಳ ಆಯೋಗದ ವಿವೇಚನೆಗೆ ಬಿಡಬೇಕು. ಈ ಕಾರ್ಯಕ್ಕಾಗಿಯೇ ಇಂದ್ರಾ ಸಾಹ್ನಿ ಪ್ರಕರಣದ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್ ರಾಜ್ಯಗಳಿಗೆ ನಿರ್ದೇಶನ ನೀಡಿ ಶಾಶ್ವತ ಆಯೋಗವೊಂದನ್ನು ರಚಿಸಲು ಹೇಳಿತ್ತು. ಈ ಪರಿಣಾಮವಾಗಿ ಜೆ.ಹೆಚ್.ಪಟೇಲ್ ಸರ್ಕಾರ ಶಾಶ್ವತ ಆಯೋಗವನ್ನು ಅಸ್ತಿತ್ವಕ್ಕೆ ತಂದಿತು. ಈ ಆಯೋಗವನ್ನು ನಿರ್ಲಕ್ಷಿಸಿ ಕೇವಲ ಯಾರದೋ ಒತ್ತಡಗಳಿಗೆ ಮಣಿದು ಮನಸ್ಸಿಗೆ ಬಂದಂತೆ ಮೀಸಲಾತಿ ವ್ಯಾಪ್ತಿಗೆ ಕೆಲವು ಜಾತಿಗಳನ್ನು ಸೇರಿಸುತ್ತಾ ಹೋಗುವುದು ಅವೈಜ್ಞಾನಿಕ ಕ್ರಮ. ಕೆಲವು ತಿಂಗಳ ಹಿಂದೆ ಲಿಂಗಾಯುತ ಸಮುದಾಯದ 19 ಉಪ ಜಾತಿಗಳನ್ನು ಪ್ರವರ್ಗ 3 ಬಿಗೆ ಸೇರಿಸಿ ನಂತರ ಆ ಸಂಬಂಧದ ಆದೇಶವನ್ನು ಕೈಬಿಡಲಾಯಿತು. ಗಂಭೀರ ವಿಷಯಗಳ ಬಗೆಗೆ ಆಳವಾದ ಅಧ್ಯಯನ ಮತ್ತು ಚರ್ಚೆ ಇಲ್ಲದೆ ಒತ್ತಡಕ್ಕೆ ಮಣಿದು ಆದೇಶಗಳನ್ನು ಹೊರಡಿಸುತ್ತಿರುವುದು ಜವಾಬ್ದಾರಿಯುತ ಸರ್ಕಾರ ಮಾಡುವ ಕೆಲಸವಲ್ಲ. ಕೆಲವು ಜಾತಿ ಸಂಘಟನೆಗಳು ತಮ್ಮನ್ನು ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿಸಬೇಕೆಂದು ಮನವಿ ಸಲ್ಲಿಸುವುದು ಮತ್ತು ಒತ್ತಡ ತರುವುದು ಸಹಜ. ಆದರೆ, ಸರ್ಕಾರಿ ಯಾವುದೇ ವಿವೇಚನೆ ಇಲ್ಲದೆ ಮನಸ್ಸಿಗೆ ಬಂದಂತೆ ಈಗಿರುವ ಮೀಸಲಾತಿ ಪಟ್ಟಿಗೆ ಸೇರಿಸುತ್ತಾ ಹೋಗುವುದು ಸರಿಯಲ್ಲ. ಆ ಕೆಲಸವನ್ನು ಈಗಿರುವ ಆಯೋಗಕ್ಕೆ ಬಿಡಬೇಕು.......

(ಜೂನ್ 12ರ ಪ್ರಜಾವಾಣಿ ಸಂಪಾದಕೀಯದಿಂದ)

ಮಣ್ಣು ತಿನ್ನುತ್ತಿರುವವರು ಯಾರು ?

ಪುಟ 3 ರಿಂದ

ಭೂಮಾಲಕ ಪಟ್ಟಭದ್ರ ಹಿತಗಳು ಈ ಗುಂಪುಗಾರಿಕೆ ಹಾಗೂ ಬ್ಲಾಕ್‌ಮೇಲ್ ತಂತ್ರಗಳ ಮೂಲಕ ಕರ್ನಾಟಕವನ್ನು ಲೂಟಿ ಮಾಡುವ, ಈಗಿರುವ ಅವಕಾಶಗಳನ್ನು ವಿಸ್ತಾರಗೊಳಿಸಿಕೊಳ್ಳಲು ಬಯಸಿದ್ದಾರಷ್ಟೆ. ಜನತೆಯ ಹಿತವನ್ನು ಸಾಧಿಸಲು ಅನುವಾಗುವಂತಹ ಲಗಾಮು ಹಾಕಲು ತೀವ್ರಗೊಂಡ ಜನ ಚಳುವಳಿಯಿಂದಷ್ಟೇ ಸಾಧ್ಯ.

ಆರೆಸ್ಸೆಸ್ ಪಾತ್ರ

ಈ ಮಧ್ಯೆ ಆರೆಸ್ಸೆಸ್‌ನ ಹೆಸರು ಎರಡು ಗುಂಪುಗಳಿಂದಲೂ ಪರಸ್ಪರ ವಿರುದ್ಧವಾಗಿ ಬಳಕೆಯಾಗುತ್ತಿದೆ. ಆರೆಸ್ಸೆಸ್ ಯಾವುದೇ ಭಿನ್ನಮತವನ್ನು ಸಹಿಸಬೇಡಿ, ಅದನ್ನು ಹತ್ತಿಕ್ಕಲು ತೀಕ್ಷ್ಣಕ್ರಮಗಳನ್ನು ಕೈಗೊಳ್ಳಿ ಎಂದು ಮುಖ್ಯಮಂತ್ರಿಗಳಿಗೆ ಮೌಖಿಕ ಆದೇಶ ನೀಡಿದೆಯೆಂದು ಮುಖ್ಯಮಂತ್ರಿಗಳ ಸಚಿವಾಲಯದ ಅಧಿಕಾರಿಗಳಿಂದ ಮಾಧ್ಯಮಗಳ ಮೂಲಕ ಸುದ್ದಿ ಹಬ್ಬಿಸಲಾಯಿತು. ಮರುದಿನವೇ ಆರೆಸ್ಸೆಸ್ ಮೂಲಗಳಿಂದ ಆರೆಸ್ಸೆಸ್ ಹಾಗೇನೂ ತಾಕೀತು ಮಾಡಿಲ್ಲ ಹಾಗೂ ಆರೆಸ್ಸೆಸ್ ಮಧ್ಯ ಪ್ರವೇಶ ಮಾಡುವುದಿಲ್ಲವೆಂದೂ ಆರೆಸ್ಸೆಸ್ ನಿಯಂತ್ರಣದ ಮಾಧ್ಯಮಗಳ ಮೂಲಕ ಅನಧಿಕೃತವಾಗಿ ಪ್ರಕಟಿಸಲಾಯಿತು. ಅಂದರೆ ಈಗಿನ ಭಿನ್ನಮತಕ್ಕೆ ಆರೆಸ್ಸೆಸ್‌ಗೆ ಸಂತೋಷವೇ ಆಗಿದೆ ಅಥವಾ ಆರೆಸ್ಸೆಸ್ ಭಿನ್ನಮತಕ್ಕೆ ಬೆಂಬಲವಾಗಿ ನಿಂತಿದೆ ಎಂದು ಪರೋಕ್ಷವಾಗಿ ಹೇಳಲಾಯಿತು. ಮತ್ತೆ ಕೆಲವೇ ದಿನಗಳಲ್ಲಿ ಆರೆಸ್ಸೆಸ್ ನಿಯಂತ್ರಣದ ಮಾಧ್ಯಮಗಳು, ಆರೆಸ್ಸೆಸ್ ರಾಜೀ ಸೂತ್ರಗಳನ್ನು ಸಿದ್ದಪಡಿಸಿಕೊಂಡು, ಯಡಿಯೂರಪ್ಪ ಮತ್ತು ಈಶ್ವರಪ್ಪನವರ ಗುಂಪಿನ ನಡುವೆ ಸಂಧಾನಕ್ಕೆ ತಯಾರಾಗಿದೆಯೆಂದೂ ಪ್ರಕಟಿಸಿದವು. ಆರೆಸ್ಸೆಸ್ ಯಡಿಯೂರಪ್ಪನವರು ತಮ್ಮ ಅಣತಿಗಳನ್ನು ಕಡೆಗಣಿಸುತ್ತಿದ್ದಾರೆ, ಆದ್ದರಿಂದ ತಮ್ಮದೊಂದು ಲಗಾಮು ಹಾಕಲೇಬೇಕು ಎಂದು ತೀರ್ಮಾನಿಸಿದೆ. ಅದಕ್ಕಾಗಿ ಈ ಸಾಂಸತಿಕ ಸೇವಾ ಸಂಸ್ಥೆ ಎಂಥದೆಲ್ಲಾ ಕೆಳಮಟ್ಟದ ರಾಜಕೀಯವನ್ನು ನಡೆಸುತ್ತದೆ ಎಂಬುದು ಬಹಿರಂಗಗೊಂಡಂತಾಗಿದೆ.

ಪತ್ರಿಕೆಗಳ ಪಾತ್ರ

ಇತ್ತೀಚಿನ ವರ್ಷಗಳಲ್ಲಿ ವಿವಿಧ ಪತ್ರಿಕೆಗಳು, ಪತ್ರಿಕೆಗಳೊಳಗಿನ ಆರೆಸ್ಸೆಸ್ ಪರ ಗುಂಪುಗಳು ಪತ್ರಿಕಾ - ಮಾಧ್ಯಮರಂಗ ಎಂಬ ಪ್ರಜಾಪ್ರಭುತ್ವದ ನಾಲ್ಕನೇ ಆಧಾರ ಸ್ತಂಭವನ್ನು ಎಷ್ಟೆಲ್ಲಾ ಕುಲಗೆಡಿಸಿವೆ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. 2008 ರ ವಿಧಾನಸಭಾ ಚುನಾವಣೆಗಳು ಹಾಗೂ 2009 ರ ಲೋಕಸಭಾ ಚುನಾವಣೆಗಳು ಪತ್ರಿಕೆ - ಮಾಧ್ಯಮ ರಂಗವನ್ನು ಆರೆಸ್ಸೆಸ್-ಬಿಜೆಪಿ ಎಷ್ಟೊಂದು ಭ್ರಷ್ಟಗೊಳಿಸಿವೆ ಎಂಬುದಕ್ಕೆ ರುಜುವಾತಾಗಿವೆ. ಬಿಜೆಪಿ ಸರ್ಕಾರದ ಈ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಪತ್ರಿಕೆಗಳು ಅಪ್ರಕಟಿತವಾಗಿ - ಪ್ರಕಟಿತವಾಗಿ ಯಡಿಯೂರಪ್ಪನವರ ಸರ್ಕಾರಕ್ಕೆ ಆರೆಸ್ಸೆಸ್ ಪರ ಲಗಾಮು ಹಾಕುವುದರ ಪರವಾಗಿ ಅಥವಾ ಅಲಿಪ್ತವಾಗಿ ನಿಂತಿವೆ. ○

ಬರಹಗಾರರು, ವರದಿಗಾರರ ಗಮನಕ್ಕೆ

'ಜನಶಕ್ತಿ' ಯ ಮೇಲೆ ಅಭಿಮಾನವಿಟ್ಟು ಲೇಖನ, ಅಂಕಣ, ವರದಿ, ಫೋಟೋ ಕಳಿಸುತ್ತಿರುವ ವರದಿಗಾರರು, ಬರಹಗಾರರ ಗಮನಕ್ಕೆ. ಪತ್ರಿಕೆಯು ಶನಿವಾರ ಅಂತಿಮಗೊಂಡು ಭಾನುವಾರ ಮುದ್ರಣಕ್ಕೆ ಹೋಗುವ ಕ್ರಮವನ್ನು ಬದಲಿಸಲಾಗಿದೆ. ಪತ್ರಿಕೆಯು ಗುರುವಾರ ಸಿದ್ದಗೊಂಡು ಶುಕ್ರವಾರ ಮುದ್ರಣಕ್ಕೆ ಹೋಗಲಿದೆ.

ನಿಮ್ಮ ಬರಹ, ಫೋಟೋಗಳು ಬುಧವಾರ ನಮಗೆ ತಲುಪಿದಲ್ಲಿ ಮಾತ್ರವೇ ಆ ವಾರಕ್ಕೆ ಆ ಸುದ್ದಿ, ವರದಿಗಳನ್ನು, ಲೇಖನಗಳನ್ನು ಪ್ರಕಟಿಸಲು ಸಾಧ್ಯ. ಹೀಗಾಗಿ ಬದಲಾದ ಸಮಯಕ್ಕೆ ತಕ್ಕಂತೆ ಬರಹಗಳನ್ನು ಕಳಿಹಿಸಲು ಕೋರಲಾಗಿದೆ.

- ಸಂಪಾದಕರು

ಭವ್ಯ ಬ್ರಹ್ಮಾಂಡ ಸ್ವಾಮಿಯ ಭವಿಷ್ಯ ವಾಣಿ

ಕ್ಯಾತೆ

ಶ್ರೀ

ಜನರ ತೆರಿಗೆ ಹಣವನ್ನು ಕಳ್ಳೆ ಪುರಿಯಂತೆ ಮಠಗಳಿಗೆ ಹಂಚಿದರೂ ಸನ್ಮಾನ್ಯ ಮು.ಮಂ. ಮಾಡಿದ ಪಾಪ ಕಳೆಯುವಷ್ಟು ಪುಣ್ಯ ಪ್ರಾಪ್ತಿಯಾಗಲಿಲ್ಲವೋ ಏನೋ!? ಭಿನ್ನ ಮತೀಯರ ಕಾಟ ದಿನೇ ದಿನೇ ಹೆಚ್ಚುತ್ತಲೇ ಇದೆ. ಅತ್ತೆಯ ಕೋಪ ಕೊತ್ತಿಯ ಮೇಲೆ ಎಂಬಂತೆ ಅಧಿಕಾರಿಗಳ ಮೇಲೆ ಹಾರಾಟ ಚೀರಾಟ ಮಾಡುತ್ತಿದ್ದಾರೆ. ಯಾವ ದೇವಸ್ಥಾನವೂ, ಯಾಗ ಯಜ್ಞಗಳೂ ಕಾಪಾಡದ ಇಂಥ ಪರಿಸ್ಥಿತಿಯಲ್ಲಿ ದಿನ ಬೆಳಗಾದರೆ ಭವಿಷ್ಯ ಹೇಳುವ ಟೀ ವಿ ಚಾನಲ್ ಗಳಿಗೆ ಫೋನ್ ಮಾಡಲಾರಂಭಿಸಿದರು. ಅವರ ಗ್ರಹಚಾರಕ್ಕೆ ಯಾವ ಲೈನೂ ಸಿಗಲಿಲ್ಲ. ಕಡೆಗೆ ಅದೃಷ್ಟವೋ ದುರದೃಷ್ಟವೋ 'ಭವ್ಯ ಬ್ರಹ್ಮಾಂಡ' ದ ಸ್ವಾಮಿಯ ಲೈನ್ ಸಿಕ್ಕಿತು.

ಮು.ಮಂ: ಭವ್ಯ ಬ್ರಹ್ಮಾಂಡ ಸ್ವಾಮಿಗಳಿಗೆ ನಮಸ್ಕಾರ.

ಭ.ಬ್ರ.ಸ್ವಾ: ಹ್ಞೂ,,,, ಹೇಳಿ..., ಏನು ನಿಮ್ಮ ಗೋಳು?

ಮು.ಮಂ: ಸ್ವಾಮಿಗಳೇ ..., ನಮಸ್ಕಾರ....,

ಭ.ಬ್ರ.ಸ್ವಾ: ನಿಮ್ಮ ನಮಸ್ಕಾರದ ಮನೆ ಹಾಳಾಯ್ತು, ನಿಮಗೇನು ಬಂದಿದೆ ದೊಡ್ ರೋಗ ಅದನ್ನ ಮೊದಲು ಹೇಳ್ರೀ....,

ಮು.ಮಂ: ಏನ್ ಸ್ವಾಮಿ ಗೊತ್ತಾಗಲಿಲ್ವೇ?. ನಾನು ಮು.ಮಂ.

ಭ.ಬ್ರ.ಸ್ವಾ: ಮು.ಮಂ ಆದರೇನು, ಮಾ.ಮುಂ ಆದರೇನು? ಆ ಭಗವಂತನ ದೃಷ್ಟೀಲಿ ಎಲ್ಲ ನರ ಪಿಳ್ಳೆಗಳೂ ಒಂದೇ ಕಣ್ರೀ..., ಅದಿರ್ಲಿ ಏನು ನಿಮ್ಮ ಸಮಸ್ಯೆ?.

ಮು.ಮಂ: ಸಮಸ್ಯೆ ಒಂದೇ ಎರಡೇ? ನೀವು ಟೀ ವಿ ನೋಡಲ್ವೇ? ಪೇಪರ್ ಓದಲ್ವೇ? ಭಿನ್ನ ಮತೀಯರ ಕಾಟ ಕಣ್ರೀ.., ಬಹಳ ಜಾಸ್ತಿಯಾಗ್ತಿದೆ.

ಭ.ಬ್ರ.ಸ್ವಾ: ಗಾದೆ ಮಾತು ಕೇಳಿಲ್ವೇ? ಮಾಡಬಾರದ್ದು ಮಾಡಿದ್ರೆ ಆಗಬಾರದ್ದು ಆಗುತ್ತೆ ಅಂತ. ವಾಸ್ತು ಗೀಸ್ತು ಸುಡುಗಾಡು ಅಂತ ಜನಗಳ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಮನೆ ರಿಪೇರಿ ಮಾಡಿಸ್ಕೊಂಡ್ರಲ್ಲ ಅದ್ಯಾವ ವಾಸ್ತು ಪುರುಷ ಕಾಪಾಡ್ತನೆ ನಿಮ್ಮನ್ನು ಈಗ?

ಮು.ಮಂ: ಯಾಕೆ ಹೀಗಾಗ್ತಿದೆ ಅಂತೀರ?

ಭ.ಬ್ರ.ಸ್ವಾ: ಯಾಕೆ ಅಂತ ಬೇರೆ ಕೇಳ್ತೀರ ರಾಹು, ಕೇತು, ಶನಿ ಎಲ್ಲ ನಿಮ್ಮ ಮನೇಲಿ ಚಕ್ಕಂಬಕ್ಕಳ ಹಾಕ್ಕೊಂಡು ಕೂತು ಬಿಟ್ಟಿದ್ದಾರೆ.

ಮು.ಮಂ: ಈಗೇನು ಮಾಡಬೇಕೂಂತಿರಾ?

ಭ.ಬ್ರ.ಸ್ವಾ: ಕೆಟ್ಟಮೇಲೆ ಬುದ್ಧಿ ಬಂತು ಅಂತ ಎಲ್ಲ ಮುಗಿದ ಮೇಲೆ ನನ್ನ ಹತ್ರ ಬಂದಿದೀರ. ಮಠಗಳಿಗೆಲ್ಲ ಕೋಟ್ಯಾಂತರ ರೂಪಾಯಿ ಕೊಟ್ಟು ನನ್ನನ್ನು ಪುಗಸಟ್ಟೆ ಸಲಹೆ ಕೇಳ್ತೀರೇನ್ರೀ? ಸೂಟ್ ಕೇಸು ಹಿಡ್ಕೊಂಡು ಬಾನುವಾರ ಬನ್ನಿ . ಹೊಸ ಕವಡೆ ತಂದಿದೀನಿ, ಹಾಕಿ ನೋಡಿ ಹೇಳ್ತೀನಿ.

ಮು.ಮಂ: ಅಲ್ಲ ಅಲ್ಲಿ ತನಕ ನನ್ನ ಕುರ್ಚಿ ಉಳಿಬೇಕಲ್ಲ. ಯಾಕೋ ಸಿಕ್ಕಾಪಟ್ಟೆ ಅಲ್ಲಾಡ್‌ತಿದೆ ಅದಕ್ಕಾದರೂ ತಾತ್ಕಾಲಿಕವಾಗಿ ಏನಾದ್ರೂ ಪರಿಹಾರ ಹೇಳಿ ಸ್ವಾಮಿ.

ಭ.ಬ್ರ.ಸ್ವಾ: ಬಿಳಿ ಸಫಾರಿ ಸೂಟ್ ಹಾಕ್ಕೊಂಡು ಹೋಗಿ ಬಳ್ಳಾರಿ ಗಣೀಲಿ ಹತ್ತು ಸುತ್ತು ಉರುಳು ಸೇವೆ ಮಾಡಿ, ಗೋಕರ್ಣಕ್ಕೆ ಹೋಗಿ ರಾ.ಚ.ಪುರದ ಗೋಮೂತ್ರದಲ್ಲಿ ಸ್ನಾನ ಮಾಡಿ ಅಂತ ಹೇಳೋಕಾಗುತ್ತೇನ್ರೀ? ನೀವೆಲ್ಲ ಹೊಟ್ಟೇಗ್ ಏನ್ ತಿಂತಿರೋ, ಒಂದ್ ಸಾರಿ ಹೇಳಿದ್ರ ಅರ್ಥ ಆಗಲ್ವೇನ್ರೀ.., ಭಾನುವಾರ ಶುಭ್ರವಾಗಿ ಸ್ನಾನ ಮಾಡ್ಕೊಂಡು ಸೂಟ್ ಕೇಸ್ ಹಿಡ್ಕೊಂಡು ಬನ್ನಿ.., ಅರ್ಥ ಆಯ್ತೋ ಸಂಸತದಲ್ಲಿ ಹೇಳಬೇಕೋ...,?

ರ್ರೀ..., ಏಳ್ರೀ..., ಇಷ್ಟೊತ್ತಾದ್ರೂ ಮಲಗಿದ್ದೀರಲ್ಲ. ಆಗ್ಲೆ ಟೀವಿಲಿ ಭವ್ಯ ಬ್ರಹ್ಮಾಂಡ ಬರ್ತಾಯಿದೆ. ಅಂತ ಹೆಂಡತಿ ಎಬ್ಬಿಸಿದಾಗಲೇ ತಿಳಿದದ್ದು ಇದೆಲ್ಲ ಕನಸು ಅಂತ. ಬೆಳಗಿನ ಜಾವ ಬೀಳೋ ಕನಸು ನಿಜ ಅಂತಾರೆ ಹೌದೇನ್ರೀ?. ○

ಸ್ಲಂಗಳನ್ನು ಎತ್ತಂಗಡಿ ಮಾಡಿ ಓಡಿಸಿದರೆ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಭೂಮಿಯನ್ನು ದಕ್ಕಿಸಿಕೊಳ್ಳಬಹುದೆಂಬ ಕಾರಣಕ್ಕೆ ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಸ್ಲಂ ನಿವಾಸಿಗಳ ಎತ್ತಂಗಡಿ ಯತ್ನಗಳು ತೀವ್ರಗೊಂಡಿವೆ.

ಸ್ಲಂಗಳ ಮೇಲೆ ಬಿತ್ತು ಬಿಜೆಪಿ ಕಣ್ಣು

ಗೌರಮ್ಮ

ಹಲವಾರು ಭರವಸೆ ನೀಡುತ್ತಾ ಅಧಿಕಾರಕ್ಕೆ ಬಂದ ಬಿಜೆಪಿ ಯಾವುದೇ ಜನಸಾಮಾನ್ಯರ ವಿಷಯಕ್ಕೆ ...ಸಲಿಲ್ಲ. ಜನರು ಸರ್ಕಾರ ಕಾರ್ಯವೈಖರಿ ಬಗ್ಗೆ ಬೇಸರಪಡುತ್ತಿರುವಾಗಲೇ ಬಂತು 15 ನೇ ಲೋಕಸಭಾ ಚುನಾವಣೆ. ಚುನಾವಣೆಯಲ್ಲಿ ಹೆಂಡ-ಹಣ ಹರಿಸುವುದು ಇತ್ಯಾದಿ ಹಲವು ಅಕ್ರಮಗಳ ಮೂಲಕ 28 ಸ್ಥಾನದಲ್ಲಿ 19 ನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳುವಲ್ಲಿ ಯಶಸ್ವಿಯಾಯಿತು. ಮೇ 30 ಕ್ಕೆ ಸರ್ಕಾರಕ್ಕೆ ಒಂದು ವರ್ಷ ತುಂಬಿದ ಸಂದರ್ಭದಲ್ಲಿ ಆಚರಣೆಯ ಕಾರ್ಯಕ್ರಮಕ್ಕೆ ಜನರನ್ನು ಕರೆತರಲು ನೆಮ್ಮದಿ ನಾರಾಯಣ ಎಂಬ ಹೆಸರಿನಲ್ಲಿ ಸ್ಲಂ ಜನರಿಗೆ ಹಕ್ಕು ಪತ್ರ ನೀಡುವ ಆಶ್ವಾಸನೆಯನ್ನು ನೀಡಲಾಯಿತು. ಸೂರಿಗೆ ಆಸರೆಯಾಗಿ ಗುರುತು ಚೀಟಿ ಸಿಗುತ್ತದೆಂದು ಸ್ಲಂ ನಿವಾಸಿಗಳು ಸಹ ಉತ್ಸಾಹಭರಿತರಾಗಿ ಖುಷಿಪಟ್ಟರೂ ಬಿಜೆಪಿ ಕಾರ್ಯಕರ್ತರು ಹೇಳಿದಂತೆ ಅವರು ಕೇಳಿದ ದಾಖಲೆಗೆ ಕಿವಿ, ಮೂಗಿನ ...ಗಳನ್ನು ಮಾರಿ ಒದಗಿಸಬೇಕಾಯಿತು. ಆದರೆ ...ಜನರಿಗೆ ಹಕ್ಕುಪತ್ರ ಮಾತ್ರ ಸಿಗಲಿಲ್ಲ. ಬದಲಿಗೆ ಸ್ಲಂಗಳ ಎತ್ತಂಗಡಿ, ಮನೆ ಒಡೆಯಲು ಗುರುತು ಹಾಕುವುದು ಪ್ರಾರಂಭವಾಯಿತು ನೋಡಿ.

ಪೀಣ್ಯದಲ್ಲಿ 'ಅಲೆಮಾರಿ'ಗಳ ಮೇಲೆ ಕಣ್ಣು

ಮೊದಲು ಬಿತ್ತು ಕಣ್ಣು ಪೀಣ್ಯ ಪ್ರದೇಶದ ವಿಡಿಯಾ ಕಾರ್ಖಾನೆ ಪಕ್ಕದಲ್ಲಿ 10 ವರ್ಷಗಳಿಂದ ಇದ್ದ ಅಲೆಮಾರಿ ಸಮುದಾಯದ 135 ಕುಟುಂಬಗಳ ಶೆಡ್ ಮೇಲೆ. ಇಲ್ಲಿನ ನಿವಾಸಿಗಳನ್ನು ಗುಂಡಾಗಳನ್ನು ಬಳಸಿ ಎತ್ತಂಗಡಿ ಮಾಡಿ ದನಗಳಿಗೆ ಬಡಿದಂತೆ ಬಡಿದು ಕಲ್ಲುಗಳಿಂದ ಹಲ್ಲೆ ಮಾಡಿ ಒಕ್ಕಲೆಬ್ಬಿಸಿರುತ್ತಾರೆ. ಮತ್ತೆ ರಕ್ಷಣೆ ನೀಡಬೇಕೆಂದು ಕೇಳಿದರೆ ಪೋಲೀಸನವರು, ಸ್ಥಳೀಯ ಶಾಸಕರು ಸೇರಿ ಇನ್ನೊಂದಿಷ್ಟು ದಾಂಧಲೆ ಮಾಡಿ ನಮ್ಮ ಕ್ಷೇತ್ರಕ್ಕೆ ಸ್ಲಂ ಬೇಡ, ಸ್ಲಂ ಜನರು ಬೇಡ ಎಂದು ಹೊಡೆದೋಡಿಸಿದ್ದಾರೆ. ಅಲ್ಲಿಂದ ಮಾನ್ಯ ಜಿಲ್ಲಾಧಿಕಾರಿಯವರು ಗೊಲ್ಲಹಳ್ಳಿಗೆ ಹೋಗಲು ...ಚಿಸಿರುತ್ತಾರೆ. ಗಂಟುಮೂಟೆಯೊಂದಿಗೆ ಹೊರಟ ಜನರು ಗೊಲ್ಲಹಳ್ಳಿ ಸ.ನಂ.39ರಲ್ಲಿ 9 ಎಕರೆ ಜಾಗದಲ್ಲಿ ಇಳಿಯುವ ಮೊದಲೇ ಬಿತ್ತು ಸ್ಥಳೀಯ ಶಾಸಕ ಎಂ.ಕೃಷ್ಣಪ್ಪರವರ ಗೂಂಡಾಗಳಿಂದ ಕಲ್ಲಿನ ಸುರಿಮಳೆ.

ಅಲ್ಲಿಯೂ ನಿಲ್ಲಲಾರದೆ ಮತ್ತೆ ಲಗ್ಗೆರೆಗೆ ಹೋದರೆ ಪುನಃ ಗೂಂಡಾ ದಾಳಿ ಶುರುವಾಯಿತು. ದಿಕ್ಕು ಕಾಣದ ಜನ ವಿಧಿಯಿಲ್ಲದೆ ರಸ್ತೆ ಬದಿಯಲ್ಲಿ ಒಂದು ರಾತ್ರಿ ಕಳೆದು ಮಾರನೇ ದಿನ ಸ್ಲಂ ಬೋರ್ಡ್ ಕಛೇರಿಯಲ್ಲಿ ವಾಸ್ತವ್ಯ ಹೂಡಿದಾಗ ಡಿ.ಸಿ. ಮತ್ತು ಸಂಬಂಧ ಪಟ್ಟ ಅಧಿಕಾರಿಗಳು ನೆಲಮಂಗಲ ರಸ್ತೆಯಲ್ಲಿರುವ ತಾವರೆಕೆರೆಯಿಂದ 5 ಕಿ.ಮೀ. ದೂರದಲ್ಲಿ ಯಾವುದೇ ಮನೆ ಮಠವಿಲ್ಲದ -ಬಿಬಿಎಂಪಿ ಕಸ ಹಾಕಲು ಪಡೆದಿರುವ 40 ಎಕರೆ ಗಿಡ್ಡನಹಳ್ಳಿ ಗ್ರಾಮದ ಸ.ನಂ.80 ರ ಖಾಲಿ ಜಾಗದಲ್ಲಿ ಕರೆದುಕೊಂಡು ಹೋಗಿ ಬಿಟ್ಟಿರುತ್ತಾರೆ. ಇಲ್ಲಿ ಅಲೆಮಾರಿ , ವ್ಯಾಪಾರ ಮಾಡಿ, ಕೂಲಿ ಮಾಡಿ ಬದುಕುವ ಜನರನ್ನು ಇಲ್ಲಿಗೆ ಸ್ಥಳಾಂತರಿಸಿರುವುದರಿಂದ ಕೂಲಿ ಮಾಡಲಾರದೆ, ಹೊಟ್ಟೆಗೆ ಅನ್ನವಿಲ್ಲದೆ ಹಾವು, ಚೇಳುಗಳ ಕೈಯಲ್ಲಿ ಕಚ್ಚಿಸಿಕೊಂಡು ಪಕ್ಕದಲ್ಲಿ ಉಪಯೋಗಿಸಲಾರದ ನೀರನ್ನು ಕುಡಿದು ಹಲವು ಕಾಯಿಲೆಗಳಿಂದ ನರಳುತ್ತಿದ್ದಾರೆ. ಅಲ್ಲಿನ ದಲಿತ ಸಂಘಟನೆಗಳು ಹೋರಾಟ ನಡೆಸಿದ ಪರಿಣಾಮವಾಗಿ ಸ್ಲಂ ಬೋರ್ಡ್‌ನಿಂದ ಒಂದು ಬೋರ್‌ವೆಲ್ ಹಾಕಿರುತ್ತಾರೆ. ಆದರೆ "ಮಳೆ-ಗಾಳಿ. ಸರಿಯಾದ ಸೂರಿಲ್ಲ. ಬ್ಯಾನರ್‌ಗಳಿಂದ ನಿರ್ಮಿಸಿದ ಗೂಡು, ಗಾಳಿ ಬಂದರೆ ಹಾರಿ ಹೋಗುತ್ತದೆ. ಮತ್ತೆ ತಂದು ಹಾಕುತ್ತೇವೆ. ಎಂಥ ಬದುಕು ನಮ್ಮದು?" ಅನ್ನುತ್ತಾರೆ ಅಲ್ಲಿನ ರಾಜಾರಾಂ. "ಇಲ್ಲಿ ಹಾವು, ಚೇಳು ನಾಲ್ಕು ಜನರಿಗೆ ಕಚ್ಚಿವೆ. ತಕ್ಷಣ ಕರೆದುಕೊಂಡು ಹೋಗಲು ಅಕ್ಕಪಕ್ಕ ಆಸ್ಪತ್ರೆಗಳಿಲ್ಲ. ತಾವರೆಕೆರೆಗೆ ಹೋಗಬೇಕಾದರೆ 4 ಕಿ.ಮೀ. ನೆಲಮಂಗಲಕ್ಕೆ ಹೋಗಬೇಕಾದರೆ 15 ರಿಂದ 20 ಕಿ.ಮೀ. ಆಗುತ್ತದೆ ಹೇಗೆ ಕಾಪಾಡಬೇಕು. ದೊಡ್ಡವರಿಗೆ ಕಚ್ಚಿದರೆ ಯಾವುದಾದರೂ ಮದ್ದು ನೀಡಬಹುದು. ಹಲ್ಲಿರದ ಮಕ್ಕಳಿಗೆ ಚೇಳು ಕಚ್ಚಿದರೆ ಮಕ್ಕಳು ಬದುಕಲಾರವು" ಅಂತ ಕಣ್ಣೀರು ಇಡುತ್ತಾರೆ. ನೇತ್ರಾವತಿ ಎಂಬ ಮಹಿಳೆಯ ಸ್ಥಿತಿ ಇಲ್ಲಿಗೆ ಸತ್ಯಶೋಧನ ತಂಡ ಭೇಟಿಕೊಟ್ಟಾಗ ಮನಕಲುಕುವಂತಿತ್ತು. ಅಲ್ಲಿ ದೃಶ್ಯಗಳು- ಮಕ್ಕಳಿಗೆ ಶಾಲೆ ಇಲ್ಲ. ಮಹಿಳೆಯರಿಗೆ ಶೌಚಾಲಯವಿಲ್ಲ - ನೂರೆಂಟು ಸಮಸ್ಯೆ.

ವೀರಭದ್ರನಗರದಲ್ಲಿ...


ಬ್ಯಾಟರಾಯನಪುರ ವೀರಭದ್ರನಗರದಲ್ಲಿ 253 ಗುಡಿಸಲುಗಳು ರಸ್ತೆ ಮೇಲಿದ್ದವು. ನಾವು ಏನು ಅಂತ ಕೇಳಿದರೆ ಗೊತ್ತಾಗಿದ್ದು ನೈಸ್ ಕಂಪನಿಯ ದೌರ್ಜನ್ಯಕ್ಕೆ ಒಳಗಾಗಿ ಬುಲ್ಡೋಜರ್‌ಗಳ ಮೂಲಕ ಮನೆ ಕಳೆದುಕೊಂಡ ನತದೃಷ್ಟರು ಅವರು. ಇವರಿಗೆ ರೇಷನ್ ಕಾರ್ಡ್, ಮತದಾರ ಚೀಟಿ ಇತ್ತು. ಸರ್ಕಾರದ ವತಿಯಿಂದ ಟೆಂಟ್ ಶಾಲೆ ನಡೆಯುತ್ತಿತ್ತು. ಸುಮಾರು 15 ರಿಂದ 16 ವರುಷಗಳಿಂದ ವಾಸ ಇದ್ದರು. ನೈಸ್ ಕಂಪನಿಯ ಜೊತೆ ಅಧಿಕಾರಿಗಳು ಶಾಮೀಲಾಗಿ ಭೂಮಿಯನ್ನು ಕಬಳಿಕೆ ಮಾಡಲು 253 ಕುಟುಂಬ ನೆಮ್ಮದಿ ಕಳೆದುಕೊಂಡು ಖಾಲಿ ಮಾಡಲಿ ಎಂದು ಗುಡಿಸಲಿಗೆ ಬೆಂಕಿ ಹಚ್ಚಿರುತ್ತಾರೆ. ಆಗ ಪೊಲೀಸ್ ಠಾಣೆಗೆ ದೂರು ನೀಡಿದರೆ ದೂರು ಸ್ವೀಕರಿಸಲಿಲ್ಲ. ಕಾರಣ? "ನೈಸ್ ಕಂಪನಿಯವರ ಮೇಲೆ ದೂರು ಕೊಡಬೇಡಿ. ಸುಮ್ಮನೇ ಅವರನ್ನು ಎದುರು ಹಾಕಿ ಕೊಳ್ಳಬೇಡಿ ಹಣ ಕೊಡಿಸುತ್ತೇನೆ. ಜಾಗ ಖಾಲಿ ಮಾಡಿ" ಎನ್ನುತ್ತಾರೆ ಬ್ಯಾಟರಾಯನಪುರದ ಎಸಿಪಿ ದುರ್ಗಯ್ಯ. ಇನ್ಸ್‌ಪೆಕ್ಟರ್ ರಾಜೇಂದ್ರ ಸ್ಥಳೀಯ ಜನರಿಗೆ ಬೆದರಿಸಿ ಕಳಿಸಿರುತ್ತಾರೆ. ಜಗ್ಗದ ಜನರಿಗೆ ಮತ್ತೊಮ್ಮೆ 36 ಗುಡಿಸಲಿಗೆ ಬೆಂಕಿ ಹಚ್ಚಿರುತ್ತಾರೆ. ಈ ಬಗ್ಗೆ ಸಹ ದೂರು ನೀಡಿದಾಗ ಸ್ವೀಕರಿಸಿರುವುದಿಲ್ಲ. ಆಕಸ್ಮಿಕ ಬೆಂಕಿ ಎಂದು ಕೇಸನ್ನು ಮುಚ್ಚಿ ಹಾಕಿರುತ್ತಾರೆ. ಇವರು ತೊಂದರೆ ಕೊಟ್ಟಷ್ಟು ಜನರ ಒಗ್ಗಟ್ಟು ಗಟ್ಟಿಯಾಗ ತೊಡಗಿತು. ದೌರ್ಜನ್ಯಕ್ಕೆ ಜಗ್ಗಲಿಲ್ಲ. ಮೇ 12 ನೇ ತಾರೀಖು ಬೆಳಗ್ಗೆ 6 ಗಂಟೆಗೆ ನಂದಿ ಎಂದು ಹೆಸರಿರುವ 8 ಟಿಪ್ಪರ್ 11 ಜೆ.ಸಿ.ಬಿ.ಗಳು ಬಂದು ಮಹಿಳೆಯರು ಮಕ್ಕಳನ್ನದೆ ಹೊರಗೆ ಎಳೆದು ಹಾಕಿ ಬೇಯಿಸಿಟ್ಟ ಅಡುಗೆಯನ್ನು ತೆಗೆದುಕೊಳ್ಳಲು ಬಿಡದೆ ಜೆಸಿಬಿ ಮುಖಾಂತರ ಮನೆ-ಮನೆಗಳಾಗಿಯೇ ತೆಗೆದು ತೆಗೆದು ಟಿಪ್ಪರ್‌ಗೆ ಹಾಕಿದರು. ನಾವು ಅಂಗಲಾಚಿ ಬೇಡಿಕೊಂಡರು ಗಣನೆಗೆ ತೆಗೆದುಕೊಳ್ಳದೆ, ದಲಿತ ಸಂಘಟನೆಯ ಮುಖಂಡರಾದ ಚಂದ್ರಮ್ಮ ಮತ್ತಿತರರ ಮೇಲೆ ಹಲ್ಲೆಯನ್ನು ಮಾಡಿ ಪ್ರತ್ಯೇಕ ಠಾಣೆಗಳಲ್ಲಿಟ್ಟು ಗುಡಿಸಲುಗಳನ್ನು ನೆಲಸಮ ಮಾಡಿದರು. ರಕ್ಷಣೆ ನೀಡಬೇಕಾದ ಪೋಲೀಸ್‌ನವರು ಸಹ ಮಹಿಳೆಯರು ಮಕ್ಕಳು ಎನ್ನದೆ ದನಕ್ಕೆ ಬಡಿದಂತೆ ಬಡಿದರು" ಎಂದು ನೋವಿನಿಂದ ನುಡಿಯುತ್ತಾರೆ ಚಂದ್ರಮ್ಮ. ಈ ಜಾಗಕ್ಕೆ 14-15 ವರ್ಷಗಳಿಂದ ಸ್ಥಳೀಯ ಗೂಂಡಾ ತಿಂಗಳಿಗೆ 250 ರೂ.ನಂತೆ ನೆಲದ ಬಾಡಿಗೆ ಪಡೆಯುತ್ತಿದ್ದ. ಈಗ ಕೆಐಡಿಬಿ ಜಾಗವನ್ನು ನೈಸ್ ಕಂಪನಿಗೆ ಗುತ್ತಿಗೆ ನೀಡಿರುತ್ತಾರೆ. ಹೀಗೆ ಒಬ್ಬರ ಮೇಲೆ ಒಬ್ಬರು ಹೇಳುತ್ತಾ ಮನೆಗಳನ್ನು ನೆಲಸಮ ಮಾಡಿ ರಸ್ತೆಗಳಲ್ಲಿ ಗುಡಿಸಲು ಹಾಕಿ ಹೋರಾಟ ಮಾಡುವ ಪರಿಸ್ಥಿತಿಯನ್ನು ಬಿಜೆಪಿ ಸರ್ಕಾರ ತಂದೊಡ್ಡಿದೆ.



ಎದೆಗುಂದದ ಹೋರಾಟ

ಎದೆಗುಂದದೆ ರಾತ್ರಿ-ಹಗಲೂ ದಲಿತ ಸಂಘಟನೆಗಳ ನೇತೃತ್ವದಲ್ಲಿ ರಸ್ತೆ ಬದಿಯಲ್ಲಿ ಹೋರಾಟ ಮಾಡುತ್ತಿರುವ ಕಾನೂನು ಸಮರ ಸಹ ನಡೆಸುತ್ತಿರುವುದರಿಂದ ಇತ್ತೀಚಿಗೆ 02.06.09ರಂದು ಕೆಂಗೇರಿ ಬಳಿಯ "ಭೀಮನಕುಪ್ಪೆ ಸ.ನಂ.73ರಲ್ಲಿ 10 ಎಕರೆ ಸರ್ಕಾರಿ ಜಾಗವನ್ನು ಮಂಜೂರು ಮಾಡಿರುತ್ತಾರೆ. ಇಲ್ಲಿಯ ಜನರು ಭೀಮನಕುಪ್ಪೆಯಲ್ಲಿ ಸರ್ಕಾರ ವಾಸಿಸಲು ಎಲ್ಲಾ ಸೌಲಭ್ಯ ಮಾಡಿಸಿಕೊಟ್ಟರೆ ಮಾತ್ರ ನಾವು ಈ ಜಾಗ ಖಾಲಿ ಮಾಡುತ್ತೇವೆ. ಇಲ್ಲದಿದ್ದರೆ ಅಲೆಮಾರಿ ಜನರಿಗೆ ಬಂದ ಗತಿಯನ್ನೆ ನಿಮಗೂ ಬಿಜೆಪಿ ಶಾಸಕರು ಮಾಡುತ್ತಾರೆ" ಅನ್ನುತ್ತಾರೆ ರಾಮಚಂದ್ರಪ್ಪ, ಇಲ್ಲಿಯೂ ಸಹ ವಾಸ ಮಾಡಲು ಅನುಕೂಲವಿಲ್ಲದ ಕಾರಣ ಬಸವಲಿಂಗಮ್ಮ ಎಂಬ ಮಹಿಳೆಗೆ ಇಲಿ ಕಚ್ಚಿದ್ದು, ಗಾಯ ಮಾಸದೆ ಇರುವುದನ್ನು ತೋರಿಸಿ ಕಣ್ಣಲ್ಲಿ ನೀರಿಟ್ಟರು. ಹೀಗೆ ಕಿಮ್ಸ್ ಆಸ್ಪತ್ರೆ ಎದುರಿಗೆ ಬಿದಿರಿನ ವಸ್ತು ತಯಾರು ಮಾಡಿ ಬದುಕುತ್ತಿದ್ದ 60 ಕುಟುಂಬಗಳ ಎತ್ತಂಗಡಿ, ಬನ್ನೇರಘಟ್ಟ ರಸ್ತೆ ಹಾಗೂ ಜೆಪಿ ನಗರದ ರಿಂಗ್ ರಸ್ತೆಯಲ್ಲಿ 80 ಕುಟುಂಬಗಳ ಎತ್ತಂಗಡಿ ಈಗ ಕೆ.ಆರ್.ಪುರಂ ಭಾಗದ ವಿಜಿನಾಪುರ ಸ್ಲಂನಲ್ಲಿ ಮನೆಗಳ ಒಡೆಯಲು ಗುರುತು ಹಾಕಿರುವುದು, ಹಕ್ಕು ಪತ್ರ ನೀಡುವುದಾಗಿ ಸುಳ್ಳು ಭರವಸೆ ನೀಡಿ ಜನರ ನೆಮ್ಮದಿ ಕೆಡಿಸುವುದು ನಡೆದಿದೆ. ತಕ್ಷಣ ಸಿಪಿಐ(ಎಂ) ಪಕ್ಷದಿಂದ ಬಿಜೆಪಿ ಸರ್ಕಾರದ ಜನವಿರೋಧಿ ಧೋರಣೆಯನ್ನು ಖಂಡಿಸಿ, 09.06.09ರಂದು ಗೌರಮ್ಮ ರಮೇಶ್ ನೇತೃತ್ವದಲ್ಲಿ ಹೋರಾಟ ನಡೆಸಿ ಬಿಬಿಎಂಪಿ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸುಮಾರು 150 ರಿಂದ 200 ಜನ ಭಾಗವಹಿಸಿದ್ದರು. ಹೀಗೆ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ 'ನೆಮ್ಮದಿ ನಾರಾಯಣ' ದ ಹೆಸರಿನಲ್ಲಿ ಜನರ ನೆಮ್ಮದಿಯನ್ನು ಕೆಡಿಸುವ ಪ್ರಯತ್ನವನ್ನು ಮಾಡುತ್ತಿದೆ. ಇದಕ್ಕೆ ಸ್ಲಂ ಜನರ ಹೋರಾಟ ತೀವ್ರವಾಗಬೇಕಿದೆ. ಇಂತಹ ಅಕ್ರಮ ಕೆಲಸದಲ್ಲಿ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಂಡು ಬಿಬಿಎಂಪಿ ಚುನಾವಣೆಯಲ್ಲಿ ಪಾಲಿಕೆಯನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಹುನ್ನಾರ ನಡೆಯುತ್ತಿದೆ.

ಕಾಮ್ರೆಡ್ ಇಎಂಎಸ್ ಜನ್ಮಶತಾಬ್ಧಿ



ಇಎಂಎಸ್‌ರವರ ಕ್ರಾಂತಿಕಾರಿ ಜೀವನದಲ್ಲಿ ಐದು ವಿಶಿಷ್ಟತೆಗಳನ್ನು ಕಾಣಬಹುದು. ಕಮ್ಯುನಿಸ್ಟ್ ಮತ್ತು ಎಡಪಂಥೀಯ ಆಂದೋಲನಕ್ಕೆ ಅವರ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕೆಲಸ ಒಂದು ಶ್ರೀಮಂತ ಮತ್ತು ಶಾಶ್ವತ ಬಳುವಳಿ. ಆ ಬಳುವಳಿಯ ಸಾರವೆಂದರೆ ಮಾರ್ಕ್ಸ್‌ವಾದಿ ತತ್ವಗಳ ಅಧ್ಯಯನ, ಸಮಾಜದ ಜೀವಂತ ಮತ್ತು ಮೂರ್ತ ಪರಿಸ್ಥಿತಿಗಳಿಗೆ ಅವುಗಳ ಅನ್ವಯ, ಸಮಾಜವಾದದ ವಿಮೋಚಕ ಗುರಿಯ ಬಗ್ಗೆ ದೃಢ ನಂಬಿಕೆ ಮತ್ತು ಜನಗಳೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಳ್ಳುವುದು ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರಟ್ ಇಎಂಎಸ್ ಅವರ ಜನ್ಮಶತಾಬ್ಧಿ ಸಂದರ್ಭದ ಈ ವಿಶೇಷ ಲೇಖನದಲ್ಲಿ.

ಒಬ್ಬ ಅಸಾಧಾರಣ ಕಮ್ಯುನಿಸ್ಟ

ಪ್ರಕಾಶ್ ಕಾರಟ್


ಜೂನ್ 13, 2009-ಭಾರತದ ಕಮ್ಯುನಿಸ್ಟ್ ಆಂದೋಲನದ ಮೇಲೆ ಅಚ್ಚಳಿಯದ ಛಾಪು ಮೂಡಿಸಿದ ಇಎಂಎಸ್ ನಂಬೂದಿರಿಪಾಡ್‌ರವರ ಜನ್ಮ ಶತಾಬ್ಧಿ ದಿನ. 1909ರಲ್ಲಿ ಹುಟ್ಟಿದ ಇಎಂಎಸ್‌ರವರ ಅಸಾಧಾರಣ ಬದುಕು ಮತ್ತು ಕೆಲಸ ಇಡೀ 20ನೇ ಶತಮಾನದ ಭಾರತದ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಹಾಸುಹೊಕ್ಕಾಗಿದೆ.

ಯುವ ವಿದ್ಯಾರ್ಥಿಯಾಗಿ ಅವರು ತನ್ನ ಸಂಪ್ರದಾಯಶರಣ ನಂಬೂದಿರಿ ಸಮುದಾಯದಲ್ಲಿ ಸಾಮಾಜಿಕ ಸುಧಾರಣೆಗಳ ಮುಂಚೂಣಿಯಲ್ಲಿದ್ದರು. ಒಬ್ಬ ಗಾಂಧಿವಾದಿ ಕಾಂಗ್ರೆಸಿಗನಾಗಿ ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ನಾಗರಿಕ ಅಸಹಕಾರ ಆಂದೋಲನದಲ್ಲಿ ಭಾಗವಹಿಸಿದರು, ಜೈಲಿಗೂ ಹೋದರು. 1934ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ರಚನೆಗೊಂಡಾಗ ಅವರು ಅದರ ಸ್ಥಾಪಕ ಸದಸ್ಯರಲ್ಲಿ ಒಬ್ಬರಾದರು. ಮಲಬಾರ್ ಪ್ರದೇಶದಲ್ಲಿ ಊಳಿಗಮಾನ್ಯ ಪದ್ಧತಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ರೈತ ಆಂದೋಲನದ ಒಬ್ಬ ಪ್ರಮುಖ ಸಂಘಟಕರಾದರು. 1936ರ ವೇಳೆಗೆ ಕಮ್ಯುನಿಸ್ಟ್ ಪಕ್ಷ ಸೇರಿದ ಅವರು ಕೇರಳದ ಐದು ಸದಸ್ಯರ ಮೊದಲ ಗುಂಪಿನಲ್ಲೊಬ್ಬರು.

ಹೀಗೆ ಒಬ್ಬ ಕಮ್ಯುನಿಸ್ಟನಾಗಿ ಅಸಾಮಾನ್ಯ ಪಯಣವನ್ನು ಆರಂಭಿಸಿದ ಇಎಂಎಸ್ ಕಮ್ಯುನಿಸ್ಟ್ ಆಂದೋಲನದ ಅಗ್ರಮಾನ್ಯ ಮುಂದಾಳುವಾದರು. ಒಬ್ಬ ಮಾರ್ಕ್ಸ್‌ವಾದಿ ಚಿಂತಕನಾಗಿ ಮತ್ತು ಕಮ್ಯುನಿಸ್ಟ್ ಆಂದೋಲನಕ್ಕೆ ಅವರ ಮಹಾನ್ ಕೊಡುಗೆಯ ಸರಿಯಾದ ಮೌಲ್ಯಮಾಪನ ಒಂದು ಸಣ್ಣ ಲೇಖನದಲ್ಲಿ ಸಾಧ್ಯವಿಲ್ಲ. ಆದರೆ ಅವರ ಕ್ರಾಂತಿಕಾರಿ ಜೀವನದಲ್ಲಿ ಐದು ವಿಶಿಷ್ಟತೆಗಳನ್ನು ಗುರುತಿಸಬಹುದು.

ಸೃಜನಶೀಲ ಅಧ್ಯಯನ

ಮೊದಲನೆಯದಾಗಿ, ಇಎಂಎಸ್ ಮಾರ್ಕ್ಸ್‌ವಾದಿ ಸಿದ್ಧಾಂತದ ಸೃಜನಾತ್ಮಕ ಅನ್ವಯ ಮತ್ತು ಆಚರಣೆಯಲ್ಲಿ ಎಲ್ಲಾ ಕಮ್ಯುನಿಸ್ಟ್ ಮುಖಂಡರಲ್ಲಿ ಸರ್ವಶ್ರೇಷ್ಠರು. ಅವರಿಗೆ ತನ್ನ ಅಸಾಧಾರಣ ಬೌದ್ಧಿಕ ಸಾಮರ್ಥ್ಯದಿಂದಾಗಿ ಮಾರ್ಕ್ಸ್‌ವಾದದ ಸಾರವನ್ನು ಗ್ರಹಿಸಿ ಅದನ್ನು ಭಾರತದ ಪರಿಸ್ಥಿತಿಗಳಿಗೆ ಸೃಜನಾತ್ಮಕವಾಗಿ ಅನ್ವಯಿಸುವುದು ಸಾಧ್ಯವಾಯಿತು. ಅವರ ಈ ಅಪೂರ್ವ ಸಾಮರ್ಥ್ಯದಿಂದಾಗಿ ಕೇರಳದ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳ ಒಂದು ಮೂರ್ತ ಅಧ್ಯಯನದ ನಂತರ ಅಲ್ಲಿನ ಭೂಮಾಲಕತ್ವದ ನಿರ್ಮೂಲನಕ್ಕೆ ಒಂದು ಸೈದ್ಧಾಂತಿಕ ತಳಹದಿ ಹಾಕಿದವರಲ್ಲಿ ಅವರು ಮೊದಲಿಗರಾದರು. ಸಿದ್ಧಾಂತವನ್ನು ಆಚರಣೆಗಿಳಿಸುವ ಅವರ



ಅಧ್ಯಯನಶೀಲ ಇ.ಎಂ.ಎಸ್.

ಸಾಮರ್ಥ್ಯವನ್ನು ಬೇರೆ ಯಾರೂ ಸರಿಗಟ್ಟಲಾರರು. ಮಲಬಾರ್‌ನ ಜೆನ್ಮಿ-ಭೂಮಾಲಕ ಪದ್ಧತಿ ಕುರಿತ ಅವರ ಸಿದ್ಧಾಂತ ಅಲ್ಲಿ ಬೆಳೆಯುತ್ತಿದ್ದ ರೈತ ಆಂದೋಲನಕ್ಕೆ ಅದರ ಕೆಲಸದಲ್ಲಿ ಮಾರ್ಗದರ್ಶನ ಒದಗಿಸಲು ಆಧಾರವನ್ನು ಕಲ್ಪಿಸಿತು. ಕೃಷಿ ಸಂಬಂಧಗಳು ಮತ್ತು ಕಾರ್ಷಿಕ ಕ್ರಾಂತಿಯ ಪ್ರಜಾಸತ್ತಾತ್ಮಕ ಹೂರಣದ ಬಗ್ಗೆ ಅವರ ನಿರೂಪಣೆ ಮುಂದೆ 1957ರಲ್ಲಿ ಅವರು ಕೇರಳದ ಮೊದಲ ಕಮ್ಯುನಿಸ್ಟ್ ಮಂತ್ರಿಮಂಡಲದ ಮುಖ್ಯ ಮಂತ್ರಿಯಾದಾಗ ಆರಂಭಿಸಿದ ಪಥಪ್ರದರ್ಶಕ ಭೂಸುಧಾರಣೆಗಳಿಗೆ ಅಡಿಪಾಯ ಹಾಕಿತು.

ಮಲೆಯಾಳಿಗಳ ಭಾಷಾ ದೇಶೀಯತೆಯ ರಚನೆಯ ಮತ್ತು ಕೇರಳ ಸಮಾಜದ ವಿಕಾಸದ ಅಧ್ಯಯನದ ಮೂಲಕ ಇಎಂಎಸ್ ಸಮಾಜದ ಮತ್ತು ಇತಿಹಾಸದ ಒಂದು ಮಾರ್ಕ್ಸ್‌ವಾದಿ ವಿಶ್ಲೇಷಣೆಯನ್ನು ಹೇಗೆ ನಡೆಸಬೇಕು ಎಂದು ಕೂಡಾ ತೋರಿಸಿ ಕೊಟ್ಟರು. ಅವರ 'ಐಕ್ಯ ಕೇರಳ' ಮತ್ತು 'ಕೇರಳದಲ್ಲಿ ದೇಶೀ ಪ್ರಶ್ನೆ' ಎಂಬ ಅಧ್ಯಯನ ಸ್ವಾತಂತ್ರ್ಯಾನಂತರದ ಭಾರತದಲ್ಲಿ ರಾಜ್ಯಗಳ ಭಾಷಾವಾರು ಪುನರ್ರಚನೆಗಾಗಿ ನಡೆದ ಪ್ರಮುಖ ಪ್ರಜಾಪ್ರಭುತ್ವ ಆಂದೋಲನಕ್ಕೆ ಆಧಾರವಾಯಿತು. ಮಾರ್ಕ್ಸ್‌ವಾದದಲ್ಲಿ ಭದ್ರವಾಗಿ ಬೇರೂರಿದ್ದರಿಂದಾಗಿ ಇಎಂಎಸ್ ಭಾರತದ ರಾಜಕೀಯ ಮತ್ತು ಸಮಾಜದ ಎಲ್ಲಾ ಪ್ರಮುಖ ಪ್ರಶ್ನೆಗಳಲ್ಲಿ ಮೌಲಿಕ ಕೊಡುಗೆಗಳನ್ನು ನೀಡಿದರು. ಇತಿಹಾಸ, ಸಮಾಜ ಮತ್ತು ಸಂಸತಿಯನ್ನು ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ಅತ್ಯಂತ ಯಥಾರ್ಥ ರೀತಿಯಲ್ಲಿ ಅವರು ವಿಶ್ಲೇಷಿಸಿದರು. ಈ ಮಧ್ಯಪ್ರವೇಶಗಳು ಮತ್ತು ಅಭಿಪ್ರಾಯಗಳು ಎಡಪಂಥೀಯ ಬುದ್ಧಿಜೀವಿಗಳಲ್ಲಿ ಮಾತ್ರವಲ್ಲ, ಸಮಾಜದ ಎಲ್ಲಾ ಚಿಂತನಶೀಲ ವಿಭಾಗಗಳ ನಡುವೆ ಚರ್ಚೆಗಳು, ವಾದಗಳಿಗೆ ಒತ್ತಾಸೆ ನೀಡಿದಂತಹವುಗಳು.

ಹಿಂದೆ ವಸಾಹತುಗಳಾಗಿದ್ದ ದೇಶಗಳಲ್ಲಿ ಅಥವಾ ಅಭಿವೃದ್ಧಿಶೀಲ ಜಗತ್ತಿನಲ್ಲಿ ಬೇರೆ ಯಾವುದೇ ಕಮ್ಯುನಿಸ್ಟ್ ಮುಂದಾಳು ಮಾರ್ಕ್ಸ್‌ವಾದಿ ಸಿದ್ಧಾಂತದ ಬೆಳವಣಿಗೆಗೆ ಇಂತಹ ಕೊಡುಗೆ ನೀಡಿಲ್ಲ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಒಬ್ಬ ಮಾರ್ಕ್ಸ್‌ವಾದಿ- ಲೆನಿನ್‌ವಾದಿಯಾಗಿ ಇಎಂಎಸ್ ವಿಶ್ವ ಸಮಾಜವಾದ ಮತ್ತು ಅಂತರ್ರಾಷ್ಟ್ರೀಯತೆಗೆ ಆಳವಾದ ಬದ್ಧತೆ ಹೊಂದಿದ್ದರು. ಆದರೆ ಅವರು ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದಲ್ಲಿ ದಶಕಗಳ ಅನುಭವದ ನಂತರ ಮಾಸ್ಕೋದಿಂದ ಹೊಮ್ಮುವ ಮಾರ್ಗದತ್ತ ಲಕ್ಷ್ಯ ಹರಿಸುವ ಅಭ್ಯಾಸವನ್ನು ನಿಲ್ಲಿಸಿದ ಸಿಪಿಐ(ಎಂ) ಮುಖಂಡತ್ವದ ಭಾಗವಾಗಿದ್ದರು. ಇಎಂಎಸ್ ಮತ್ತು ಅವರ ಸಂಗಾತಿಗಳು ಭಾರತೀಯ ಕ್ರಾಂತಿಯ ರಣನೀತಿ ಮತ್ತು ಕಾರ್ಯತಂತ್ರವನ್ನು ವಿಕಾಸಗೊಳಿಸಲು ತಮ್ಮ ಸ್ವಂತ ಅನುಭವಗಳ ಆಧಾರದಲ್ಲಿ ಮಾರ್ಕ್ಸ್‌ವಾದ- ಲೆನಿನ್‌ವಾದವನ್ನು ಅನ್ವಯಿಸುವ ಬಹಳ ಪ್ರಯಾಸದ ಕೆಲಸವನ್ನು ಆರಂಭಿಸಿದರು. ಈ ಪ್ರಕ್ರಿಯೆಯಲ್ಲಿ ಇಎಂಎಸ್ ಒಂದು ಮಹತ್ವದ ಪಾತ್ರ ವಹಿಸಿದರು.

ಬದಲಾವಣೆಗೆ ಒಳನೋಟಗಳು

ಎರಡನೆಯ ಮಹತ್ವಪೂರ್ಣ ವೈಶಿಷ್ಟ್ಯವೆಂದರೆ ಸಂಸದೀಯ ವೇದಿಕೆಗಳಲ್ಲಿ ಕಮ್ಯುನಿಸ್ಟ್ ಪಕ್ಷದ ಭಾಗವಹಿಸುವಿಕೆ ಕುರಿತಂತೆ ಸರಿಯಾದ ಕಣ್ಣೋಟವನ್ನು ಬೆಳೆಸುವಲ್ಲಿ ಇಎಂಎಸ್ ತೋರಿದ ದಾರಿ. ಅವರೇ ಸ್ವತಃ 1957ರಲ್ಲಿ ಭಾರತದಲ್ಲೇ ಮೊತ್ತಮೊದಲ ಕಮ್ಯುನಿಸ್ಟ್ ಮಂತ್ರಿಮಂಡಲದ ಮುಖ್ಯಮಂತ್ರಿಯಾಗಿ ಸರಕಾರದಲ್ಲಿ ಕಮ್ಯುನಿಸ್ಟ್ ಭಾಗವಹಿಸುವಿಕೆಯ ದಾರಿಯನ್ನು ರೂಪಿಸಿದರು.



ಕೇರಳದ ಸಚಿವಾಲಯದಿಂದ ಸಹೋದ್ಯೋಗಿಗಳೊಂದಿಗೆ ಹೊರಬರುತ್ತಿರುವ ಇಎಂಎಸ್

ಕಮ್ಯುನಿಸ್ಟ್ ಸರಕಾರದ 28 ತಿಂಗಳ ಕಾರ್ಯಾವ[ಧಿ] ಭೂಸುಧಾರಣಾ ಕ್ರಮಗಳು, ಪ್ರಜಾಸತ್ತಾತ್ಮ[ಕ] ವಿಕೇಂದ್ರೀಕರಣ ಮತ್ತು ಜನಪರ ಪೋಲೀಸ್ ನೀತಿಯನ್ನು ಅಂಗೀಕರಿಸಿ ಒಂದು ಹೊಸ ದಾರಿಯನ್ನು ತುಳಿಯಿತು. ಇಎಂಎಸ್ ಕೊನೆಯ ವರೆಗೂ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ದೃಢ ಬದ್ಧತೆ ಹೊಂದಿದ್ದರು. ಒಬ್ಬ ಪಕ್ಷದ ಮುಂದಾಳುವಾಗಿಯೂ ಮತ್ತು ಒಬ್ಬ ಆಡಳಿತಗಾರನಾಗಿಯೂ ಇಎಂಎಸ್ ಕೇಂದ್ರದಿಂದ ರಾಜ್ಯಗಳಿಗೆ, ಮತ್ತು ಎಲ್ಲಕ್ಕಿಂತ ಕೆಳಗೆ ಪಂಚಾಯತುಗಳ ವರೆಗೂ ಒಂದು ಹೆಚ್ಚು ಒಕ್ಕೂಟ ಸ್ವರೂಪದ ಮತ್ತು ವಿಕೇಂದ್ರೀಕೃತ ವ್ಯವಸ್ಥೆಯನ್ನು ಪರಿಕಲ್ಪಿಸಿದ[ರು] ಮತ್ತು ಅದನ್ನು ಕಾರ್ಯರೂಪ[ಕ್ಕೆ] ತರಲು ಕೆಲಸ ಮಾಡಿದರು. ಈ ಎಡ ಕಣ್ಣೋಟವನ್ನು ಸಾರ್ವಜನಿಕ ನೀತಿ ನಿರ್ಧಾರಣೆಯಾಗಿ ಕಾರ್ಯರೂಪಕ್ಕೆ ಇಳಿಸುವಲ್ಲಿ ಅತಿ ಹೆಚ್ಚಿನ ಕೆಲಸ ಮಾಡಿದವರು ಇಎಂಎಸ್. ಸರಕಾರದಲ್ಲಿ ಕಮ್ಯುನಿಸ್ಟರ ಭಾಗವಹಿಸುವಿಕೆಯ ಸರಿಯಾದ ಪಾಠಗಳನ್ನು ಕಲಿತು ಪರಿಷ್ಕರಣ ವಾದದಿಂದ ಮತ್ತು ಸಂಸದೀಯ ವಾದದಿಂದ ಸ್ಪಷ್ಟವಾಗಿ ಪ್ರತ್ಯೇಕಿಸಿಕೊಂಡಿದ್ದರ ಕೀರ್ತಿಯೂ ಇಎಂಎಸ್‌ರವರಿಗೆ ಸಲ್ಲುತ್ತದೆ. ಅವರು ಇದನ್ನು ವರ್ಗ ಹೋರಾಟದ ಭಾಗವಾಗಿ ಕಂಡರು, ಸರಕಾರದಲ್ಲಿ ಭಾಗವಹಿಸುವಿಕೆಯ ಜತೆಯಲ್ಲಿ ಕಾರ್ಮಿಕ ವರ್ಗದ ಆಂದೋಲನವನ್ನು ಬಲಗೊಳಿಸುವ ಸಂಸದೀಯೇತರ ಕೆಲಸವೂ ನಡೆಯಬೇಕು ಎಂದು ಅವರು ಪ್ರತಿಪಾದಿಸಿದರು.

ಮೂರನೇ ವೈಶಿಷ್ಟ್ಯವೆಂದರೆ ಜಾತಿ ಮತ್ತು ವರ್ಗಸಂಬಂಧಗಳ ಮಾರ್ಕ್ಸ್‌ವಾದಿ ತಿಳುವಳಿಕೆಗೆ ಇಎಂಎಸ್‌ರವರ ಮೌಲಿಕ ಕೊಡುಗೆ. 20ನೇ ಶತಮಾನದ ಆರಂಭದ ದಶಕಗಳಲ್ಲಿ ಕೇರಳ ಸಮಾಜ[ದ] ಜಾತಿ ವ್ಯವಸ್ಥೆಗಳನ್ನು ವಿಶ್ಲೇಷಿಸಿ ಜಾತಿ ಸಂರಚನೆಗಳ ವರ್ಗ ಹೂರಣವನ್ನು ಹೊರಗೆಳೆದು ಈ ಕುರಿತಂತೆ

ಪುಟ 12 ಕ್ಕೆ

ಸುಪ್ರೀಂಕೋರ್ಟ್‌ನ ವಿಶೇಷ ತನಿಖಾ ತಂಡದ ತನಿಖೆ

ಅಪರಾಧಿ ನಂಬರ್ ಒನ್ ನರೇಂದ್ರ ಮೋದಿ ತಳಮಳ

ಬಿಜೆಪಿಯ ಭವಿಷ್ಯದ ಪ್ರಧಾನಿ ಎಂದು ಬಿಂಬಿಸಲಾಗುತ್ತಿರುವ ನರೇಂದ್ರಮೋದಿಯು 2002 ರ ಭೀಕರ ಹತ್ಯಾಕಾಂಡಗಳಲ್ಲಿ ವಹಿಸಿದ ಪಾತ್ರದ ಕುರಿತು ಹೊಸ ಹೊಸ ಅಘಾತಕಾರಿ ಮಾಹಿತಿಗಳು ಹೊರಬೀಳುತ್ತಿವೆ. ಆ ಬಗ್ಗೆ ಸುಪ್ರೀಂಕೋರ್ಟ್‌ನ ವಿಶೇಷ ತನಿಖಾ ತಂಡದ ತನಿಖೆಯೂ ಆರಂಭವಾಗಿದೆ.



2002ರಲ್ಲಿ ಆರ್.ಎಸ್.ಎಸ್ ಮತ್ತು ಭಜರಂಗಿಗಳು ಗುಜರಾತಿನ ಬಿಜೆಪಿ ಸರ್ಕಾರದ ನಾಯಕತ್ವದಲ್ಲಿ ನಡೆಸಿದ ಕೋಮುಗಲಭೆ ಮತ್ತು ನರಮೇಧವನ್ನು ತಡವಾಗಿಯಾದರೂ ಗಂಭೀರವಾಗಿ ಕೈಗೆತ್ತಿಕೊಂಡಿರುವ ಸುಪ್ರೀಂ ಕೋರ್ಟ್, ಈ ನರಮೇಧದಲ್ಲಿ ಗುಜರಾತ್ ಮುಖ್ಯಮಂತ್ರಿ ನರೇಂದ್ರಮೋದಿಯ ಪಾತ್ರದ ಬಗ್ಗೆ ತನಿಖೆ ನಡೆಸುವ ಸಲುವಾಗಿ ವಿಶೇಷ ತನಿಖಾ ತಂಡವನ್ನು (ಎಸ್.ಐ.ಟಿ) ರಚಿಸಿ ಅದಕ್ಕೆ ಹಲವು ಅಧಿಕಾರ ನೀಡಿದೆ. ಅದು ತಾನಿಚ್ಛಿಸುವ ತನಿಖಾಧಿಕಾರಿಗಳನ್ನು ಮತ್ತು ನ್ಯಾಯವಾದಿಗಳನ್ನು ನೇಮಿಸಿಕೊಳ್ಳುವ, ಬಯಸಿದವರ ಮೇಲೆ ವಿಚಾರಣೆ ನಡೆಸುವ, ಪ್ರತ್ಯೇಕ ಶೀಘ್ರ ವಿಲೇವಾರಿ ಕೋರ್ಟ್‌ಗಳನ್ನು ರಚಿಸಿ ವಿಚಾರಣೆ ನಡೆಸುವ ಮತ್ತು ಅದಕ್ಕೆ ಬೇಕಿರುವ ಎಲ್ಲ ಸೌಲಭ್ಯ, ಸಹಕಾರಗಳನ್ನು ಅಲ್ಲಿಯ ಹೈಕೋರ್ಟ್‌ನಿಂದ ಪಡೆಯುವ ಅಧಿಕಾರಗಳನ್ನು ಹೊಂದಿದೆ. ಮುಸ್ಲಿಮರ ಸಮಾಧಿಯ ಮೇಲೆ ಅಧಿಕಾರದ ಗದ್ದುಗೆ ನಡೆಸುತ್ತಿರುವ ಗುಜರಾತಿನ ಮುಖ್ಯಮಂತ್ರಿ ನರಹಂತಕ ಮೋದಿಯ ಮೇಲೆ 100 ಕ್ಕೂ ಹೆಚ್ಚು ಆರೋಪಗಳನ್ನು ಸುಪ್ರೀಂಕೋರ್ಟ್ ನೇಮಿಸಿರುವ ಆರ್.ಕೆ. ರಾಘವನ್ ನೇತೃತ್ವದ ವಿಶೇಷ ತನಿಖಾ ತಂಡ ಪಟ್ಟಿ ಮಾಡಿದೆ. ಆ ಗಲಭೆಯ ಸಮಯದಲ್ಲಿ ಮರಣಹೊಂದಿದ ಕಾಂಗ್ರೆಸ್ಸಿನ ಮಾಜಿ ಸಂಸದ ಎಹ್ಸಾನ್ ಜಾಫ್ರಿಯವರ ಪತ್ನಿ ಜಾಕಿಯಾ ಜಾಫ್ರಿಯವರ ದೂರು ಆಧರಿಸಿ ಸುಪ್ರೀಂಕೋರ್ಟ್ ವಿಶೇಷ ತನಿಖಾ ತಂಡಕ್ಕೆ ನಿರ್ದೇಶನ ನೀಡಿತ್ತು, ಅದರಂತೆ ವಿಶೇಷ ತನಿಖಾ ತಂಡದ ಮುಖ್ಯಸ್ಥ ರಾಘವನ್ ಮೊದಲಿಗೆ ಜಾಕಿಯಾ ಜಾಫ್ರಿಯವರೊಂದಿಗೆ ಮಾತುಕತೆ ನಡೆಸುವ ಮೂಲಕ ತನಿಖೆ ಆರಂಭಿಸಿದ್ದಾರೆ.

ಗೋಮುಖ ವ್ಯಾಘ್ರನ ಮುಖವಾಡ ಬಯಲು

2002ರ ಫೆಬ್ರುವರಿ 27ರಂದು ಗೋಧ್ರಾದಲ್ಲಿ ಬೆಂಕಿ ಹೊತ್ತಿಕೊಂಡ ಸಬರಮತಿ ಎಕ್ಸ್‌ಪ್ರೆಸ್ ರೈಲಿನ ಘಟನಾವಳಿಯನ್ನು ಗೋಧ್ರಾದ ಜಿಲ್ಲಾಧಿಕಾರಿಯು ಅದೊಂದು ಅಪಘಾತವೆಂದು ವರದಿ ಮಾಡಿದ್ದರು. ಅದರಂತೆ ಅಂದೇ ಸಾಯಂಕಾಲ 4.00ಕ್ಕೆ ಸಂಸತ್ತಿನಲ್ಲಿ ಅಧಿಕೃತ ಹೇಳಿಕೆ ನೀಡಿದ್ದ ಅಂದಿನ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರು ಕೂಡ ಇದನ್ನೇ ಪುನರುಚ್ಚರಿಸಿದ್ದರು. ಆದರೆ ಅದೇ ದಿನ ಗೋಧ್ರಾದಲ್ಲಿ ಬಂದಿಳಿದ ನರೇಂದ್ರ ಮೋದಿಯು ವಿಶ್ವ ಹಿಂದೂ ಪರಿಷತ್ ನಾಯಕರೊಡಗೂಡಿ ಸಭೆ ನಡೆಸಿದ ನಂತರ ಸಂಜೆ 7.30ರಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ "ಸಬರ್‌ಮತಿ ಎಕ್ಸ್‌ಪ್ರೆಸ್ ರೈಲು ದುರಂತವು ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐ.ಎಸ್.ಐ ಹೆಣೆದಿರುವ ದುಷತ್ಯವಾಗಿದ್ದು ಅದಕ್ಕೆ ಸ್ಥಳೀಯ ಗೋಧ್ರಾ ಮುಸ್ಲಿಮರ ಕೈವಾಡವಿದೆಯೆಂದು" ಹೇಳಿಕೆ ನೀಡಿದರು. ನಂತರದಲ್ಲಿ ಮೋದಿಯ ಪರಮಾಪ್ತ ಗುರುಗಳೂ ಮತ್ತು ಅಂದಿನ ಗೃಹಮಂತ್ರಿಯೂ ಆದ ಎಲ್.ಕೆ. ಅಡ್ವಾನಿಯವರು ಕೂಡ ಈ ಘಟನೆಯ ಹಿಂದೆ ಪಿತೂರಿಯಿದೆಯೆಂದು ಹೇಳಿಕೆ ನೀಡಿದರು. ಆದರೆ ಇವತ್ತಿನವರೆಗೂ ಕೂಡ ಇವರು ಹೇಳಿರುವ ಯಾವೊಂದು ಪಿತೂರಿಯೂ ಕೂಡ ಸಾಬೀತಾಗಿಲ್ಲ.

ಗೋಧ್ರಾದಲ್ಲಿ ರೈಲು ಅಪಘಾತ ಸಂಭವಿಸಿ ಬೆಂಕಿತಗುಲಿದ ಬೋಗಿಗಳನ್ನು ಅಹಮದಾಬಾದಿಗೆ ವರ್ಗಾಯಿಸಿ ಅವುಗಳಿಂದ ಹೆಚ್ಚಿನ ಕೋಮು ಕಿಚ್ಚನ್ನು ಹತ್ತಿಸಲು ಮೋದಿ ಬಯಸಿದ್ದರು. ಆದರೆ ಜಿಲ್ಲಾ ನ್ಯಾಯಾಧೀಶರು ಇದನ್ನು ವಿರೋಧಿಸಿದ್ದರಿಂದಾಗಿ, ಮೋದಿ ಮತ್ತೊಂದು ತಂತ್ರ ಹೂಡಿದರು. ಬೆಂಕಿಗಾಹುತಿಯಾಗಿದ್ದ ಮೃತದೇಹಗಳನ್ನು ವಿಶ್ವ ಹಿಂದೂ ಪರಿಷತ್ತಿನ ರಾಜ್ಯ ಪ್ರಧಾನ ಕಾರ್ಯದರ್ಶಿಗೆ ಹಸ್ತಾಂತರ ಮಾಡಬೇಕೆಂದು ಅವುಗಳನ್ನು ಮೋಟಾರು ಬೈಕುಗಳ ಮೂಲಕ ಮೆರವಣಿಗೆ ಮಾಡಲಾಯಿತು. ಇದನ್ನು ಮಾರನೇ ದಿನ ಫೆಬ್ರುವರಿ 28ರಂದು ಗುಜರಾತಿ ದಿನಪತ್ರಿಕೆ 'ಸಂದೇಶ್' ಬಣ್ಣ-ಬಣ್ಣದ ಫೋಟೋಗಳೊಡನೆ ಪ್ರಚೋದನಕಾರಿ ಪ್ರಚಾರ ಶೈಲಿಯಲ್ಲಿ ಪ್ರಕಟಿಸಿ ಸುದ್ದಿ ಮಾಡಿತು.



ಕೃಪೆ: ದಿ ಹಿಂದೂ

ನರಮೇಧ ನಡೆಸಲು ರಹಸ್ಯ ಸಭೆಗಳು

ಫೆಬ್ರುವರಿ 27ರಂದೇ ತನ್ನ ಕ್ಯಾಬಿನೆಟ್ ಸಚಿವರು ಮತ್ತು ಹಿರಿಯ ಪೊಲೀಸ್ ಅಧಿಕಾರಿಗಳ ರಹಸ್ಯ ಸಭೆ ಕರೆದ ನರೇಂದ್ರ ಮೋದಿ "ಗೋಧ್ರಾ ರೈಲು ದುರ್ಘಟನೆಯಿಂದ ಹಿಂದೂಗಳು ಉಗ್ರವಾಗಿ ಪ್ರತಿಕ್ರಿಯಿಸುವ ಸಾಧ್ಯತೆಯಿದ್ದು, ಅದನ್ನು ನಿಯಂತ್ರಿಸಬಾರದು" ಎಂಬ ಕಟ್ಟಾಜ್ಞೆ ಹೊರಡಿಸಿದರು. ಮತ್ತೊಂದು ಉನ್ನತ ಸಭೆಯಲ್ಲಿ ಅಂದಿನ ಮುಖ್ಯ ಕಾರ್ಯದರ್ಶಿಗಳು ಮತ್ತು ಹಿರಿಯ ಅಧಿಕಾರಿಗಳಿಗೆ "ಗಲಭೆ ನಡೆಸುವ ಹಿಂದು ಗಲಭೆಕೋರರಿಗೆ ಯಾವುದೇ ರೀತಿಯ ಅಡಚಣೆ ಒಡ್ಡಬಾರದು" ಎಂದು ತಾಕೀತು ಮಾಡಲಾಯಿತು. ಇವೆಲ್ಲ ವಿವರಗಳನ್ನು 2002ರ ಮೇನಲ್ಲಿ ನ್ಯಾಯಾಲಯದಲ್ಲಿ ಬಹಿರಂಗ ಪಡಿಸಿದವರು ಮೋದಿ ಸರ್ಕಾರದಲ್ಲಿ ಕ್ಯಾಬಿನೆಟ್ ಸಚಿವರಾಗಿದ್ದವರೇ. ಅವರ ಹೆಸರನ್ನು ಗೌಪ್ಯವಾಗಿಡಲಾಗಿತ್ತು. ಆದರೆ, ನ್ಯಾಯಾಲಯದ ಸದಸ್ಯರೊಬ್ಬರು 2002ರ ನವೆಂಬರ್‌ನಲ್ಲಿ ಈ ರೀತಿ ಸಾಕ್ಷಿ ನುಡಿದ ಸಚಿವರು ಹರೇನ್ ಪಾಂಡ್ಯಾ ಎಂದು ಔಟ್‌ಲುಕ್ ಪತ್ರಿಕೆಗೆ ತಿಳಿಸಿದ ಕೆಲವೇ ತಿಂಗಳಲ್ಲಿ ಪಾಂಡ್ಯಾರವರು ಕೊಲೆಗೀಡಾದರು.

ಪೊಲೀಸ್ ಕಂಟ್ರೋಲ್ ರೂಮಿನಲ್ಲಿ ಕುಳಿತು ಸಚಿವರ ಆದೇಶ !

ಕೋಮುಗಲಭೆ ನಡೆಯುತ್ತಿರುವ ಸಮಯದಲ್ಲಿ ಗಲಭೆಕೋರರ ಮೇಲೆ ಯಾವುದೇ ಕ್ರಮ ಕೈಗೊಳ್ಳದಂತೆ ಪೊಲೀಸರ ಮೇಲೆ ನಿಗಾವಹಿಸಲು ಮತ್ತು ಗಲಭೆಗೆ ಪೂರಕ ಆದೇಶ ನೀಡಲು ಮುಖ್ಯಮಂತ್ರಿಯ ಕ್ಯಾಬಿನೆಟ್ ಸಚಿವರಾದ ಅಶೋಕ್ ಭಟ್ (ಇವರು ಆರೋಪಿ ನಂಬರ್ 2) ಮತ್ತು ಇಂದ್ರ ವಿನಯ್ ಸಿನ್ಹ ಜಡೇಜ (ಇವರು ಆರೋಪಿ ನಂಬರ್ 3) ಪೊಲೀಸ್ ಕಂಟ್ರೋಲ್ ರೂಮಿಗೇ ತೆರಳಿ ಪೊಲೀಸ್ ಇಲಾಖೆಯನ್ನು ಪೂರ್ತಿ ತಮ್ಮ ತಾಳಕ್ಕೆ ಕುಣಿಸತೊಡಗಿದರು.

ರಕ್ತಪಿಪಾಸು ಮೋದಿಯ ದ್ವೇಷ ಮತ್ತು ವಿಜಯಪತಾಕೆ

ಜಯ



ಗಲಭೆಕೋರರೊಡನೆ ತೆಹಲ್ಕಾ ಪತ್ರಿಕೆಯು ನಡೆಸಿದ 'ಆಪರೇಷನ್ ಕಳಂಕ' ಕುಟುಕು ಕಾರ್ಯಾಚರಣೆಯಿಂದ ಇನ್ನಷ್ಟು ಅಂಶಗಳು ಬೆಳಕಿಗೆ ಬಂದಿದ್ದು, ಇವೆಲ್ಲ ಈಗ ನ್ಯಾಯಾಲಯದಲ್ಲಿ ಸಾಕ್ಷ್ಯಗಳಾಗುತ್ತಿವೆ. ಅದರಲ್ಲಿ ಗಲಭೆ ನಡೆದ ನಂತರ ಗಲಭೆಪೀಡಿತ ಸ್ಥಳಗಳಿಗೆ ತನ್ನ ಬ್ಲಾಕ್ ಕಮಾಂಡೋಗಳ ಜೊತೆ ಭೇಟಿ ಕೊಟ್ಟಿರುವ ಮೋದಿಯು ಗಲಭೆಯಲ್ಲಿ ಹಿಂಸೆಗೀಡಾದ ನಿರಾಶ್ರಿತ ಶಿಬಿರಗಳಿಗೆ ಭೇಟಿ ನೀಡದೆ, ಗಲಭೆಕೋರರನ್ನು ಅವರ ಯಶಸ್ಸಿಗಾಗಿ ಅಭಿನಂದಿಸಲು ಹೋಗಿರುವುದು ದಾಖಲೆಯಾಗಿದೆ. ಅಲ್ಲದೆ, ಸಾಮೂಹಿಕ ಅತ್ಯಾಚಾರ ಮತ್ತು ಧಾಳಿಗಳನ್ನು ನಡೆಸಲು ಮೋದಿಯೇ ನಿರ್ದೇಶನ ನೀಡಿರುವುದೂ ಕೂಡ ದಾಖಲೆಯಾಗಿದೆ.

ಮತ್ತೊಂದು ಬೆಚ್ಚಿಬೀಳಿಸುವ ಅಂಶವೆಂದರೆ, ಗೋಧ್ರಾ ಘಟನೆಗೂ ಮುಂಚಿಯೇ ಹಲವು ತಿಂಗಳ ಕಾಲ ಬೇರೆ ಬೇರೆ ರಾಜ್ಯಗಳಿಂದ ಗಲಭೆ ನಡೆಸಲು ಬೇಕಾದ ಆಯುಧಗಳು ಮತ್ತು ಮಾರಕಾಸ್ತ್ರಗಳನ್ನು ಗಲಭೆಕೋರರು ಖರೀದಿಸಿ ಸಂಗ್ರಹಿಸಿಟ್ಟುಕೊಂಡಿರುವುದು. ಇದರ ಕುರಿತೆಲ್ಲಾ ವಿಶೇಷ ತನಿಖಾ ತಂಡ ತನಿಖೆ ನಡೆಸಬೇಕಾಗಿದೆ.

ಸತ್ತವರ ತಲೆಬುರುಡೆಗಳು ಕ್ರಿಕೆಟ್ ಆಟದಲ್ಲಿ ಬಳಕೆ

ಯಾವ್ಯಾವ ಅಧಿಕಾರಿಗಳ ವ್ಯಾಪ್ತಿಗಳಲ್ಲಿ ಹಲವು ಕೋಮುವಾದಿ ಮಾರಣಹೋಮಗಳು ನಡೆದಿವೆಯೋ, ಅಂಥಹ ಐಜಿಪಿ, ಎಸ್.ಪಿ, ಡಿಜಿಪಿಯಂಥಹ ಹಿರಿಯ ಅಧಿಕಾರಿಗಳೊಡನೆ ಮೋದಿಯು ಹಲವು ನಿರಂತರ ರಹಸ್ಯ ಸಭೆಗಳನ್ನು ನಡೆಸಿ ಕೋಮುಗಲಭೆಗೆ ವ್ಯವಸ್ಥಿತ ನಿರ್ದೇಶನ ನೀಡಿದ್ದಾರೆ. ಇದ್ಯಾವುದೇ ಸಭೆಗಳ ನಡಾವಳಿಗಳನ್ನು ಉದ್ದೇಶಪೂರ್ವಕವಾಗಿಯೇ ದಾಖಲಿಸಿಲ್ಲ. ಎಂ.ಕೆ ಟಂಡನ್ ಎಂಬ ಎಸಿಪಿಯ ವಲಯದಲ್ಲಿ ಹಲವಾರು ಧಾಳಿಗಳು ನಡೆದಿದ್ದು ಅಲ್ಲಿ ಹಲವಾರು ಜನ ಸುರಕ್ಷತೆಗಾಗಿ ಓಡಾಡುತ್ತಿದ್ದನ್ನು ಅವರು ನೋಡಿದ್ದರೂ ರಕ್ಷಣೆ ನೀಡಿಲ್ಲ. ಅವರಲ್ಲಿ ಸುಮಾರು 130 ಜನರ ಮೃತದೇಹಗಳು ಅದೇ ವಲಯದಲ್ಲಿ ದೊರಕಿವೆ.

ಪುಟ 10ಕ್ಕೆ

ಎಷ್ಟೆಲ್ಲಾ ಅಧಿಕಾರ, ಹಣದ ದುರುಪಯೋಗ, ಅಕ್ರಮಗಳನ್ನು, ಅನೈತಿಕ ರಾಜಕೀಯವನ್ನು ನಡೆಸಿಯೂ ಬಳ್ಳಾರಿ ಕ್ಷೇತ್ರದಲ್ಲಿ ಬಿಜೆಪಿಗೆ ಕೂದಲೆಳೆಯ ಗೆಲುವು ದಕ್ಕಿದೆ ಎಂದರೆ ಅದರ ಅರ್ಥವೇನು? ಐದು ಲಕ್ಷ ಅಂತರದ ಗೆಲುವಿನ ಘೋಷಣೆ ಏನಾಯ್ತು? ನೈತಿಕವಾಗಿ ಬಳ್ಳಾರಿಯಲ್ಲಿ ಗೆದ್ದವರು ಯಾರು?



ಬಳ್ಳಾರಿ ಕ್ಷೇತ್ರ: ಗೆದ್ದದ್ದು ಜನತೆ

ಯು. ಬಸವರಾಜು

ಐದು ಲಕ್ಷ ಮತಗಳ ಅಂತರದಿಂದ ಬಳ್ಳಾರಿ ಲೋಕಸಭಾ ಸ್ಥಾನವನ್ನು ಬಿಜೆಪಿ ಗೆಲ್ಲಲಿದೆಯೆಂದು ಕಂದಾಯ ಸಚಿವರಾದ ಕರುಣಾಕರ ರೆಡ್ಡಿಯವರು ಚುನಾವಣಾ ಪೂರ್ವದಲ್ಲಿಯೇ ಘೋಷಿಸಿದ್ದರು. ಆದಾಗಲೇ ಜಿಲ್ಲೆಯಲ್ಲಿ ಆಪರೇಷನ್ ಕಮಲ ಜಯಪ್ರದವಾಗಿ ಮುನ್ನಡೆದಿತ್ತು. ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಜಿಲ್ಲಾ ಪಂಚಾಯ್ತಿ ಸದಸ್ಯರು ಮಾಜಿ ಶಾಸಕರು, ವಿವಿಧ ಪಕ್ಷಗಳ ಮಾಜಿ ನಾಯಕರು, ಮುನಿಸಿಪಲ್ ಕೌನ್ಸಿಲ್ ಸದಸ್ಯರು, ಎಲ್ಲರೂ ಬಿಜೆಪಿ ಕಡೆ ಸಾಗಿದ್ದರು. ಜಿಲ್ಲೆಯ ಎಲ್ಲ ವಿಧಾನಸಭಾ ಸ್ಥಾನಗಳು ಬಿಜೆಪಿಯವೇ. ಬಳ್ಳಾರಿ ಜಿಲ್ಲಾ ಪಂಚಾಯತ್, ಬಳ್ಳಾರಿ ಮಹಾನಗರ ಪಾಲಿಕೆ ಅನೇಕ ತಾಲ್ಲೂಕು ಪಂಚಾಯತ್‌ಗಳು, ಮುನಿಸಿಪಾಲಿಟಿಗಳು, ಬಿಜೆಪಿ ತೆಕ್ಕೆಯಲ್ಲೇ ಇದ್ದವು. ಇದೆಲ್ಲವೂ ಕರುಣಾಕರ ರೆಡ್ಡಿಯವರಿಂದ ಇಂತಹ ಉದ್ಧಾರ ಬರಲು ಕಾರಣವಾಗಿದ್ದವು.

ಇದೀಗ ಫಲಿತಾಂಶ ಹೊರಬಂದಿದೆ. ಬಿಜೆಪಿ ಕೇವಲ ಎರಡು ಸಾವಿರ ಚಿಲ್ಲರೇ ಮತಗಳ ಅಂತರದಿಂದ ಗೆಲುವು ಸಾಧಿಸಿದೆಯೆಂದು ಚುನಾವಣಾಧಿಕಾರಿ, ರೆಡ್ಡಿಗಳ ಕೈಗೊಂಬೆ ಶಿವಪ್ಪನವರು ಘೋಷಿಸಿದ್ದಾರೆ. ಇದರಿಂದ ರೆಡ್ಡಿ ಕುಟುಂಬ, ಬಳಗ, ಪರಿವಾರ ಬೆಚ್ಚಿಬಿದ್ದಿದೆ. ಲಕ್ಷಾಂತರ ಮತಗಳ ಅಂತರಿಂದ ಗೆಲುವು ಸಾಧಿಸುವೆಂಬ ಅಹಂಭಾವಕ್ಕೆ ಭಾರಿ ಪೆಟ್ಟು ಬಿದ್ದಿದೆ. ಮತ್ತೊಂದೆಡೆ, ಕಾಂಗ್ರೆಸ್ ಅಭ್ಯರ್ಥಿ ಮತ ಎಣಿಕೆ ಬಗೆಗೆ ಶಂಕೆ ವ್ಯಕ್ತಪಡಿಸಿ ಗೆಲುವಿನ ಘೋಷಣೆ ಅಕ್ರಮವೆಂದು ಮರುಮತದಾನಕ್ಕಾಗಿ ನ್ಯಾಯಾಲಯದ ಮೊರೆ ಹೊಕ್ಕಿದ್ದಾರೆ.

ಬಿಜೆಪಿ ಮುನ್ನಡೆ ಸಾಧಿಸಲಿಲ್ಲ

ಚುನಾವಣಾ ಪೂರ್ವದಲ್ಲಿ ಏನೆಲ್ಲಾ ಆಪರೇಷನ್ ಕಮಲ ಮಾಡಿದ್ದರೂ ಯಾವುದೆಲ್ಲಾ ಪಂಚಾಯತ್ ಮುನ್ಸಿಪಾಲಿಟಿ ಅಧಿಕಾರವನ್ನು ಕೊಂಡುಕೊಂಡಿದ್ದರೂ, 5 ಲಕ್ಷ ಮತಗಳ ಅಂತರದ ಗೆಲುವು ತಮ್ಮದೆಂದೂ ಮೇಲ್ನೋಟಕ್ಕೆ ಬೀಗಿಕೊಂಡಿದ್ದರೂ, ರೆಡ್ಡಿ ಕುಟುಂಬಕ್ಕೆ ತಮ್ಮ ಗೆಲುವಿನ ಬಗ್ಗೆ ಸಂಶಯವಿದ್ದೇ ಇತ್ತು ಎಂಬುದನ್ನು ಈ ಚುನಾವಣೆಯಲ್ಲಿ ಅದು ಚೆಲ್ಲಿದ ಭಾರೀ ಹಣ, ಹೆಂಡ, ಅಧಿಕಾರಿಗಳ ಹಾಗೂ ಅಧಿಕಾರದ ದುರುಪಯೋಗ, ಅಕ್ರಮ ಮತದಾರರ ಸೇರ್ಪಡೆ, ಬೆದರಿಕೆಗಳು ಎಲ್ಲವೂ ಬಯಲಿಗೆಳೆದಿವೆ. ಕಳೆದ ವಿಧಾನಸಭಾ ಚುನಾವಣೆ 2008 ರಲ್ಲಿ ಜಿಲ್ಲೆಯಾದ್ಯಂತ ಅದು ಗಳಿಸಿದ ಒಟ್ಟು ಮತಗಳಿಗಿಂತಲೂ ಈ ಬಾರಿ ಹತ್ತಾರು ಸಾವಿರ ಕಡಿಮೆ ಮತಗಳನ್ನು ಮುಖ್ಯವಾಗಿ ಸಚಿವ ಶ್ರೀರಾಮುಲು ಅವರ ಕ್ಷೇತ್ರದಲ್ಲಿ 10,000 ಕ್ಕೂ ಅಧಿಕ ಮತಗಳು, ಅದೇ ರೀತಿ ಆನಂದ್‌ಸಿಂಗ್ ರವರ ವಿಜಯನಗರ (ಹೊಸಪೇಟೆ) ಕ್ಷೇತ್ರದಲ್ಲಿ 20 ಸಾವಿರ, ಕಂಪ್ಲಿ ಕ್ಷೇತ್ರದಲ್ಲಿ ಸುಮಾರು 5000 ಮತಗಳು ಕಡಿಮೆಯಾಗಿವೆ. ಉಳಿದ ಯಾವುದೇ ಕ್ಷೇತ್ರದಲ್ಲಿ ಬಿಜೆಪಿ ಹೇಳಿಕೊಳ್ಳುವಷ್ಟು ಮುನ್ನಡೆ ಪಡೆದಿಲ್ಲ.



ಜನತೆಯ ಜಯ

ಕಳೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗಳಿಸಿದ ಮತಗಳನ್ನು ಗಮನಿಸಿದರೆ ಜಿಲ್ಲೆಯಲ್ಲಿ ಕಾಂಗ್ರೆಸ್‌ನಿಂದ ಭಾರೀ ಪ್ರಮಾಣದಲ್ಲಿ ಜನತೆ ಹೊರಸಾಗುತ್ತಿರುವುದನ್ನು ಗಮನಿಸಬಹುದಾಗಿದೆ. 1999 ರ ಚುನಾವಣೆಯಲ್ಲಿ ಒಟ್ಟಾರೆ 3.75 ಲಕ್ಷ ಮತ ಪಡೆದ ಕಾಂಗ್ರೆಸ್ ಮತಗಳಿಕೆ ನಂತರ 2004 ರಲ್ಲಿ ಅದು 2.70 ಲಕ್ಷಕ್ಕೆ ಕುಸಿಯಿತು. ಮುಂದೆ ಮತದಾರರ ಸಂಖ್ಯೆ ದಶಕಗಳ ನಂತರ ಗಣನೀಯವಾಗಿ ಹೆಚ್ಚಾದಾಗಲೂ, ಜಾತ್ಯಾತೀತ ಜನತಾದಳ ಜಿಲ್ಲೆಯಲ್ಲಿ ದುರ್ಬಲಗೊಂಡ ಸಂದರ್ಭದಲ್ಲೂ ಅದು ಪಡೆದ ಮತಗಳು ಕೇವಲ 3.50 ಲಕ್ಷವಾಗಿತ್ತು. ಆದರೆ ಈ ಬಾರಿ ಈ ಚುನಾವಣೆಯಲ್ಲಿ ಕಳೆದ 60 ವರ್ಷಗಳಿಂದ ಕಾಂಗ್ರೆಸ್ ನಡವಳಿಕೆ ಕಂಡ ಜನತೆ ಅದರಿಂದ ಹೊರ ನಡೆಯುತ್ತಿರುವುದನ್ನು ಮುಂದುವರೆಸಿದ್ದಾಗಲೂ ಸುಮಾರು 4 ಲಕ್ಷ ಮತಗಳನ್ನು ಪಡೆಯಿತು. ಆರು ದಶಕಗಳ ಕಾಂಗ್ರೆಸ್ ನೀತಿ, ಆಡಳಿತಗಳು ಜನತೆಯನ್ನು ಅದರ ತೆಕ್ಕೆಯಿಂದ ಹೊರದೂಡುತ್ತಿದ್ದರೂ, ಕಾಂಗ್ರೆಸ್ ಈ ಪ್ರಮಾಣದಲ್ಲಿ ಮತ ಪಡೆಯಲು ಸಾಧ್ಯವಾದುದಾದರೂ ಹೇಗೆ? ಅದು ರಾತ್ರೋರಾತ್ರಿ ಜನಪರವಾಗಿ ನಿಂತುಬಿಟ್ಟಿತೇ?

ರೆಡ್ಡಿ ಬಳಗ



ಕರುಣಾಕರ | ರೆಡ್ಡಿ ಜನಾರ್ಧನ ರೆಡ್ಡಿ | ಶ್ರೀರಾಮುಲು

ಅಥವಾ ಬಳ್ಳಾರಿ ಜಿಲ್ಲೆಯ ಜನತೆ ಕಾಂಗ್ರೆಸ್‌ನ ಜನಪರತೆಯನ್ನು ಗುರುತಿಸಿಬಿಟ್ಟಿತೇ? ಖಂಡಿತಾ ಹಾಗೇನು ಕಾಣುತ್ತಿಲ್ಲ.

ಬಿಜೆಪಿ ಮುಖಂಡರ ಅಂದರೆ ರೆಡ್ಡಿ ಬಳಗದ ಅಹಂಭಾವ ಹಾಗೂ ಸರ್ವಾಧಿಕಾರಿ ಧೋರಣೆ, ದೌರ್ಜನ್ಯದ ವಿರುದ್ಧ, ಅದೇ ರೀತಿ ಬಿಜೆಪಿಯ ಮತಾಂಧತೆಯ ವಿರುದ್ಧ ಕಾಂಗ್ರೆಸನ್ನು ಒಂದು ಬಡಿಗೆಯಾಗಿ ಬಳಸಿಕೊಂಡಿತೆಂಬುದನ್ನೂ ಇಲ್ಲಿ ಗುರುತಿಸಬೇಕಾಗಿದೆ. ಕಾಂಗ್ರೆಸ್ ತನ್ನ ಸಾಧನೆ ಬಗ್ಗೆ ಬೀಗಬೇಕಾಗಿಲ್ಲ.

ಈ ಕಾರಣದಿಂದಲೇ ಜೆಡಿ(ಎಸ್) ಬೆಂಬಲಿಗರು, ತಮ್ಮದು ಕಾಂಗ್ರೆಸ್‌ನ ವಿರೋಧಿ ಮತಗಳಾಗಿದ್ದರೂ ಈ ಬಾರಿ ಕಾಂಗ್ರೆಸ್ ಜೊತೆ ನಿಂತಿದ್ದಾರೆ. ಹೀಗಾಗಿ, ಒಟ್ಟಾರೆ ಈ ಚುನಾವಣೆಯಲ್ಲಿ ಜನತೆಯು ನೀಡಿದ ತೀರ್ಪನ್ನು ರೆಡ್ಡಿ ಸರ್ವಾಧಿಕಾರದ ವಿರುದ್ಧ ಹಾಗೂ ಬಿಜೆಪಿಯು ಮತಾಂಧತೆಯ ವಿರುದ್ಧ ಜನತೆಯ ಜಯವೆಂದು ಬಣ್ಣಿಸಬಹುದಾಗಿದೆ. ಇದು ಚುನಾವಣೆಯ ಪೂರ್ವದಲ್ಲಿಯೇ ನಿರೀಕ್ಷಿತ ವಿಚಾರವಾಗಿತ್ತು. ಬಳ್ಳಾರಿಯ ಮತದಾರರು ಈ ಬಾರಿ ಬಿಜೆಪಿಯ ವಿರುದ್ಧ ಸ್ಪರ್ಧಿಸಿರುವುದು ಕಾಂಗ್ರೆಸ್ ಪಕ್ಷವಲ್ಲ. ಅದು ಸ್ವತ: ತಾವೇ ಎಂದು ಭಾವಿಸಿದಂತೆ ವಿರೋಧ ಪಕ್ಷಗಳ ಹಾಗೂ ವಿವಿಧ ಸಾಮೂಹಿಕ ಸಂಘಗಳ ಹೋರಾಟ ಸಮಿತಿಯ ಕರೆಯ ಮೇರೆಗೆ ನೀರಾವರಿ ಕೃಷಿಭೂಮಿಯಲ್ಲಿ ವಿಮಾನ ನಿಲ್ದಾಣದ ಅಗತ್ಯವಿಲ್ಲವೆಂದು ಹಾಗೂ ಹೋರಾಟ ರೈತರ ಮೇಲೆ ಲಾಠಿ ಪ್ರಹಾರ ಹಾಗೂ ಗೋಲಿಬಾರ್ ಖಂಡಿಸಿ ನಡೆಸಲಾದ ಬಳ್ಳಾರಿ ಜಿಲ್ಲಾ ಬಂದ್ ಅಭೂತಪೂರ್ವವಾಗಿ ಯಶಸ್ಸು ಪಡೆದದ್ದು ಕಂಡು ಬಂದಿತು. ಆದಾಗಲೇ ರೆಡ್ಡಿಗಳ ಅಹಂಭಾವಕ್ಕೆ ತೀವ್ರ ಪೆಟ್ಟು ನೀಡಿದರೆ ಮತ್ತೊಂದೆಡೆ ಈ ಚುನಾವಣೆಯ ಫಲಿತಾಂಶದ ಮುನ್ಸೂಚನೆಯ ದಿಕ್ಸೂಚಿಯಾಗಿತ್ತು. ಮತ್ತು ಈ ಚುನಾವಣೆಯು ನಡೆದದ್ದು ಕೇವಲ ಬಿಜೆಪಿ ಕಾಂಗ್ರೆಸ್ ನಡುವೆ ಮಾತ್ರವಲ್ಲ, ಅದು ಸರ್ವಾಧಿಕಾರದ ವಿರುದ್ಧ ಜನತೆಯ ಹಕ್ಕುಗಳಿಗಾಗಿಯೂ ನಡೆದಿತ್ತು.

ಕಳೆದ 2,3 ವರ್ಷಗಳ ಹಿಂದಿನಿಂದಲೂ ರೆಡ್ಡಿ ಕುಟುಂಬದ ಅಧಿಕಾರ ದುರುಪಯೋಗ, ಭ್ರಷ್ಟತೆ, ಗಣಿಲೂಟಿ ನೀತಿಗಳ ವಿರುದ್ಧ ಜನತೆ ತಿರುಗಿಬಿದ್ದಿತ್ತು. ಅದು ಭಾರಿ ಪ್ರಮಾಣದ ಅಕ್ರಮ ಗಣಿಗಾರಿಕೆ, ಪರಿಸರನಾಶ, ರಸ್ತೆಗಳ ನಾಶ, ರೈತರ ಬೆಳೆಹಾನಿ, ಅಂತರ್ಜಲದ ನಾಶ ವಿಪರೀತ ಧೂಳಿನಿಂದಾಗಿ ಜನಗಳ, ಜಾನುವಾರುಗಳ ಆರೋಗ್ಯಹಾನಿ ವಿಪರೀತ ವಾಹನಗಳ ದಟ್ಟಣೆಯಿಂದ ಭಾರೀ ಟ್ರಾಫಿಕ್ ಜಾಮ್‌ಗಳು ಎಲ್ಲೆಂದರಲ್ಲಿ ಸಂಭವಿಸುವ ಮೈನ್ಸ್ ವಾಹನ ಅಪಘಾತಗಳು ಮಾಫಿಯಾ ಶಕ್ತಿಗಳ ಅವಘಡಗಳು ಮುಂದಾದವುಗಳ ವಿರುದ್ಧ ಜನಪರ ಬೇಡಿಕೆಗಳ ಹೆಸರಿನಲ್ಲಿ ಅದು ವ್ಯಕ್ತಗೊಂಡಿತ್ತು. ಸಿಪಿಐ(ಎಂ) ಹಾಗೂ ಅದರ ಕಾರ್ಯಕರ್ತರ ನೇತೃತ್ವದ ಸಮೂಹಸಂಘಗಳು ಈ ಹೋರಾಟದ ಮುಂಚೂಣಿಯಲ್ಲಿದ್ದು ಮಧ್ಯಪ್ರವೇಶ ನಡೆಸಿದ್ದವು.

ಬಂಡವಾಳ ಬೆಳೆದ ಹಾಗೇ ಮತ್ತಷ್ಟು

ಸರ್ವಾಧಿಕಾರಿ ನೀತಿಯೆಡೆಗೆ ಇವರು ಸರಿದ ಹಾಗೆ ಹೋರಾಟಗಳು ವಿಶಾಲ ಸ್ವರೂಪ ಪಡೆದು ಸ್ಫೋಟಗೊಂಡಿದ್ದೀಗ ಬಳ್ಳಾರಿ ಜಿಲ್ಲೆಯ ಇತಿಹಾಸ.

ಭಾರೀ ಪ್ರಮಾಣದಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿ ಪರಿಸರ ಹಾಗೂ ರಸ್ತೆ ನಾಶಕ್ಕೆ ಕಾರಣವಾಗಿದ್ದ ದೊಡ್ಡ ಬಂಡವಾಳದಾರ ಮೈನ್ಸ್ ಮಾಲೀಕರನ್ನು ಬಿಟ್ಟು ಪದೇ ಪದೇ ತಮ್ಮದೇ ಜಮೀನಿನಲ್ಲಿ ಗಣಿಗಾರಿಕೆ ನಡೆಸಲು ಪರವಾನಗಿ ನೀಡುವಂತೆ ಕೋರುತ್ತಿದ್ದ ರೈತರು ಹಾಗೂ ಸಣ್ಣ ಗಣಿವ್ಯಾಪಾರಿಗಳನ್ನು ಕಡೆಗಣಿಸಿ, ಅವರನ್ನು ಅಕ್ರಮಗಣಿಗಾರಿಕೆ ನಡೆಸುವವರೆಂದು ಆರೋಪಿಸಿ ಅವರು ಸಂಗ್ರಹಿಸಿದ್ದ ನೂರಾರು ಕೋಟಿ ಗಣಿಸಂಪನ್ಮೂಲದ ಮೇಲೆ ದಾಳಿ ನಡೆಸಿದ್ದು ಬಿಜೆಪಿ ಬೆಂಬಲಿಗರನ್ನೇ, ಅದರ 2ನೇ ಸ್ಥರದ ನಾಯಕರನ್ನೇ ಅಲುಗಾಡಿಸಿತ್ತು. ಈ ವಿಚಾರದಲ್ಲಿ ರೆಡ್ಡಿಗಳ ಕುಯುಕ್ತಿಯು ಅವರಿಗೆ ತಿರುಗುಬಾಣವಾಯಿತು. ಆಕ್ರೋಶಗೊಂಡ ಹತ್ತಾರು ಸಾವಿರ ಜನರು ಸಂಡೂರು, ಹೊಸಪೇಟೆ, ಬಳ್ಳಾರಿಗಳಲ್ಲಿ ತಿಂಗಳುಗಟ್ಟಲೆ ಚಳುವಳಿಯಲ್ಲಿ ತೊಡಗುವಂತೆ ಮಾಡಿ, ಸರ್ವಾಧಿಕಾರದ ವಿರುದ್ಧ ತೀವ್ರ ಪ್ರತಿರೋಧ ಬೆಳೆಯುವಂತೆ ಮಾಡಿತ್ತು.

ರೆಡ್ಡಿ ಮಾಲೀಕತ್ವದ ಓಬಳಾಪುರಂ ಮೈನ್ಸ್ ಕಂಪನಿಯು ಆಂಧ್ರದಲ್ಲಿ ಪರವಾನಗಿ ಪಡೆದು ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ಗಡಿರೇಖೆಯನ್ನೂ ಅಳಸಿ ಕರ್ನಾಟಕದ ಭೂ ಪ್ರದೇಶವನ್ನು ಒತ್ತುವರಿ ಮಾಡಿದ ವಿಚಾರ ಹಾಗೂ ಅದರ ವಿರುದ್ಧದ ಹೋರಾಟವು



ಭೂಮಿ ಬಗೆದು ಬರಡು ಮಾಡಿದರು

ಅವರಿಗೆ ಇನ್ನಷ್ಟು ಕಪ್ಪು ಮಸಿಯನ್ನು ಅಂಟಿಸಿತು. ಇಂಜಿನಿಯರಿಂಗ್ ಕಾಲೇಜ್ ಸ್ಥಳಾಂತರದ ವಿಚಾರ, ಹಡಗಲಿ, ಹಗರಿ ಬೊಮ್ಮನಹಳ್ಳಿಯ ಜನರನ್ನು ಕೆರಳುವಂತೆ ಮಾಡಿತು. ಐತಿಹಾಸಿಕ ಹಂಪಿ, ಆನೆಗುಂದಿಯ ನಡುವೆ ಭಾರೀ ಸೇತುವೆಯ ಕಳಪೆ ಕೆಲಸ, ಕುಸಿತವು ಇವರ ಬಗೆಗಿನ ಜಿಗುಪ್ಸೆಯನ್ನು ಹೆಚ್ಚಿಸಿದರೇ, ನೀರಾವರಿ ಕೃಷಿ ಭೂಮಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣದ ವಿರುದ್ಧದ ಭಾರೀ ಹೋರಾಟ, ಹೋರಾಟ ನಿರತ ರೈತರ ಮೇಲೆ ಲಾಠಿ ಪ್ರಹಾರ ಗೋಲಿಬಾರ್‌ಗಳು, ದ್ವೇಷಪೂರಿತ ರಾಜಕಾರಣದ ಮೂಲಕ ವಿರೋಧಿಗಳನ್ನು ಕೊಲೆ ಕೇಸುಗಳಲ್ಲಿ ಸೇರ್ಪಡೆ ಮಾಡಿದ ವಿಚಾರಗಳ ವಿರುದ್ಧದ ಸ್ವಯಂಪ್ರೇರಿತ ಬಳ್ಳಾರಿ ಜಿಲ್ಲಾ ಬಂದ್‌ಗಳು, ರೆಡ್ಡಿಗಳ ವಿರುದ್ಧದ ಜಿಲ್ಲೆಯಾದ್ಯಂತ ನಿರ್ಮಾಣಗೊಂಡಿದ್ದ ಭಾರೀ ಅಸಮಾಧಾನವನ್ನೂ ಕ್ರೋಢೀಕರಿಸಿದ್ದವು. ಇದೆಲ್ಲದರ ಪರಿಣಾಮವೇ ಬಳ್ಳಾರಿಯ ಫಲಿತಾಂಶ.



ಬುದ್ಧಿ ಕಲಿಯದ ಕಾಂಗ್ರೆಸ್

ಒಂದೆಡೆ ಸರ್ವಾಧಿಕಾರದ ವಿರುದ್ಧದ ಜನತೆಯ ತೀವ್ರಗೊಂಡ ಅಸಮಾಧಾನದಿಂದ ಜನತೆ ರೆಡ್ಡಿಗಳ ಮೂತಿ ತಿವಿಯಲು ತಯಾರಾಗಿದ್ದರೆ ಇದಕ್ಕೆ ಸಾಥಿ ನೀಡುವಂತೆ ಜೆಡಿ(ಎಸ್) ಸ್ಪರ್ಧೆಗಿಳಿಯದೇ ಕಾಂಗ್ರೆಸ್‌ನ ಬೆಂಬಲಕ್ಕೆ ನಿಂತಿತು. ಇಷ್ಟೆಲ್ಲಾ ಅನುಕೂಲಕರ ವಾತಾವರಣ ನಿರ್ಮಾಣಗೊಂಡಿತು. ಹೇಳಬೇಕೆಂದರೆ ವಿಜಯಮಾಲೆಯನ್ನೂ ತಟ್ಟೆಯಲ್ಲಿಟ್ಟು ಬಳ್ಳಾರಿ ಜನತೆ ಕಾಂಗ್ರೆಸ್ ಕಡೆ ಕೈಚಾಚಿತ್ತು. ವಿಜಯಮಾಲೆ ಧರಿಸಲು ಅಗತ್ಯವಾದ ಒಗ್ಗಟ್ಟನ್ನು ಕಾಂಗ್ರೆಸ್ ನಾಯಕತ್ವ ತೋರಿಸದಿರುವುದು ವಿಷಾದನೀಯವಾಗಿದೆ.

ಅಭ್ಯರ್ಥಿಯಾಗಲೀ, ಕಾಂಗ್ರೆಸ್‌ನ ರಾಜ್ಯ ನಾಯಕತ್ವವಾಗಲೀ ಜಿಲ್ಲೆಯ ತಮ್ಮ ಪಕ್ಷದ ಯಂತ್ರಾಂಗವನ್ನು ಐಕ್ಯತೆಯಿಂದ ಕಾರ್ಯ ನಿರ್ವಹಿಸುವಂತೆ ಮಾಡುವಲ್ಲಿ ಅದು ಮುತುವರ್ಜಿ ತೋರಿಸಲಿಲ್ಲ. ಮಾಜಿ ಶಾಸಕರಾದ ಸೂರ್ಯನಾರಾಯಣ ರೆಡ್ಡಿಯಂತಹ ಹಲವರು ಬಿಜೆಪಿಗೆ ಬಲವಾದ ಪ್ರಹಾರ ನೀಡಲು, ಕೈಜೋಡಿಸಲು ಮುಂದಾದರೂ, ಆ ರಾಜಕೀಯ ಶಕ್ತಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಿಲ್ಲ. ಪ್ರಚಾರದಲ್ಲೂ ಕಾಂಗ್ರೆಸ್ ಪಕ್ಷ ಬಿಜೆಪಿಯ ಕೆಲಸಕ್ಕೆ ಹೋಲಿಸಿದರೆ, ಅದರ ಅರ್ಧದಷ್ಟು ಕೆಲಸವನ್ನು ಅದು ಸರಿಗಟ್ಟಲಿಲ್ಲ. ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗದ ಕುರುಬ ಸಮುದಾಯದ ಅದೇ ರೀತಿ ದಲಿತ ಮತಗಳು ಕಾಂಗ್ರೆಸ್ ಕೈ ಹಿಡಿದಿದ್ದರೂ ಬುದ್ಧಿ ಕಲಿಯಲಿಲ್ಲ. ಬಹುಶಃ ಬುದ್ಧಿ ಕಲಿಯಲಾರದು.

ಮೂತಿಗೆ ಇಕ್ಕಿಸಿಕೊಂಡ ನಂತರವಾದರೂ ತಿಳಿಯಲಿ

ಪೆಟ್ಟು ತಿಂದ ನಂತರವಾದರೂ ರೆಡ್ಡಿಗಳು ಬುದ್ಧಿ ಕಲಿಯಬೇಕು. ಸರ್ವಾಧಿಕಾರ, ಸ್ವಜನಪಕ್ಷಪಾತ, ದೌರ್ಜನ್ಯ, ಅಧಿಕಾರದ ದುರುಪಯೋಗ ಜನರ ಮೇಲೆ ಅವ್ಯಾಹತ ದಾಳಿ, ದ್ವೇಷದ ರಾಜಕಾರಣವನ್ನು ಜನತೆ ಸಹಿಸರೆಂಬುದೇ ಈ ಫಲಿತಾಂಶದ ಪಾಠವಾಗಿದೆ.

ರೈತರ ಭೂಮಿಗಳಲ್ಲಿ ಗಣಿಗಾರಿಕೆ ಕೈಗೊಳ್ಳಲು ಅನುಮತಿ ನೀಡುವುದು. ಅನಧಿಕೃತವಾಗಿ ಸಂಗ್ರಹಿಸಿದ್ದ ಇವರ ದಾಸ್ತಾನಿನ ನಿಜ ಬೆಲೆಯನ್ನು ಅವರಿಗೆ ಸಂದಾಯಿಸುವುದು. ಲೈಸೆನ್ಸ್ ಪಡೆದ ದೊಡ್ಡಗಣಿ ಮಾಲೀಕರಿಗೆ ಪಕ್ಷಪಾತ ಮಾಡದೇ ಕಾನೂನುಬದ್ಧವಾಗಿ ಗಣಿಗಾರಿಕೆ ಮಾಡುವಂತೆ ಕ್ರಮವಹಿಸುವುದು. ಪರಿಸರ ಮಾಲಿನ್ಯ ಹಾಗೂ ರಸ್ತೆ ಹಾಳಾಗದಂತೆ ತಡೆಯುವುದು. ಒತ್ತುವರಿಯಿಂದ ಕರ್ನಾಟಕ, ಆಂಧ್ರ ಗಡಿರೇಖೆಯನ್ನು ಪ್ರಾಮಾಣಿಕವಾಗಿ ಸರಿಪಡಿಸುವುದು, ನೀರಾವರಿ ಕೃಷಿ ಭೂಮಿಯಿಂದ ವಿಮಾನ ನಿಲ್ದಾಣವನ್ನು ವರ್ಗಾಯಿಸುವುದು. ಹಡಗಲಿಯಲ್ಲಿರುವ ಇಂಜಿನಿಯರಿಂಗ್ ಕಾಲೇಜ್ ಅಲ್ಲಿಯೇ ಉಳಿಸಿ, ಬಳ್ಳಾರಿ ನಗರಕ್ಕೊಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜ್ ತರುವುದು, ರಸ್ತೆ ಅಗಲೀಕರಣದ ಹೆಸರಿನಲ್ಲಿ ತೊಂದರೆಗೊಳಗಾದವರಿಗೆ ಸೂಕ್ತ ಪರಿಹಾರ ನೀಡುವುದು. ಆನೆಗುಂದಿ ಸೇತುವೆಯ ಕಳಪೆತನವನ್ನು ಸೂಕ್ತ ತನಿಖೆಗೊಳಪಡಿಸಿ ಸತ್ತವರಿಗೆ ಸೂಕ್ತ ನೆರವು ನೀಡುವುದು, ಜಿಲ್ಲೆಯಾದ್ಯಂತ ಉದ್ಯೋಗಖಾತ್ರಿ ಕೆಲಸವನ್ನು ಜನರಿಗೆ ನೀಡುವುದು, ಕಾರ್ಯಕರ್ತರನ್ನು ಕಾಲ ಕಸದಂತೆ ಕಡೆಗಣಿಸುವ ನೀತಿ ಕೈಬಿಡುವುದು, ದ್ವೇಷದ ರಾಜಕೀಯ ಬಿಡುವುದು, ಕಾನೂನು ಸುವ್ಯವಸ್ಥೆಯನ್ನು ಮರುಸ್ಥಾಪಿಸುವುದು. ಮಾಫಿಯಾ ಶಕ್ತಿಗಳನ್ನು ಮಟ್ಟಹಾಕುವುದು. ಇವೇ ಮುಂತಾದ ಜನತೆಯ ಆಶಯಗಳನ್ನು ಪರಿಹರಿಸಲು ತಮ್ಮ ಅಧಿಕಾರ ಬಳಸಿ ಜನತೆಯ ನಡುವೆ ಪುನರ್ ಸಂಬಂಧವನ್ನು ರೆಡ್ಡಿಗಳು ರೂಪಿಸಿಕೊಳ್ಳಬೇಕಾಗಿದೆ. ಆದರೆ ರಾಜ್ಯದ ಬಿಜೆಪಿಯೊಳಗಿನ ಈಚೆಗಿನ ವಿದ್ಯಮಾನಗಳು, ಇವರ ಭೂತಕಾಲವು ಇವರು ಪಾಠ ಕಲಿಯಲು ಬಿಡುತ್ತಿಲ್ಲ. ಇಲ್ಲವೇ ಇವರೇ ಪಾಠ ಕಲಿತ ಹಾಗೆ ಕಾಣುತ್ತಿಲ್ಲ.

ತಿರುಪತಿ ತಿಮ್ಮಪ್ಪನಿಗೇ ಲಂಚ!?

ಗಣಿ ಧಣಿ ಜನಾರ್ಧನ ರೆಡ್ಡಿ ತಿರುಪತಿಯ ದೇವಾಲಯಕ್ಕೆ 45 ಕೋಟಿ ರೂಪಾಯಿ ಮೌಲ್ಯದ ವಜ್ರಖಚಿತ ಚಿನ್ನದ ಕಿರೀಟವನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ. ಇದುವರೆಗೆ ತಿರುಪತಿ ದೇವಾಲಯಕ್ಕೆ ಸಂದಿರುವ ಕೊಡುಗೆಯಲ್ಲೇ ಅತ್ಯಂತ ದುಬಾರಿ ಕೊಡುಗೆಯಂತೆ ಇದು! ಇಂಥಾ ದೊಡ್ಡ ಕೊಡುಗೆ ನೀಡಲು ಜನಾರ್ಧನ ರೆಡ್ಡಿಯವರಿಗೆ ಇರುವ ಪ್ರೇರಣೆಯಾದರೂ ಏನು? ನಾಡಿನ, ದೇಶದ ಜನರ ಹಿತಾಸಕ್ತಿಗಳ ಪ್ರಶ್ನೆ ಏನಾದರೂ ಇದೆಯೇ ಅದರಲ್ಲಿ? (ಇಂಥ ಹರಕೆಯಿಂದೇನೂ ಜನರಿಗೆ ಅನುಕೂಲ ವಾಗುವುದಿಲ್ಲ ಎಂಬುದು ಬೇರೆ ಮಾತು) ಇಲ್ಲ. ಇಲ್ಲಿ ಜನಹಿತದ ಮಾತಿಲ್ಲ. ಶ್ರೀಮಂತಿಕೆ, ವೈಭವದ ಅಸಹ್ಯಕರ ಪ್ರದರ್ಶನ ಅಷ್ಟೇ ಇದು. ಆಂಧ್ರದ ಕಡಪ ಜಿಲ್ಲೆಯಲ್ಲಿ ತಲೆ ಎತ್ತಿರುವ ರೆಡ್ಡಿ ಮಾಲಿಕತ್ವದ 'ಬ್ರಹ್ಮಿಣಿ' ಉಕ್ಕು ಘಟಕ ಚೆನ್ನಾಗಿ ನಡೆಯಲಿ ಎಂದು ಇಲ್ಲಿ



ಒಂದು ಹರಕೆ. ರಾಜಕೀಯ ಗುರಿಗಳ ಈಡೇರಿಕೆಯ ಪ್ರಶ್ನೆಗಳೂ ಇರಬಹುದು. ಕರ್ನಾಟಕ-ಆಂಧ್ರಗಳಲ್ಲಿ ಅಕ್ರಮವಾಗಿ ಕಬ್ಬಿಣದ ಅದಿರುವ ತೋಡಿ, ಲೂಟಿ ಮಾಡಿ ಗಳಿಸಿದ ದುಡ್ಡಲ್ಲವೇ? ಚಿನ್ನದ ಕಿರೀಟ, ಅದೂ ವಜ್ರದ ಸಮೇತವಾದದ್ದನ್ನೇ ಕೊಡುತ್ತಾರೆ. ಜನರನ್ನು ಲೂಟಿ ಮಾಡುವ ಮತ್ತಷ್ಟು ಅವಕಾಶ ಕೋರಿ ದೇವರಿಗೇ ಲಂಚ ಕೊಡಲು ನಿಂತಿರುವ ರೆಡ್ಡಿ ಬಳಗವನ್ನು ಜನ ಗಮನಿಸುತ್ತಿದ್ದಾರೆ.

ಕಾಂಗ್ರೆಸ್ ರಾಷ್ಟ್ರವ್ಯಾಪಿ ಪುನಶ್ಚೇತನಗೊಂಡಿದೆಯೇ ?

15ನೇ ಲೋಕಸಭಾ ಚುನಾವಣಾ ಫಲಿತಾಂಶವು ಸ್ವತಃ ಕಾಂಗ್ರೆಸ್ ಪಕ್ಷವೇ ನಿರೀಕ್ಷಿಸದ ಪ್ರಮಾಣದ ಸ್ಪಷ್ಟವಾದ ಸಕಾರಾತ್ಮಕ ತೀರ್ಪನ್ನು ಕಾಂಗ್ರೆಸ್‌ಗೆ ನೀಡಿದೆ. ಮೂರು ಬಗೆಯ ಕೊರತೆಯೊಂದಿಗೆ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಕಾಂಗ್ರೆಸ್‌ನದು ಅಧಿಕಾರಸ್ಥ ಪಕ್ಷವಾಗಿದ್ದರಿಂದ ಅದು ತನ್ನ ಸಾಧನೆಯಾಗಿ ಏನನ್ನು ತೋರಿಸಬೇಕೆಂಬ ಬಗ್ಗೆ ಹೆದರಿತ್ತು. ಜೊತೆಗೆ 2004 ರಲ್ಲಿದ್ದುದಕ್ಕಿಂತ ಕಡಿಮೆ ಸಂಖ್ಯೆಯ ಮತ್ತು ದುರ್ಬಲ ಪಕ್ಷಗಳೊಂದಿಗೆ ಅದು ಚುನಾವಣೆ ಎದುರಿಸಬೇಕಿತ್ತು ಮತ್ತು ಅದು ತನ್ನ ಪ್ರಧಾನಿ ಅಭ್ಯರ್ಥಿಯ ಪ್ರಶ್ನೆಯಲ್ಲಿ ಹಿಂದೆ ಬಿದ್ದಿದ್ದಂತೆ ಗ್ರಹಿಸಲಾಗಿತ್ತು.

ಅಂತಿಮವಾಗಿ ಕಾಂಗ್ರೆಸ್ ಒಟ್ಟು 206 ಸ್ಥಾನಗಳನ್ನು ಗೆದ್ದಿತು ಮತ್ತು 1991 ರ ನಂತರ ಮೊತ್ತ ಮೊದಲ ಬಾರಿಗೆ 200 ಸ್ಥಾನಗಳ ಗಡಿಯನ್ನು ದಾಟಿತು. ತಾನು ಬಲವಾಗಿರುವ ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಉತ್ತಮ ಫಲಿತಾಂಶ ದೊರೆಯಿತು. ಮತ್ತು ಪಕ್ಷವನ್ನು ಮರಳಿ ಬಲಗೊಳಿಸುವುದು ಕಷ್ಟ ಎಂಬಂತಿದ್ದ ರಾಜ್ಯಗಳಲ್ಲೂ ಸಹ ತುಲನಾತ್ಮಕವಾಗಿ ಉತ್ತಮ ಫಲಿತಾಂಶ ಗಳಿಸಿತು. ಪ್ರಬಲವಾದ ಅಥವಾ ದುರ್ಬಲವಾದ ಯಾವುದೇ ರಾಷ್ಟ್ರೀಯ ಅಲೆಯು ಇಲ್ಲದೇ ಹೋದಾಗಲೂ ಸಹ ಕಾಂಗ್ರೆಸ್‌ಗೆ ಅನುಕೂಲಕರವಾಗಿ ಒದಗಿ ಬರುವ ಒಂದು ರಾಷ್ಟ್ರವ್ಯಾಪಿ ಪ್ರವೃತ್ತಿಯೊಂದು ಇದ್ದಂತೆ ಕಂಡು ಬರುತ್ತದೆ.

ಮತ ಗಳಿಕೆಯ ವಿವರಗಳನ್ನು ಹತ್ತಿರದಿಂದ ಪರಿಶೀಲಿಸಿದಾಗ ಕಾಂಗ್ರೆಸ್‌ನ ವಿಜಯದ ಬಗೆಗೆ ಕೇಳಿ ಬಂದ ತತ್‌ಕ್ಷಣದ ಪ್ರತಿಕ್ರಿಯೆಗಳು ಉತ್ಪ್ರೇಕ್ಷೆಯಿಂದ ಕೂಡಿವೆ ಎಂದು ಕಂಡು ಬರುತ್ತದೆ. 2004ಕ್ಕಿಂತ 61 ಹೆಚ್ಚು ಸ್ಥಾನಗಳನ್ನು ಕಾಂಗ್ರೆಸ್ 2009ರಲ್ಲಿ ಗಳಿಸಿದರೂ ಕೂಡ ಅದರ ಮತಗಳಿಕೆಯು ಕೇವಲ ಶೇ2 ರಷ್ಟು ಮಾತ್ರ ಹೆಚ್ಚಳವಾಗಿದೆ. 1999 ರಲ್ಲಿ ಎನ್‌ಡಿಎ ಕೂಟ ವಿಜಯ ಗಳಿಸಿದಾಗ ಕಾಂಗ್ರೆಸ್ ಪಕ್ಷ ಗಳಿಸಿದ್ದ ಶೇ.28.6 ರಷ್ಟು ಮತಗಳನ್ನು 2009ರಲ್ಲಿಯೂ ಗಳಿಸಿದೆ. ಗಳಿಸಿದ ಮತಗಳು ಮತ್ತು ಸ್ಥಾನಗಳ ನಡುವಿನ ಅನುಪಾತದ ದೃಷ್ಟಿಯಿಂದ ಕಳೆದ ಮೂರು ಚುನಾವಣೆಯನ್ನು ಪರಿಶೀಲಿಸಬಹುದು. ಈ ಅನುಪಾತವು 1999ರಲ್ಲಿ 0.74 ಇದ್ದದ್ದು, 2004ರಲ್ಲಿ 1.01 ಕ್ಕೆ ಏರಿತು ಮತ್ತು 2009ರಲ್ಲಿ 1.34 ಕ್ಕೇರಿದೆ. ಇದನ್ನು ಮತ್ತೊಂದು ರೀತಿಯಲ್ಲಿ ಹೀಗೆ ಹೇಳಬಹುದು. ಕಾಂಗ್ರೆಸ್ ಗಳಿಸಿದ ಪ್ರತಿ ಒಂದು ಶೇಕಡಾ ಮತಗಳಿಗೆ 1999 ರಲ್ಲಿ 4 ರಷ್ಟು ಸ್ಥಾನಗಳನ್ನು ಗಳಿಸಿತ್ತು. 2004ರಲ್ಲಿ ಅದೇ ಪ್ರತಿ ಒಂದು ಶೇ. ಮತಗಳಿಗೆ 5.5 ಸ್ಥಾನಗಳನ್ನು ಗಳಿಸಿತು. 2009ರಲ್ಲಿ ಇದೇ ಪ್ರತಿ ಶೇಕಡಾ ಒಂದು ಮತಗಳಿಗೆ 7.2 ರಷ್ಟು ಸ್ಥಾನಗಳನ್ನು ಗಳಿಸಿದೆ. ಅಂದರೆ ಕಾಂಗ್ರೆಸ್‌ಗೆ ಮತಗಳಿಕೆಯಲ್ಲಿ ಈಗ ದೊಡ್ಡ ಏರಿಕೆಯೇನೂ ಆಗದಿದ್ದರೂ ಸ್ಥಾನಗಳಿಕೆಯಲ್ಲಿ ಗಣನೀಯ ಏರಿಕೆಯಾಗಿರುವುದು ಕಂಡು ಬರುತ್ತದೆ.



ಈ ರೀತಿಯ ಉತ್ತಮ ಅನುಪಾತದ ಫಲಿತಾಂಶವು ಕೇವಲ ಅದೃಷ್ಟದಿಂದ ಬಂದುದಲ್ಲ. ಸ್ಪಷ್ಟವಾಗಿ ಕಾಂಗ್ರೆಸ್ ಪಕ್ಷವು ತನ್ನ ಪ್ರಮುಖ ಯುದ್ಧ ಭೂಮಿಗಳಾದ ಆಂಧ್ರಪ್ರದೇಶ, ಕೇರಳ, ರಾಜಸ್ಥಾನ, ಉತ್ತರ ಪ್ರದೇಶಗಳಲ್ಲಿ ತನ್ನ ಶಕ್ತಿಯನ್ನು ಕೇಂದ್ರೀಕರಿಸಲು ಒತ್ತು ನೀಡಿದ್ದೇ ಇದಕ್ಕೆ ಕಾರಣ. ಆದರೆ ಅದೇ ಸಮಯದಲ್ಲಿ ಈ ರೀತಿಯ ಉತ್ತಮ ಅನುಪಾತದ ಗೆಲುವನ್ನು ರಾಷ್ಟ್ರ ಮಟ್ಟದಲ್ಲಿ ಜನರ ಆಲೋಚನೆಯಲ್ಲಿ ಮತ್ತು ರಾಜಕೀಯ ಒಲವಿನಲ್ಲಿ ಕಂಡು ಬರುತ್ತಿರುವ ಬದಲಾವಣೆಯ ಅಲೆ ಎಂದು ಭಾವಿಸಬಾರದು ಅಥವಾ ಇದೊಂದು ರಾಷ್ಟ್ರವ್ಯಾಪಿ ಬದಲಾವಣೆಯ ವಿದ್ಯಮಾನ ಎಂದೂ ಭಾವಿಸಬಾರದು.

ರಾಜ್ಯವಾರು ಅಂಕಿ-ಸಂಖ್ಯೆ ಚಿತ್ರಗಳನ್ನು ಪರಿಶೀಲಿಸಿದರೆ ಈ ಅಂಶವು ಸ್ಪಷ್ಟಗೊಳ್ಳುತ್ತದೆ. ಮತಗಳಲ್ಲಿ ಕಾಂಗ್ರೆಸ್ ಪಕ್ಷದ ಕಡೆಗಿನ ಬದಲಾವಣೆ ಎಲ್ಲೆಡೆಯೂ ಒಂದೇ ತೆರನಾಗಿಲ್ಲ. ಪ್ರಮುಖ ರಾಜ್ಯಗಳಲ್ಲಿ ಒರಿಸ್ಸಾದಲ್ಲಿ ಕಾಂಗ್ರೆಸ್ ಶೇ.7.6ರಷ್ಟು ಮತಗಳನ್ನು ಕಳೆದುಕೊಂಡಿದ್ದರೆ, ಪಂಜಾಬ್‌ನಲ್ಲಿ ಕಾಂಗ್ರೆಸ್ ಶೇ.11 ರಷ್ಟು ಮತಗಳನ್ನು ಗಳಿಸಿಕೊಂಡಿದೆ.

ಈ ಬಾರಿ ಕಾಂಗ್ರೆಸ್ ಅದೃಷ್ಟ ಹೇಗಿದೆಯೆಂದರೆ ತನ್ನ ಮತಗಳಿಕೆ ಕಡಿಮೆಯಾಗಿರುವಾಗಲೂ ಕಾಂಗ್ರೆಸ್ ಸ್ಥಾನಗಳನ್ನು ಹೆಚ್ಚು ಮಾಡಿಕೊಂಡಿದೆ. ಒರಿಸ್ಸಾದಲ್ಲಿ ಬಿಜೆಡಿ ಮತ್ತು ಬಿಜೆಪಿ ಪಕ್ಷಗಳ ಮೈತ್ರಿ ಮುರಿದು ಬಿದ್ದುದರಿಂದ ಇಂಥ ಅನುಕೂಲ ದೊರಕಿದೆ. ಈ ಬಾರಿ ಶೇ.7.ഗ ರಷ್ಟು ಮತಗಳನ್ನು ಕಳೆದುಕೊಂಡರೂ ಕಾಂಗ್ರೆಸ್ 4 ಸ್ಥಾನಗಳನ್ನು ಹೆಚ್ಚುಗಳಿಸಿಕೊಳ್ಳಲು ಸಾಧ್ಯವಾಗಿದೆ.

ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಕಾಂಗ್ರೆಸ್ ಪಕ್ಷವು ಹೆಚ್ಚು ಸ್ಥಾನಗಳಿಸಿಕೊಳ್ಳಲು ಸಾಧ್ಯವಾಗಿರುವುದು ಆಂಧ್ರದಲ್ಲಿ ಚಿರಂಜೀವಿಯ ಪ್ರಜಾರಾಜ್ಯಂ ಪ್ರವೇಶ ದಿಂದಾಗಿ ಮತ್ತು

ಇತರರು ಏನಂತಾರೆ

ಮಹಾರಾಷ್ಟ್ರದಲ್ಲಿ ರಾಜ್‌ಠಾಕ್ರೆಯ ಹೊಸ ಮಹಾರಾಷ್ಟ್ರ ನವ ನಿರ್ಮಾಣ ಸೇನೆಯ ಪ್ರವೇಶದಿಂದ. ಇವುಗಳ ಸ್ಪರ್ಧೆ ಕಾಂಗ್ರೆಸ್‌ಗೆ ಲಾಭ ಮಾಡಿಕೊಟ್ಟಿದೆ. ಮತ್ತೊಂದೆಡೆ ರಾಜಸ್ಥಾನ, ಮಧ್ಯಪ್ರದೇಶ, ಕೇರಳಗಳಲ್ಲಿ ಕಾಂಗ್ರೆಸ್‌ನ ಪರವಾದ ಬದಲಾವಣೆ ಸಾಕಷ್ಟು ಸ್ಥಾನಗಳನ್ನು ಗಳಿಸಿಕೊಟ್ಟಿದೆ. ಕಾಂಗ್ರೆಸ್ ಪಕ್ಷವು ಯಾವಾಗಲೂ ಇಂತಹ 'ವರ' ದೊರೆಯುತ್ತದೆ ಎಂದು ನಿರೀಕ್ಷಿಸುವಂತಿಲ್ಲ.

ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಕಾಂಗ್ರೆಸ್ ಪಕ್ಷವು ಗಳಿಸಿದ ಮತಗಳಿಂದ ಅದಕ್ಕೆ ಸಂತೋಷವಾಗಿರಬೇಕು. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಮತಗಳಿಕೆ ಹೆಚ್ಚಳವು ಕೆಲವು ಆಯ್ದ ಸ್ಥಳಗಳಲ್ಲಿ ಆಗಿರುವುದರಿಂದಾಗಿ ಕಾಂಗ್ರೆಸ್ ತನ್ನ ಮತದ ಅನುಪಾತಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಗಳಿಸುವುದು ಸಾಧ್ಯವಾಗಿದೆ.

ಇಷ್ಟಾದರೂ ಶೇ.18ರಷ್ಟು ಮತಗಳು ಎಂದರೆ ರಾಜ್ಯದಲ್ಲಿ ಪಕ್ಷವನ್ನು ಪುನಶ್ಚೇತನಗೊಳಿಸಲು ಬೇ... ಮೂಲ ಆಧಾರವಾಗುವುದು ಸಾಧ್ಯವಿದೆ. ಬಿಹಾರದಲ್ಲಿ ಕಾಂಗ್ರೆಸ್ ಪಕ್ಷವನ್ನು ಪುನಶ್ಚೇತನ ಗೊಳಿಸುವುದು ಉತ್ತರಪ್ರದೇಶಕ್ಕಿಂತಲೂ ಕಷ್ಟಕರ. ಆದರೆ ಲಾಲೂ ಅವರ ಆರ್.ಜೆ.ಡಿ. ಪಕ್ಷವು ಅಂತಹ ಪ್ರಯತ್ನ ನಡೆಸಲು ಕಾಂಗ್ರೆಸ್‌ಗೆ ಅವಕಾಶ ಸೃಷ್ಟಿಸಿತು. ತಮಿಳುನಾಡು, ಪಶ್ಚಿಮಬಂಗಾಳಗಳಲ್ಲಿ ಕಾಂಗ್ರೆಸ್ ಪಕ್ಷವು ಕ್ರಮವಾಗಿ ತೃಣಮೂಲ ಕಾಂಗ್ರೆಸ್ ಹಾಗೂ ಡಿಎಂಕೆ ಪಕ್ಷಗಳ ಪೂರಕ ಪಾಲುದಾರನಾಗಿ ಈ ರಾಜ್ಯಗಳ ದೊಡ್ಡ ಪಾಲುದಾರರು ಹೆಚ್ಚಿನ ಸ್ಥಾನಗಳಿಸಲು ನೆರವಾಯಿತು.

- ಮೇ 26, 2009 ರ
'ಹಿಂದೂ' ಪತ್ರಿಕೆಯಲ್ಲಿ ಪ್ರಕಟವಾದ ವಿಶ್ಲೇಷಣೆಯ ಆಯ್ದ ಭಾಗದ ಭಾವಾನುವಾದ

ನರೇಂದ್ರ ಮೋದಿ ತಳಮಳ...

ಪುಟ 7 ರಿಂದ

ಮೂರ್‍ನಾಲ್ಕು ದಿನಗಳ ನಂತರ ಇದೇ ದೇಹಗಳ ತಲೆಬುರುಡೆಗಳನ್ನು ಕ್ರಿಕೆಟ್ ಆಡಲು ತಾವು ಬಳಸುತ್ತಿದ್ದವೆಂದು ಮದನ್ ಚಾವಲ್ ಎಂಬ ಗಲಭೆಕೋರ ತೆಹಲ್ಕಾ ಕುಟುಕು ಕಾರ್ಯಾಚರಣೆಯಲ್ಲಿ ತಿಳಿಸಿದ್ದಾನೆ. ಅಡಿಷನಲ್ ಕಮೀಷನರ್ ಆಫ್ ಪೋಲೀಸ್ ಆಗಿದ್ದ ಶಿವಾನಂದ ಜಾ ಎಂಬುವನ ವ್ಯಾಪ್ತಿಯಲ್ಲಿ ಹಲವು ಕೊಲೆಗಳು, ಅತ್ಯಾಚಾರ ನಡೆದಿದ್ದು, ಗುಜರಾತ್ ಸರ್ಕಾರದ ಪರವಾಗಿ ಸುಪ್ರೀಂಕೋರ್ಟ್‌ನಲ್ಲಿ ಹಲವು ದಿಕ್ಕುತಪ್ಪಿಸುವ ಹೇಳಿಕೆಗಳನ್ನು ನೀಡಿದ್ದನು. ದುರಂತವೆಂದರೆ, ಈ ವ್ಯಕ್ತಿಯನ್ನೂ ಕೂಡ ಸುಪ್ರೀಂಕೋರ್ಟ್ ವಿಶೇಷ ತನಿಖಾ ತಂಡದ ಸದಸ್ಯನಾಗಿ ನೇಮಿಸಿದೆ.

ಗೋಧ್ರಾ, ಗಾಂಧಿನಗರ, ವಡೋಧರ, ಮೆಹ್ಸಾನಾ, ಸಬರ್‌ಕಂತಾ, ಫಟಾನ್, ಆನಂದ್, ಇತ್ಯಾದಿ ಜಿಲ್ಲೆಗಳ ಎಸ್.ಪಿ.ಗಳ ವ್ಯಾಪ್ತಿಯಲ್ಲೆಲ್ಲ ಕೋಮು ಹಿಂಸೆಗಳು ನಡೆದಿದ್ದು ಇಲ್ಲಿನ ಅಧಿಕಾರಿಗಳು ಮುಖ್ಯಮಂತ್ರಿಯವರ ಕಾನೂನುಬಾಹಿರ ಸೂಚನೆಗಳನ್ನು ದಾಖಲಿಸದೇ ಇರುವುದರ ಕುರಿತಾಗಿಯೂ ವಿಶೇಷ ತನಿಖಾ ತಂಡ ತನಿಖೆ ನಡೆಸಬೇಕಾಗಿದೆ.

ಮೋದಿ ಪುಂಡರ ನಾಯಕನೋ ಅಥವಾ ಮುಖ್ಯಮಂತ್ರಿಯೋ ?

ಗುಜರಾತಿನ ಮಾಜಿ ಡಿಜಿಪಿ ಶ್ರೀಕುಮಾರ್‌ರವರು ನ್ಯಾಯಾವಾದಿ ನಾನಾವತಿ ಆಯೋಗದ ಮುಂದೆ ಸಲ್ಲಿಸಿರುವ ವರದಿಯು ನಿಜಕ್ಕೂ ಆಘಾತಕಾರಿಯಾಗಿದೆ "ಕೋಮು ಗಲಭೆಕೋರರನ್ನು ನಿಯಂತ್ರಿಸುವಲ್ಲಿ ನಮಗೆ ತೊಡಕಾಗಿರುವುದು ಮುಖ್ಯಮಂತ್ರಿ ನರೇಂದ್ರ ಮೋದಿಯ ಮನೋಭಾವನೆಯೇ" ಎಂದು ಅಂದಿನ ಡಿಜಿಪಿ ಚಕ್ರವರ್ತಿ ನನಗೆ ತಿಳಿಸಿದರು. ಯಾವುದೇ ಕೋಮುಗಲಭೆ ನಡೆದಾಗ ಹಿಂದೂ ಮತ್ತು ಮುಸ್ಲಿಮರಿಬ್ಬರನ್ನೂ ದಸ್ತಗಿರಿ ಮಾಡಲಾಗುತ್ತದೆ, ಆದರೆ ಈ ಬಾರಿ ಹಿಂದುಗಳನ್ನು ದಸ್ತಗಿರಿ ಮಾಡುವಂತಿಲ್ಲ ಎಂದು ಮೋದಿಯು ಸೂಚನೆ ನೀಡಿದ್ದರು, ಗೋಧ್ರಾ ರೈಲು ದುರಂತದಲ್ಲಿ ಸಾವಿಗೀಡಾದವರ ಮೃತ ದೇಹಗಳನ್ನು ಅವಶ್ಯವಿಲ್ಲದಿದ್ದರೂ ಅಹಮದಾಬಾದ್ ನಗರದ ಬೀದಿ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಹಿಂದೂಗಳನ್ನು ಉದ್ರೇಕಿಸಿದ್ದರಿಂದ ಉನ್ಮತ್ತ ಹಿಂದೂಗಳನ್ನು ನಿಯಂತ್ರಿಸುವುದು ಇನ್ನಷ್ಟು ಕಷ್ಟವಾಯಿತೆಂದು ಅವರು ತಿಳಿಸಿದರು. ಅಲ್ಲದೆ ಕ್ಯಾಬಿನೆಟ್ ಸಚಿವ ಜಡೆಜಾರವರು ನನ್ನ ಕಛೇರಿಯಲ್ಲಿ ಕುಳಿತು ಪೋಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತಿದ್ದರಿಂದ ನನ್ನ ಕಾರ್ಯದಕ್ಷತೆಗೆ ಪೆಟ್ಟು ನೀಡಿತೆಂದು ಚಕ್ರವರ್ತಿ ತಿಳಿಸಿದರು. ಆದರೂ ಗಲಭೆ ಸಮಯದಲ್ಲಿ ಪೋಲೀಸರು ಹಿರಿಯ ಅಧಿಕಾರಿಗಳ ಆದೇಶಕ್ಕಿಂತ ಆಳುವ ಪಕ್ಷದ ನಾಯಕರ ಮಾತುಗಳನ್ನು ಹೆಚ್ಚು ಪಾಲಿಸಿದರು."

ಆ ಸಮಯದಲ್ಲಿ ಎಡಿಜಿಪಿ ಯಾಗಿದ್ದ ಶ್ರೀಕುಮಾರ್‌ರವರು ಮೇಲಧಿಕಾರಿಗಳಿಂದ ಮತ್ತು ಮಂತ್ರಿಗಳಿಂದ ಬರುತ್ತಿದ್ದ ಸೂಚನೆಗಳನ್ನು ತಮ್ಮ ವೈಯುಕ್ತಿಕ ಡೈರಿಯಲ್ಲಿ ದಾಖಲು ಮಾಡಿಕೊಂಡಿದ್ದು ಅದಕ್ಕೆ ತಮ್ಮ ಮೇಲಧಿಕಾರಿಯೊಬ್ಬರಿಂದ ಸಹಿ ಮಾಡಿಸಿಕೊಂಡಿದ್ದಾರೆ. ಗಲಭೆಕೋರರನ್ನು ದಸ್ತಗಿರಿ ಮಾಡದೆ ರಕ್ಷಿಸಲು ಮತ್ತು ಇನ್ನಷ್ಟು ಗಲಭೆಗಳನ್ನು ನಡೆಸಲು ಈ ಸೂಚನೆಗಳನ್ನು ನೀಡಲಾಗುತ್ತಿತ್ತು. ಖಾಸಗಿ ವಿಚಾರಣಾ ಸಮಿತಿಯ ಸದಸ್ಯರಾಗಿದ್ದ ಮಾಜಿ ಸುಪ್ರೀಂಕೋರ್ಟ್ ನ್ಯಾಯಾಧೀಶ ವಿ.ಆರ್. ಕೃಷ್ಣ ಅಯ್ಯರ್‌ರವರನ್ನು ಸಂಪರ್ಕಿಸಿದ್ದ ಕ್ಯಾಬಿನೆಟ್ ಸಚಿವರು ಯಾರೆಂದು ಪೋನ್ ಕರೆಗಳ ಹಿಸ್ಟರಿಯಿಂದ ನೋಡಿ ವರದಿ ಮಾಡಬೇಕೆಂದು ಶ್ರೀಕುಮಾರ್ ರವರಿಗೆ ಅವರ ಪ್ರಧಾನ ಕಾರ್ಯದರ್ಶಿ ಪಿ.ಕೆ ಮಿಶ್ರ ಸೂಚಿಸಿ ಆ ಸಚಿವರ ಪೋನ್ ನಂಬರ್ ಕೂಡ ನೀಡಿದ್ದರು. ಅವರು ಪೋನ್ ಹಿಸ್ಟರಿ ನೋಡಿದಾಗ ತಿಳಿದುಬಂದದ್ದು ಆ ಸಚಿವ ಹಿರೇನ್ ಪಾಂಡ್ಯಾ ಎಂದು. ಆದರೆ, ಇದು ಅಂತರರಾಜ್ಯ ವಿಷಯವಾಗಿದ್ದರಿಂದ ಸೂಕ್ಷ್ಮತ್ರೆಯುಳ್ಳದ್ದಾಗಿದ್ದರಿಂದ ಶ್ರೀಕುಮಾರ್ ಈ ವಿಷಯವನ್ನು ತನ್ನ ಮೇಲಧಿಕಾರಿಗೆ ತಿಳಿಸದಿದ್ದರೂ, ತನ್ನ ಇನ್ನೊಬ್ಬ ಸಹೋದ್ಯೋಗಿ ಪಿ.ಕೆ ಮಿಶ್ರರವರಿಗೆ ತಿಳಿಸಿದರು. ಹೀಗೆ ಮೋದಿಯು ತನ್ನ ಸಚಿವರು ಮತ್ತು ಅಧಿಕಾರಿಗಳನ್ನು ಸದಾ ತನ್ನ ಅಂಕುಶದಲ್ಲಿಟ್ಟುಕೊಂಡು ಕಾರ್ಯ ಸಾಧಿಸುತ್ತಿದ್ದರು. ಅಲ್ಲದೆ, ಗಲಭೆ ಸಮಯದಲ್ಲಿ ತನಗೆ ಬೇಕಾದ ಅಧಿಕಾರಿಗಳನ್ನು ಆಯಕಟ್ಟಿನ ಜಾಗಕ್ಕೆ ವರ್ಗಾವಣೆ ಮಾಡಿಸಿ, ಗಲಭೆಯಲ್ಲಿ ಪೂರ್ಣವಾಗಿ ಸಹಕರಿಸಿದವರಿಗೆ ಒಳ್ಳೆಯ ಹುದ್ದೆಗಳನ್ನು ಮೋದಿ ನೀಡಿರುವುದು ಕಂಡುಬಂದಿದೆ.

ಈ ಹಿನ್ನೆಲೆಯಲ್ಲಿ ವಿಶೇಷ ತನಿಖಾ ತಂಡ ಸೂಕ್ಷ್ಮವಾಗಿ ಇವೆಲ್ಲ ಅಂಶಗಳ ಕುರಿತು ಶೀಘ್ರ ನಿಷ್ಪಕ್ಷಪಾತವಾದ ತನಿಖೆ ನಡೆಸಬೇಕಾಗಿದೆ.



ಇತರರು ಏನಂತಾರೆ ?

ಹಿನ್ನಡೆ ಎಂಬ ಜಾರುಬಂಡೆ ಹಾದಿಯಲ್ಲಿ ಬಿಜೆಪಿ

ಬಿಜೆಪಿ ಪಕ್ಷ ಇಂದು ಎದುರಿಸುತ್ತಿರುವ ಬಿಕ್ಕಟ್ಟು ಮತ್ತು ಆ ಪಕ್ಷ ಅನುಭವಿಸುತ್ತಿರುವ ಹಿನ್ನಡೆ ಮಾಧ್ಯಮಗಳಲ್ಲಿ ಬಿಂಬಿತವಾದಂತೆ ಕೇವಲ ಬಿಜೆಪಿಯ ಪ್ರಚಾರ, ತಂತ್ರಗಳಿಗಷ್ಟೇ ಸಂಬಂಧಿಸಿದ್ದಲ್ಲ. ಅದನ್ನು ಮೀರಿದ ಬಿಜೆಪಿಯ ಮೂಲ ತತ್ವ, ಧೋರಣೆಗೆ ಸಂಬಂಧಿಸಿದ್ದು ಎನ್ನುತ್ತದೆ. 'ದಿ ಹಿಂದೂ' ಪತ್ರಿಕೆಯ ಈ ವಿಶ್ಲೇಷಣೆ.

ಭಾರತೀಯ ಜನತಾ ಪಕ್ಷವು ಈ ಚುನಾವಣೆಯನ್ನು ಬಹಳ ಅನುಕೂಲಕರವಾದ ಪರಿಸ್ಥಿತಿಯಲ್ಲಿ ಆರಂಭ ಮಾಡಿರದಿದ್ದರೂ ಸಹ ಬಿಜೆಪಿಯ ಈ ಚುನಾವಣೆಯ ಸೋಲಿನ ಪ್ರಮಾಣವು ನಿಜಕ್ಕೂ ಅದಕ್ಕೆ ಆಘಾತಕಾರಿಯಾಗಿದೆ. 1989 ರಲ್ಲಿ ಬಿಜೆಪಿಯು 'ಸ್ಫೋಟಕ' ರೀತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಮೂಡಿಬಂದ ಮೇಲೆ ಆ ಪಕ್ಷವು ಇದೀಗ ಅತ್ಯಂತ ಕಡಿಮೆ ಮತಗಳನ್ನು ಪಡೆದಿದೆ.

ಪ್ರಸ್ತುತ ಚುನಾವಣೆಯಲ್ಲಿ ಬಿಜೆಪಿಯು ಕೇವಲ 116 ಸ್ಥಾನವನ್ನು ಗಳಿಸಿದೆ. 2004 ರಲ್ಲಿ ಗಳಿಸಿದ್ದ 138 ರಿಂದ ಇದೀಗ 116 ಕ್ಕೆ ಬಿಜೆಪಿ ಬಲ ಕುಸಿದಿದೆ. 2004 ರಲ್ಲಿ ಗಳಿಸಿದ ಮತಗಳಿಗಿಂತ ಇದೀಗ ಶೇ.3.4 ಮತವನ್ನು ಕಳೆದುಕೊಂಡು ಬಿಜೆಪಿಯು 18.8 ಶೇಕಡಾ ಮತಗಳನ್ನು ಮಾತ್ರ ಈಗ ಗಳಿಸಿದೆ. 1998 ರ ನಂತರ ನಡೆದ ಮೂರು ಲೋಕಸಭಾ ಚುನಾವಣೆಯಲ್ಲಿಯೂ ಬಿಜೆಪಿ ಮತಗಳು ದಿನೇ ದಿನೇ ಕುಸಿತವನ್ನು ಕಾಣುತ್ತಾಬರುತ್ತಿದೆ.

ಕಾಂಗ್ರೆಸ್ ಪಕ್ಷಕ್ಕೆ ಮತಪ್ರಮಾಣದಲ್ಲಿ ದೊಡ್ಡ ಪ್ರಮಾಣದ ಗಳಿಕೆ ಏನೂ ಆಗದಿದ್ದರೂ ಬಿಜೆಪಿಗೆ ಮಾತ್ರ ಮತಗಳಿಕೆಯಲ್ಲಿ ನಕಾರಾತ್ಮಕವಾದ ದೊಡ್ಡ ನಷ್ಟವೇ ಆಗಿದೆ. ಕರ್ನಾಟಕದಲ್ಲಿ ಮೊದಲಿಗಿಂತ ಒಂದು ಸ್ಥಾನ ಹೆಚ್ಚು ಗೆದ್ದಿದ್ದು ಮತ್ತು ಹಿಮಾಚಲ ಪ್ರದೇಶ ಬಿಟ್ಟರೆ ಉಳಿದಂತೆ ಎಲ್ಲ ರಾಜ್ಯಗಳಲ್ಲಿ ಬಿಜೆಪಿಯ ಮತಗಳಿಕೆ ಪ್ರಮಾಣವು ಕುಸಿದಿದೆ. ಪಂಜಾಬ್, ಬಿಹಾರ, ಕೇರಳಗಳಲ್ಲಿ ಬಿಜೆಪಿಯ ಮತಗಳಿಕೆ ಪ್ರಮಾಣವು ಶೇ. ಒಂದರಷ್ಟರೊಳಗೆ ಕಡಿತವಾಗಿದೆ. ಆದರೆ ರಾಜಸ್ಥಾನದಂತಹ ರಾಜ್ಯದಲ್ಲಿ ಶೇ. 12.4 ರಷ್ಟು ಮತಗಳಿಕೆ ಕಡಿತವಾಗಿದೆ. ಬಿಜೆಪಿಯು ಈ ಮೊದಲು ಪ್ರಬಲವಾಗಿದ್ದ ಮತ್ತು ದುರ್ಬಲವಾಗಿದ್ದ ಎರಡೂ ಕಡೆಗಳಲ್ಲಿ ಬಿಜೆಪಿಯ ಬಲ ಕುಸಿದಿದೆ. ಈ ರೀತಿ ಮತಗಳಿಕೆಯಲ್ಲಿನ ಕುಸಿತವು ಎಲ್ಲ ಸಂದರ್ಭದಲ್ಲೂ ಬಿಜೆಪಿಯ ಸ್ಥಾನಗಳಿಕೆ ಮೇಲೆ ಪರಿಣಾಮ ಬೀರಿರಲಿಲ್ಲ, ಬಿಹಾರ, ಜಾರ್ಖಂಡ್ ಗಳಲ್ಲಿ ಬಿಜೆಪಿಯು 7 ಸ್ಥಾನಗಳನ್ನು ಹೆಚ್ಚು ಗಳಿಸಿದರೂ, ಇಂತಹ ಯಶಸ್ಸು ಅಪರೂಪದ್ದೇ. ಕರ್ನಾಟಕ, ಗುಜರಾತ್, ಛತ್ತೀಸ್‌ಗಡ, ಉತ್ತರ ಪ್ರದೇಶಗಳಲ್ಲಿ ತನ್ನ ಸ್ಥಾನ ಉಳಿಸಿ ಕೊಳ್ಳಲು ಬಿಜೆಪಿ ಶಕ್ತವಾಗಿದೆ. ಉತ್ತರಪ್ರದೇಶದಲ್ಲಿ ಬಿಜೆಪಿಯು ಕ್ರಮವಾಗಿ ಬಿಎಸ್‌ಪಿ, ಎಸ್.ಪಿ ಹಾಗೂ ಕಾಂಗ್ರೆಸ್‌ನ ನಂತರದ ನಾಲ್ಕನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. (ಉತ್ತರ ಪ್ರದೇಶದಲ್ಲಿ ಬಿಜೆಪಿಯ ಮತಗಳಿಕೆಯು 2004 ರಲ್ಲಿ ಶೇ.22.2 ಇದ್ದದ್ದು 2009 ರಲ್ಲಿ 17.5 ಕ್ಕೆ ಕುಸಿದಿದೆ)

ಮಾಧ್ಯಮಗಳಲ್ಲಿ ಕೇಳಿಬರುತ್ತಿರುವ ಟೀಕೆಗಳಷ್ಟರಿಂದಲೇ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಈ ಪರಿ ಹಿನ್ನಡೆಯನ್ನು ವಿವರಿಸಲು ಸಾಧ್ಯವಿಲ್ಲ. ನಿಜ ಬಿಜೆಪಿಯು ಕೆಲವು ತಪ್ಪುಗಳನ್ನು ಮಾಡಿತು. ಅದು ಸ್ವಚ್ಛ ವರ್ಚಸ್ಸಿನ ಪ್ರಧಾನಿಯ ಮೇಲೆ ಧಾಳಿ ಮಾಡಿತು. ಪ್ರಚಾರದ ಮಧ್ಯದಲ್ಲಿ ಪ್ರಧಾನಿಯ ಸ್ಥಾನಕ್ಕೆ ನರೇಂದ್ರ ಮೋದಿಯನ್ನು ಹೆಸರನ್ನು ತೇಲಿಬಿಟ್ಟಿತು. ವರುಣ್ ಗಾಂಧಿಯನ್ನು ಬೆಂಬಲಿಸಿತು. ಆದರೆ ಬಿಜೆಪಿ ಮಾತ್ರವೇ ಇಂತಹ ತಪ್ಪುಗಳನ್ನು ಮಾಡಲಿಲ್ಲ. ಎಂದಿನಂತೆ ಬಿಜೆಪಿಯು ಅಭ್ಯರ್ಥಿಗಳ ಆಯ್ಕೆ, ತಂತ್ರಗಳಲ್ಲಿ ಕಾಂಗ್ರೆಸ್‌ಗಿಂಗಲೂ ಮುಂದೆಯೇ ಇತ್ತು. ಚುನಾವಣಾ ಪ್ರಚಾರ ದಿಂದಾಗಿ ಬಿಜೆಪಿಯು ಇಂತಹ ಹಿನ್ನಡೆ ಅನುಭವಿಸಿತು ಎಂಬ ವಿಚಾರಕ್ಕೆ ಈ ಮೇಲಿನ ವಾಸ್ತವಗಳು ಸವಾಲೆಸೆಯುತ್ತವೆ.

ಬಿಜೆಪಿಯು ತನ್ನ ಹಿನ್ನಡೆಗೆ ಕಾರಣವಾಗಿ ತನ್ನ ಪ್ರಚಾರ ಮತ್ತು ತಂತ್ರಗಳನ್ನು ಪಕ್ಷದ ಒಟ್ಟಾರೆ ನೀತಿಯನ್ನು ಬಿಂಬಿಸಿದಷ್ಟು ಬಿಂಬಿಸಬೇಕಾಗಿಲ್ಲ. 1990 ರಲ್ಲಿ ಬಿಜೆಪಿಯು ಪ್ರವರ್ಧನ ಮಾನಕ್ಕೆ ಬರುವುದಕ್ಕೆ ಮೂರು ಬಗೆಯ ವಿಸ್ತರಣೆಗಳು ಕಾರಣವಾಗಿದ್ದವು. ಆ ಎಲ್ಲವೂ ಹಿನ್ನಡೆ ಕಾಣುತ್ತಿವೆ. ಎಲ್ಲಕ್ಕಿಂತ ಮೊದಲು ಹೊಸ ರಾಜ್ಯಗಳಲ್ಲಿ ಪಕ್ಷದ ನೆಲೆಯನ್ನು ವಿಸ್ತರಿಸಲು ಸಾಧ್ಯವಾದದ್ದು. ದಕ್ಷಿಣದಲ್ಲೂ ಹಾಗೂ ಈಶಾನ್ಯ ಭಾಗದಲ್ಲೂ ಬಿಜೆಪಿಯು ಆ ಹಂತದಲ್ಲಿ ಗಳಿಸಿದ ಮುನ್ನಡೆಯು ಈಗ ಸ್ಥಗಿತದ ಸ್ಥಿತಿಗೆ ಬಂದಿದೆ.

ಬಿಜೆಪಿಯು ಪಶ್ಚಿಮಬಂಗಾಳ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ರಾಜ್ಯಗಳಲ್ಲಿ ಸಣ್ಣ ಶಕ್ತಿಯಾಗಿದ್ದೂ ಬಹುಮುಖ್ಯ ಪಾತ್ರ ವಹಿಸುವ ಸ್ಥಿತಿಯನ್ನು ಕಳೆದುಕೊಂಡಿರುವುದನ್ನು ಈ ಚುನಾವಣೆ ಸಾಬೀತುಪಡಿಸಿದೆ. ಅಸಂಪ್ರದಾಯಿಕವಾದ ತಂತ್ರಗಾರಿಕೆ ಅಳವಡಿಸಿಕೊಳ್ಳುತ್ತ ಸಾಕಷ್ಟು ಉತ್ತಮ ಗಮನವನ್ನು ನೀಡುತ್ತಿದ್ದಾಗಲೂ ಬಿಜೆಪಿಯು ಈಶಾನ್ಯ ರಾಜ್ಯಗಳಲ್ಲಿ ಹಿನ್ನಡೆ ಕಾಣುತ್ತಿದೆ.

ಎರಡನೆಯದಾಗಿ ಬಿಜೆಪಿಯು ಹೊಸ ಹೊಸ ಮಿತ್ರ ಪಕ್ಷಗಳ ಮೂಲಕ ತನ್ನ ರಾಜಕೀಯ ಪ್ರಭಾವ ವಲಯವನ್ನು ವಿಶಾಲಗೊಳಿಸಿಕೊಂಡಿತ್ತು. 1999-2004 ರ ಅವಧಿಯಲ್ಲಿ ಬಿಜೆಪಿಯು ರಾಜಕೀಯ ವಿಸ್ತರಣೆಯ ತತ್ವವನ್ನು ಪ್ರತಿಫಲಿಸಿತು. ಆ ನಂತರ ಬಿಜೆಪಿಯು ಈ ವಿಚಾರದಲ್ಲಿ ಕುಸಿಯುತ್ತಿರುವುದನ್ನು ಕಾಣುತ್ತೇವೆ.

1999 ರಲ್ಲಿ ಎನ್‌ಡಿಎ ಯ ಮತಗಳಿಕೆಯು ಶೇ.41.1 ರಷ್ಟು ಇದ್ದದ್ದು 2004 ರಲ್ಲಿ 35.9 ಕ್ಕೆ ಕುಸಿಯಿತು. 2009 ರಲ್ಲಿ ಇದು ಕೇವಲ 24.1 ಶೇ.ಕ್ಕೆ ಕುಸಿದಿದೆ. ದೊಡ್ಡ ಮಿತ್ರ ಪಕ್ಷಗಳಾಗಿದ್ದ AIADMK ತೆಲುಗುದೇಶಂ, ಪಕ್ಷ ತೃಣಮೂಲ ಕಾಂಗ್ರೆಸ್, ಬಿಜೆಪಿಯನ್ನು ತೊರೆದಿವೆ. ಏಕೆಂದರೆ ಬಿಜೆಪಿ ಯೊಂದಿಗಿನ ಮೈತ್ರಿಯಿಂದ ಅವು ಗಳಿಸಿಕೊಳ್ಳುವುದ ಕ್ಕಿಂತ ಅಲ್ಪಸಂಖ್ಯಾತರ ಮತವನ್ನು ಕಳೆದುಕೊಳ್ಳುವುದರ ಬೆಲೆಯೇ ಹೆಚ್ಚು ಎಂದು ಅವು ಕಂಡುಕೊಂಡಿವೆ. ಈ ಬಾರಿ ಅಸ್ಸಾಂ ಗಣ ಪರಿಷತ್, ಹರ್ಯಾಣದ ಐಎನ್‌ಎಲ್‌ಡಿ ಮುಂತಾದ ಪಕ್ಷಗಳ ಸಖ್ಯವನ್ನು ಬಿಜೆಪಿ ಮರಳಿ ಗಳಿಸಿದರೂ ಈ ಪಕ್ಷಗಳೂ ಸಹ ಮುಂದೆ ಇದೇ ತೀರ್ಮಾನಕ್ಕೆ ಬರಬಹುದು.



ಓರಿಸ್ಸಾದ ಬಿಜು ಜನತಾದಳವು ಬಿಜೆಪಿ ಪಕ್ಷವನ್ನು ತೊರೆದು ದೂರ ಮಾಡಿದ ರೀತಿಯು ಬಿಹಾರದಲ್ಲಿ ಅದೇ ರೀತಿ ಮಾಡಲು ಜೆಡಿ(ಯು) ಪಕ್ಷಕ್ಕೆ ಪ್ರೇರಣೆ ನೀಡಬಹುದು. ಬಿಜೆಪಿಯ ಸ್ವಂತ ಶಕ್ತಿಯು ಕುಸಿದಂತೆ ಹಾಗೂ ವೈವಿಧ್ಯಮಯ ಶಕ್ತಿಗಳನ್ನು ಜೊತೆಗೊಳ್ಳುವ, ಒಳಗೊಳ್ಳುವ ಸಾಮರ್ಥ್ಯ ಕುಸಿದಂತೆ, ಮಿತ್ರಪಕ್ಷಗಳು ಬಿಜೆಪಿಯಲ್ಲಿ ಆಕರ್ಷಣೆ ಕಳೆದುಕೊಳ್ಳುತ್ತಿವೆ.

ಮೂರನೆಯದಾಗಿ ಬಿಜೆಪಿಯು ತನ್ನ ವಿಸ್ತರಣೆಯ ಅವಧಿಯಲ್ಲಿ ಹೊಸ ಹೊಸ ಸಾಮಾಜಿಕ ವಿಭಾಗಗಳನ್ನು ತನ್ನತ್ತ ಸೆಳೆದಿತ್ತು. ಅದು ನಗರ ಪ್ರದೇಶದಿಂದ ಗ್ರಾಮೀಣ ಪ್ರದೇಶಕ್ಕೆ ವಿಸ್ತರಿಸಿತು. ಮೇಲ್ಜಾತಿಯ ಪಕ್ಷವಾಗಿದ್ದ ಬಿಜೆಪಿಯು ಇತರ ಹಿಂದುಳಿದ ಸಮುದಾಯಗಳಲ್ಲಿ ನೆಲೆಯನ್ನು ಗಳಿಸಿಕೊಂಡಿತು. ಮಧ್ಯ ಭಾರತದಲ್ಲಿ ಬುಡಕಟ್ಟುಗಳ ಮತ ಗಳಿಸುವಲ್ಲಿ ಮುನ್ನಡೆ ಸಾಧಿಸಿತು. ಮತ್ತು ಹಿಂದೂಯೇತರ ಜನಗಳ ನಡುವೆಯೂ ಒಂದಷ್ಟು ಬೆಂಬಲ ಗಳಿಸಿತು. ಇಂತಹ - ಸಾಮಾಜಿಕವಾಗಿ ಅವಕಾಶ ವಂಚಿತವಾದ ಹೊಸ ವಿಭಾಗಗಳ ನಡುವೆ ಗಳಿಸಿದ ಬೆಂಬಲದಿಂದಾಗಿ ಬಿಜೆಪಿಯು ಅಧಿಕಾರಕ್ಕೆ ಹಕ್ಕು ಪ್ರತಿಪಾದಿಸುವ ಸ್ಥಿತಿಯಲ್ಲಿತ್ತು.

ಪ್ರಸಕ್ತ ಚುನಾವಣೆಯು ಈ ಪ್ರವೃತ್ತಿಗಳಲ್ಲಿ ಹಿನ್ನಡೆ ಅಥವಾ ಸ್ಥಗಿತತೆಯನ್ನು ದಾಖಲಿಸಿದೆ. ಕರ್ನಾಟಕವನ್ನು ಹೊರತುಪಡಿಸಿದರೆ ಬಿಜೆಪಿ ಬೇರೆಲ್ಲೂ ಹೊಸ ಸಾಮಾಜಿಕ ವಿಭಾಗಗಳ ನಡುವೆ ನೆಲೆ ಗಳಿಸಿಕೊಳ್ಳು ತ್ತಿರುವುದು ಕಂಡುಬರುತ್ತಿಲ್ಲ. ಬಿಜೆಪಿಗೆ ಆದಿವಾಸಿ ಗಳೂ ಮತ್ತು ಮುಸ್ಲೀಮರ ನಡುವೆ ಇದ್ದ ಬೆಂಬಲ ಕುಸಿಯುತ್ತಿದ್ದರೆ, ಇತರ ಹಿಂದುಳಿದ ವಿಭಾಗಗಳ ನಡುವಿನ ಬೆಂಬಲದ ಸ್ಥಗಿತತೆ ಕಂಡುಬರುತ್ತಿದೆ. ಬಿಜೆಪಿಯು ತನ್ನ ಮೂಲ ನೆಲೆಯಾದ ಮೇಲ್ಜಾತಿಯ ಜನಗಳ ಬೆಂಬಲವನ್ನೂ ಕಳೆದುಕೊಳ್ಳುವ ಆತಂಕವನ್ನು ಎದುರಿಸುತ್ತಿದೆ. ಈಗಲೂ ಕಾಂಗ್ರೆಸ್‌ಗಿಂತ ಮುನ್ನಡೆ ಕಾಯ್ದು ಕೊಂಡಿರುವ ಒಂದೇ ವಿಭಾಗವಾದ ಮೇಲ್ಜಾತಿಯ ಜನಗಳ ನಡುವೆ ಕೂಡ - ತನ್ನ ಒಟ್ಟಾರೆ ಮತ ಗಳಿಕೆಯ ಕುಸಿತದ ಸರಾಸರಿಗಿಂತಲೂ ತೀಕ್ಷ್ಣ ವಾದ ಕುಸಿತವನ್ನು ಕಾಣುತ್ತಿದೆ.

ನಗರದ ಮಧ್ಯಮವರ್ಗದ ಮತದಾರರ ನಡುವೆ ಬಿಜೆಪಿಯು ಕಾಂಗ್ರೆಸ್‌ಗಿಂತಲೂ ಹಿಂದೆಬಿದ್ದಿದೆ. ಇವೆಲ್ಲವೂ ಕೂಡ ಬಿಜೆಪಿ ಪಕ್ಷವು ಹಿನ್ನಡೆಯ ಹಾದಿಯಲ್ಲಿದೆ ಎಂಬುದನ್ನು ಖಚಿತಪಡಿಸುತ್ತದೆ. ಈ ಮೇಲೆ ಹೇಳಲಾದ ಮೂರು ರೀತಿಯ ಹಿನ್ನಡೆಯೂ ಕೂಡ ಬಿಜೆಪಿ ಪಕ್ಷವು ಅಳವಡಿಸಿಕೊಂಡಿರುವ ಮೂಲಭೂತ ರಾಜಕೀಯ ತಂತ್ರಗಾರಿಕೆಯ ಮಿತಿಗಳನ್ನು ಎತ್ತಿ ತೋರಿಸುತ್ತಿವೆ.

ಬಿಜೆಪಿಯು ಈಗ ಸೀಮಿತ ಮತಗಳಿಕೆ ಸಾಮರ್ಥ್ಯದ - ಹೊಸ ವಿಭಾಗಗಳನ್ನು ತಲುಪಲು ಅಸಮರ್ಥವಾದ - ಒಕ್ಕೂಟ ಬೆಸೆಯುವ ಸಾಮರ್ಥ್ಯದಲ್ಲಿ ದುರ್ಬಲಗೊಂಡ ಪಕ್ಷವಾಗಿದೆ.

1999 ರಲ್ಲಿ ಗಳಿಸಿದಂತಹ ವಿಜಯವನ್ನು ಗಳಿಸಬೇಕಾದಲ್ಲಿ ಕಾರ್ಗಿಲ್ ಯುದ್ಧದಂತಹ ಒಂದು ವಿಶೇಷ ಸನ್ನಿವೇಶ, ಎ.ಬಿ. ವಾಜಪೇಯಿಯಂತಹ ಎಲ್ಲರನ್ನು ಜೊತೆಗೊಯ್ಯುವ ವಿಶೇಷ ಸಾಮರ್ಥ್ಯದ ನಾಯಕತ್ವ ಮತ್ತು ಅಂದಿನ ಎನ್‌ಡಿಎ ಯಂತಹ ವಿಸ್ತೃತ ಒಕ್ಕೂಟದಿಂದ ಮಾತ್ರ ಸಾಧ್ಯ. ಈಗ ಬಿಜೆಪಿ ಪಕ್ಷವು 'ಪಕ್ಷದ ಈ ಮಿತಿಗಳಿಗೂ ಪಕ್ಷವು ಪ್ರತಿಪಾದಿಸುತ್ತಿರುವ ವಿಭಜನಕಾರಿ ಮತ್ತು ಸಂಕುಚಿತ ಧೋರಣೆಗೂ ಸಂಬಂಧ ಇದೆಯಲ್ಲವೇ?' ಎಂಬ ಪ್ರಶ್ನೆ ಕೇಳಿಕೊಳ್ಳಬೇಕಾಗಿದೆ. ಬಿಜೆಪಿಯು ಹಲವಾರು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವಂತಹ ಪಕ್ಷ ಮತ್ತು ಪ್ರಮುಖ ವಿರೋಧ ಪಕ್ಷವಾಗಿದೆ ಮತ್ತು ಎರಡನೇ ಹಂತದ ನಾಯಕತ್ವವನ್ನು ಹೊಂದಿದೆ. ಅದು ತನ್ನನ್ನು ಕುರಿತು ಈ ದೊಡ್ಡ ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ.

ಇದು ಮೇ 26, 2009 ರ ದಿ ಹಿಂದೂ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಲೇಖನದ ಭಾವಾನುವಾದ.

15ನೇ ಸಾರ್ವತ್ರಿಕ ಚುನಾವಣೆಗಳು ಕೆಲವು ಅಂಕಿ ಅಂಶಗಳು

ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಪ್ರಭಾವ ಕುಗ್ಗಿದೆಯೇ?

ಈಗಲೂ ದೇಶದಲ್ಲಿ ಅತೀ ಹೆಚ್ಚು ಲೋಕಸಭಾ ಸ್ಥಾನಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ ಗೆದ್ದ ಸ್ಥಾನಗಳನ್ನು ನೋಡಿದರೆ ಆಡಳಿತ ಪಕ್ಷ ಬಿಎಸ್‌ಪಿ ಮೂರನೇ ಸ್ಥಾನಕ್ಕೆ ಇಳಿದಿದೆ. ಇದರ ಅರ್ಥ ಅದರ ಪ್ರಭಾವ ಕುಗ್ಗಿದೆಯೆಂದೇ? ಮತಗಳ ಪ್ರಮಾಣ ನೋಡಿದರೆ ಹಾಗನಿಸುವುದಿಲ್ಲ. ವಾಸ್ತವವಾಗಿ ಅದು ಎಲ್ಲರಿಗಿಂತ ಹೆಚ್ಚು ಮತ(27.4ಶೇ.) ಗಳಿಸಿದೆ, 2004ಕ್ಕೆ ಹೋಲಿಸಿದರೆ 2.7ಶೇ. ಹೆಚ್ಚಿದೆ. ಅದಕ್ಕಿಂತ ಒಂದು ಹೆಚ್ಚು ಸೀಟು ಗಳಿಸಿದ ಕಾಂಗ್ರೆಸ್ ವಾಸ್ತವವಾಗಿ ಅದಕ್ಕಿಂತ 9.1 ಶೇ. ಕಡಿಮೆ ಮತ ಗಳಿಸಿದೆ(18.3ಶೇ.). ಕಾಂಗ್ರೆಸ್‌ಗಿಂತ 11 ಸೀಟು ಕಡಿಮೆ ಗಳಿಸಿದ ಬಿಜೆಪಿ ಮತಗಳಿಕೆ 1ಶೇ ಮಾತ್ರ ಕಡಿಮೆ. ಕಳೆದ ಬಾರಿಗೆ ಹೋಲಿಸಿದರೆ 4.7 ಶೇ. ಕಡಿಮೆ(ಸ್ಥಾನಗಳು ಹಿಂದಿನಷ್ಟೇ). ಸಮಾಜವಾದಿ ಪಕ್ಷದ ಮತಗಳಿಕೆಯೂ 3.4ಶೇ. ಇಳಿದಿದೆ.

ಮೇಲ್ನೋಟಕ್ಕೆ ಇದು ವಿಚಿತ್ರವೆನಿಸಿದರೂ ಬಿಎಸ್‌ಪಿ ಉಳಿದ ಪಕ್ಷಗಳಿಗಿಂತ ಹೆಚ್ಚು ವಿಸ್ತಾರವಾದ ನೆಲೆ ಹೊಂದಿದೆ ಎಂಬುದನ್ನು ಇದು ತೋರಿಸುತ್ತದೆ. ಒಟ್ಟು 80 ಕ್ಷೇತ್ರಗಳಲ್ಲಿ 20 ರಲ್ಲಿ ಗೆದ್ದ ಬಿಎಸ್‌ಪಿ 48 ಕ್ಷೇತ್ರಗಳಲ್ಲಿ ಎರಡನೇ ಸ್ಥಾನದಲ್ಲಿದೆ ಎಂಬುದನ್ನು ಗಮನಿಸಬೇಕು. ಅಂದರೆ ಇಡೀ ರಾಜ್ಯದಲ್ಲಿ 12 ಸ್ಥಾನಗಳನ್ನು ಬಿಟ್ಟು ಬೇರೆಲ್ಲಾ ಕಡೆ ಆ ಪಕ್ಷ ಮುಂಚೂಣಿಯಲ್ಲಿದೆ.

ಇದಕ್ಕೆ ಹೋಲಿಸಿದರೆ 22 ಕ್ಷೇತ್ರಗಳಲ್ಲಿ ಗೆದ್ದ ಸಮಾಜವಾದಿ ಪಕ್ಷ ಇನ್ನು 16 ಕ್ಷೇತ್ರಗಳಲ್ಲಿ ಮಾತ್ರ ಎರಡನೇ ಸ್ಥಾನದಲ್ಲಿತ್ತು. 21 ಸೀಟು ಪಡೆದ ಕಾಂಗ್ರೆಸ್ ಇನ್ನು 7ರಲ್ಲಿ ಮಾತ್ರ ಎರಡನೇ ಸ್ಥಾನದಲ್ಲಿತ್ತು.10 ಕ್ಷೇತ್ರಗಳಲ್ಲಿ ಗೆದ್ದ ಬಿಜೆಪಿ ಇನ್ನು 9 ಕ್ಷೇತ್ರಗಳಲ್ಲಿ ಎರಡನೇ ಸ್ಥಾನದಲ್ಲಿತ್ತು. ಅಂದರೆ ಬಿಎಸ್‌ಪಿ ರಾಜ್ಯದ 80 ಕ್ಷೇತ್ರಗಳಲ್ಲಿ 68ರಲ್ಲಿ ಪ್ರಮುಖ ಸ್ಪರ್ಧಿಯಾಗಿದ್ದರೆ, ಸಮಾಜವಾದಿ ಪಕ್ಷ 38ರಲ್ಲಿ, ಬಿಜೆಪಿ29ರಲ್ಲಿ ಮತ್ತು ಕಾಂಗ್ರೆಸ್ 28ರಲ್ಲಿ ಮಾತ್ರ ಪ್ರಮುಖ ಸ್ಪರ್ಧಿಗಳಾಗಿದ್ದವು.

ಇನ್ನೊಂದು ಗಮನಾರ್ಹ ಅಂಶವೆಂದರೆ ಮೂರು ಪಕ್ಷಗಳು 20ಕ್ಕಿಂತ ಹೆಚ್ಚು ಸೀಟು ಪಡೆದಿದ್ದರೂ ಯಾವ ಪಕ್ಷವೂ 25ರವರೆಗೆ ತಲುಪಲಿಲ್ಲ.

ಪಕ್ಷ	2009	%ಮತ	2004	%ಮತ
ಎಸ್.ಪಿ.	22	23.3	35	26.7
ಕಾಂಗ್ರೆಸ್	21	18.3	9	12.0
ಬಿಎಸ್‌ಪಿ	20	27.4	19	24.7
ಬಿಜೆಪಿ	10	17.5	10	22.2

ಕಾಂಗ್ರೆಸ್ ಮಧ್ಯಪ್ರದೇಶದಲ್ಲಿ ಬಿಜೆಪಿ ಸಮೀಪಕ್ಕೆ

ಕಳೆದ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸಿಗಿಂತ 14ಶೇ. ಹೆಚ್ಚು ಮತಗಳಿಸಿದ್ದ ಬಿಜೆಪಿ ಈ ಬಾರಿಯೂ ತನಗೆ ಹೆಚ್ಚಿನ ಸೀಟುಗಳನ್ನು ಕೊಡುವ ರಾಜ್ಯಗಳಲ್ಲಿ ಇದೂ ಒಂದು ಎಂದು ನಿರೀಕ್ಷಿಸಿತ್ತು. ಕೆಲವೇ ತಿಂಗಳು ವಿಧಾನ ಸಭಾ ಚುನಾವಣೆಗಳಲ್ಲಿ ಗೆದ್ದದ್ದು ಆಸೆ ಗರಿಗೆದರಿಸಿತ್ತು. ಅದರ ಮತಗಳಿಕೆಯಲ್ಲಿ ಈ ಬಾರಿ 4.6 ಶೇ. ಇಳಿಕೆ ಕಂಡುಬಂದಿದೆ. ಆದರೆ ಕಾಂಗ್ರೆಸ್ ಮತಗಳಿಕೆ ಹೆಚ್ಚಳ 6ಶೇ. ಅಂದರೆ ಈಗಲೂ ಕಾಂಗ್ರೆಸ್ ಹಿಂದೆಯೆ ಉಳಿದಿದ್ದರೂ ಅಂತರ 3.4ಶೇ ಕ್ಕೆ ಇಳಿದಿದೆ. ಇದರಿಂದಾಗಿ ಸೀಟುಗಳ ಅಂತರ 21ರಿಂದ ಕೇವಲ 4ಕ್ಕೆ ಇಳಿದಿದೆ. ಈ ಬಾರಿ 1.1 ಶೇ. ಹೆಚ್ಚು ಮತ ಪಡೆದ ಬಿಎಸ್‌ಪಿ ಒಂದು ಕ್ಷೇತ್ರವನ್ನು ಪಡೆದುಕೊಂಡಿದೆ. ಇದು 15ನೇ ಲೋಕಸಭೆಯಲ್ಲಿ ಉತ್ತರ ಪ್ರದೇಶದ ಆಚೆಗೆ ಅದು ಪಡೆದಿರುವ ಏಕೈಕ ಸೀಟು.

ಪಕ್ಷ	2009	%ಮತ	2004	%ಮತ
ಬಿಜೆಪಿ	16	43.5	25	48.1
ಕಾಂಗ್ರೆಸ್	12	40.1	4	34.1
ಬಿಎಸ್‌ಪಿ	1	5.9	0	4.8
ಎಸ್.ಪಿ	0	2.8	0	3.2

ಛತ್ತೀಸ್‌ಗಡದಲ್ಲಿ ಕಾಂಗ್ರೆಸ್ ಗಳಿಕೆಯಲ್ಲೂ ಇಳಿಕೆ

13ನೇ ಲೋಕಸಭಾ ಚುನಾವಣೆಯ ವರೆಗೆ ಮಧ್ಯಪ್ರದೇಶದ ಭಾಗವಾಗಿದ್ದ ಈ ರಾಜ್ಯದಲ್ಲಿ ಬಿಜೆಪಿ ತನ್ನ ಸ್ಥಾನ ಉಳಿಸಿಕೊಂಡಿದೆ. ಆದರೆ ಅದರ ಮತಗಳಿಕೆಯಲ್ಲಿ 2.8ಶೇ. ಇಳಿಕೆಯಾಗಿದೆ. ಆದರೂ ಕಾಂಗ್ರೆಸಿಗೆ ತನ್ನ ಸೀಟನ್ನು ಹೆಚ್ಚಿಸಿಕೊಳ್ಳಲಾಗಿಲ್ಲ. ಕಾರಣ ಅದರ ಮತಗಳಿಕೆಯೂ 2.9ಶೇ. ಇಳಿದಿದೆ.

ಪಕ್ಷ	2009	%ಮತ	2004	%ಮತ
ಬಿಜೆಪಿ	10	15.0	10	47.8
ಕಾಂಗ್ರೆಸ್	1	37.3	1	40.2

ಝಾರ್ಖಂಡದಲ್ಲಿ ಕಾಂಗ್ರೆಸ್ ಗಳಿಕೆಯಲ್ಲಿ ಗಮನಾರ್ಹ ಇಳಿಕೆ

ಇಲ್ಲಿಯೂ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಮತಗಳನ್ನು ಕಳಕೊಂಡಿವೆ. ಕಾಂಗ್ರೆಸ್ ಕಳಕೊಂಡಿರುವುದು 6.4ಶೇ. ಮತ್ತು ಬಿಜೆಪಿ 5.5ಶೇ.ಆದರೂ ಬಿಜೆಪಿ ಸೀಟುಗಳ ಸಂಖ್ಯೆ ಗಮನಾರ್ಹವಾಗಿ ಏರಿದ್ದರೆ, ಕಾಂಗ್ರೆಸಿನದ್ದು ಅಷ್ಟೇ ಗಮನಾರ್ಹವಾಗಿ ಇಳಿದಿದೆ. ಕಾಂಗ್ರೆಸ್ ಜತೆಗಿರುವ ಝಾರ್ಖಂಡ್ ಮುಕ್ತಿ ಮೋರ್ಚಾ ಕೂಡಾ 4.6 ಶೇ. ಮತಗಳನ್ನು ಮತ್ತು ಅರ್ಧದಷ್ಟು ಸೀಟುಗಳನ್ನು ಕಳಕೊಂಡಿದೆ. ಇಂತಹ ಸ್ಥಿತಿಗೆ ಒಂದು ಕಾರಣ ಹಿಂದಿನ ಬಿಜೆಪಿ ಮುಖ್ಯಮಂತ್ರಿ ಬಾಬುಲಾಲ್ ಮರಾಂಡಿಯವರ ಹೊಸ ಪಕ್ಷ ಝಾರ್ಖ[illegible] ವಿಕಾಸ್ ಮೋರ್ಚಾ. ಅದು ಒಂದು ಸ್ಥಾನವನ್ನು ಗಳಿಸಿದೆ. ಅಲ್ಲದೆ ಇಬ್ಬರು ಪಕ್ಷೇತರರು ಗೆದ್ದಿದ್ದಾರೆ.

ಪಕ್ಷ	2009	%ಮತ	2004	%ಮತ
ಬಿಜೆಪಿ	8	27.5	1	33
ಕಾಂಗ್ರೆಸ್	1	15.0	6	21.4
ಜೆಎಂಎಂ	2	11.7	4	16.3
ಆರ್‌ಜೆಡಿ	0	5.3	2	3.5
ಸಿಪಿಐ	0	1.2	1	3.8

ಪಂಜಾಬಿನಲ್ಲಿ ಅಕಾಲಿ ನೆಲೆ ಇಳಿದಂತಿಲ್ಲ

ಪಂಜಾಬಿನಲ್ಲಿ ಈ ಬಾರಿ ಕಾಂಗ್ರೆಸಿನ ಸೀಟುಗಳ ಸಂಖ್ಯೆ 2ರಿಂದ 8 ಕ್ಕೇರಿದ್ದರಿಂದ ಅಲ್ಲಿಯ ಮತದಾರರು ಅಕಾಲಿ ನೇತೃತ್ವದ ಸರಕಾರದ ವಿರುದ್ಧ ಬೃಹತ್ ಪ್ರಮಾಣದಲ್ಲಿ ತೀರ್ಪು ನೀಡಿದ್ದಾರೆ ಎಂದು ಅಲ್ಲಿನ ಕಾಂಗ್ರೆಸ್ ಮುಖಂಡರು ಹೇಳಿಕೊಳ್ಳುತ್ತಿದ್ದಾರೆ. ಆದರೆ ಮತಗಳಿಕೆಯ ಪ್ರಮಾಣ ಇದನ್ನು ಸೂಚಿಸುವುದಿ[illegible] ಅಕಾಲಿ ದಳ-ಬಿಜೆಪಿ ಕೂಟದ ಸೀಟುಗಳ ಪ್ರ[illegible] 11ರಿಂದ 5 ಕ್ಕೆ ಇಳಿದರೂ ಮತಗಳಿಕೆಯಲ್ಲಿ ತಲಾ 0.4ಶೇ. ಅಂದರೆ ಒಟ್ಟು 0.8ಶೇ. ಮಾತ್ರ ಇಳಿಕೆಯಾಗಿದೆ. ಆದರೆ ಕಾಂಗ್ರೆಸಿನ ಮತಗಳಿಕೆಯಲ್ಲಿ 11 ಶೇ. ಏರಿಕೆಯಾಗಿದೆ. ಆದರೆ ಈ ಮತಗಳು ಅಕಾಲಿ ದಳ- ಬಿಜೆಪಿ ಕೂಟದ ನೆಲೆಗಳಿಂದ ಬಂದಂತಿಲ್ಲ. ಹಿಂದೆಯೂ ಈ ಕೂಟದ ವಿರುದ್ಧವಿದ್ದ ಮತಗಳಲ್ಲಿ ಹೆಚ್ಚಿನವು ಈ ಬಾರಿ ಕಾಂಗ್ರೆಸಿಗೆ ದೊರೆತಂತಿದೆ.

ಪಕ್ಷ	2009	%ಮತ	2004	%ಮತ
ಕಾಂಗ್ರೆಸ್	8	45.2	2	34.2
ಅಕಾಲಿ ದಳ	4	33.9	8	34.3
ಬಿಜೆಪಿ	1	10.1	3	10.5

ಕಾಮ್ರೆಡ್ ಇಎಂಎಸ್ ಜನ್ಮಶತಾಬ್ಧಿ....

ಪುಟ 6 ರಿಂದ

ಕಮ್ಯುನಿಸ್ಟ್ ದೃಷ್ಟಿಕೋನವನ್ನು ಮತ್ತು ಆಚರಣೆಯನ್ನು ಬೆಳೆಸಲು ಅವರಿಗೆ ಸಾಧ್ಯವಾಯಿತು. ಇದು ಕೆಳಜಾತಿಗಳ ಜನರ ಜಾತಿ-ವಿರೋಧಿ ಬಂಡಾಯ ಹಾಗೂ ಪ್ರಜಾಸತ್ತಾತ್ಮಕ ಆಶಯಗಳನ್ನು ಶ್ರಮಜೀವಿಗಳ ಆಂದೋಲನದ ಒಟ್ಟಾರೆ ಗುರಿಗಳಿಗೆ ಅಳವಡಿಸಿತು. ಕಮ್ಯುನಿಸ್ಟರ ಆರಂಭದ ಪೀಳಿಗೆಗಳ ಹಲವರಂತೆ ಇಎಂಎಸ್ ಜಾತಿ ವ್ಯವಸ್ಥೆಯ ವಾಸ್ತವತೆಗಳನ್ನು ಉಪೇಕ್ಷಿಸಲಿಲ್ಲ. ಬದಲಿಗೆ ಸಾಮಾಜಿಕ ಬದಲಾವಣೆಯ ಚಾಲಕ ಶಕ್ತಿಯನ್ನು ದುಡಿಯುವ ಜನಗಳ ವ್ಯಾಪಕ ಐಕ್ಯತೆಗೆ ಬಳಸಿಕೊಳ್ಳಲು ಅವರಿಗೆ ಸಾಧ್ಯವಾಯಿತು. ತಮ್ಮ ನಂತರದ ಬದುಕಿನ ದಿನಗಳಲ್ಲಿಯೂ ಇಎಂಎಸ್ ಸದಾ ಬದಲಾಗುತ್ತಿರುವ ಜಾತಿ-ವರ್ಗ ಸಂಬಂಧಗಳಿಗೆ ಮಾರ್ಕ್ಸ್‌ವಾದವನ್ನು ಅನ್ವಯಿಸಲು ಪ್ರಯತ್ನಿಸಿದರು. ಒಬ್ಬ ಯಥಾರ್ಥ ಮಾರ್ಕ್ಸ್‌ವಾದಿಯಾಗಿ ಇಎಂಎಸ್‌ರವರ ಆಸಕ್ತಿ ಸಮಾಜ ಮತ್ತು ಸಾಮಾಜಿಕ ಬದಲಾವಣೆಯ ಎಲ್ಲಾ ಆಯಾಮಗಳನ್ನು ಆವರಿಸಿತ್ತು. ಸಂಸತಿಯ ವ್ಯಾಖ್ಯಾನದಲ್ಲಿಯೂ ಮತ್ತು ಆಳುವ ವರ್ಗಗಳ ಸಾಂಸತಿಕ ಯಜಮಾನಿಕೆಗೆ ಪರ್ಯಾಯವಾಗಿ ಒಂದು ಸಾಂಸತಿಕ ಪ್ರಾಬಲ್ಯವನ್ನು ಕಟ್ಟುವ ದಾರಿಗಳ ಬಗ್ಗೆಯೂ ಅವರಲ್ಲಿ ಹಲವು ಒಳನೋಟಗಳಿದ್ದವು ಸಾಮಾಜಿಕ ಸುಧಾರಣೆಗಾಗಿ ಹೋರಾಡುವ ಅವರ ಆರಂಭದ ದಿನಗಳಿಂದಲೂ ಅವರು ಮಹಿಳಾ ವಿಮೋಚನೆಗೆ ಆಳವಾದ ಬದ್ಧತೆ ಹೊಂದಿದ್ದರು. ಪ್ರಧಾನ ಕಾರ್ಯದರ್ಶಿಯಾಗಿ ಅವರು ಲಿಂಗ ಸಮಾನತೆಯ ಮತ್ತು ಮಹಿಳೆಯರ ದಮನದ ಪ್ರಶ್ನೆಗಳನ್ನು ಪಕ್ಷವು ಕೈಗೆತ್ತಿಕೊಳ್ಳುವಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ದೈನಂದಿನ ಸಂವಾದ

ಇಎಂಎಸ್ ರವರ ನಾಲ್ಕನೆಯ ವಿಶೇಷತೆ ಯೆಂದರೆ ಪಕ್ಷದ ವಿಚಾರಗಳನ್ನು ಮತ್ತು ರಾಜಕೀಯವನ್ನು ಜನಗಳಿಗೆ ಮುಟ್ಟಿಸುವಲ್ಲಿ ಅವರ ಸರಿಸಾಟಿಯಿಲ್ಲದ ಪಾತ್ರ. ಬೇರೆ ಯಾವ ಕಮ್ಯುನಿಸ್ಟ್ ಮುಖಂಡರೂ ಇಷ್ಟೊಂದು ಅದ್ಭುತ ಪ್ರಮಾಣದಲ್ಲಿ ಲೇಖನಗಳನ್ನು, ವಿಮರ್ಶೆಗಳನ್ನು, ವ್ಯಾಖ್ಯಾನಗಳನ್ನು ಮತ್ತು ಪುಸ್ತಕಗಳನ್ನು ಬರೆದಿಲ್ಲ. ಕೇರಳದಲ್ಲಿ ಅವರ ದೈನಂದಿನ ಬರಹಗಳ ಮೂಲಕ ಇಎಂಎಸ್ ಮತ್ತು ಜನತೆಯ ನಡುವೆ ಒಂದು ಅಸಾಧಾರಣವಾದ ಸಂವಾದ ನಡೆಯುತ್ತಿತ್ತು.

ಇಎಂಎಸ್ 1935ರಲ್ಲಿ ಕೇರಳದಲ್ಲಿ ಸಿಎಸ್‌ಪಿಯ ಪತ್ರಿಕೆಯಾಗಿ ಆರಂಭವಾದ 'ಪ್ರಭಾತಂ'ನಿಂದ ಹಿಡಿದು, ತನ್ನ ಕೊನೆಯ ವರ್ಷಗಳಲ್ಲಿ ಮತ್ತೊಮ್ಮೆ 'ದೇಶಾಭಿಮಾನಿ'ಯ ಮುಖ್ಯ ಸಂಪಾದಕರಾಗಿ ಪಕ್ಷದ ಹಲವಾರು ಪ್ರಕಟಣೆಗಳ ಸಂಪಾದಕರಾಗಿದ್ದರು. ನಡುವೆ ಅವಿಭಜಿತ ಪಕ್ಷದ ಪತ್ರಿಕೆಗಳ ಮತ್ತು 'ಪೀಪಲ್ಸ್ ಡೆಮಾಕ್ರಸಿ' ಹಾಗೂ 'ದಿ ಮಾರ್ಕ್ಸಿಸ್ಟ್' ಪತ್ರಿಕೆಗಳ ಸಂಪಾದಕರಾಗಿದ್ದರು. ಮಲೆಯಾಳಂನಲ್ಲಿ ಇಎಂಎಸ್ ಬರಹಗಳ ಸಂಗ್ರಹಗಳು ಪ್ರಕಟವಾಗುತ್ತಿದ್ದು ಅದು ನೂರು ಸಂಪುಟಗಳಿಗಿಂತಲೂ ಹೆಚ್ಚಾಗಲಿದೆ. ಈ ಎಲ್ಲಾ ಬರಹಗಳು ಒಟ್ಟಾಗಿ ಜನತೆಗೆ ಮತ್ತು ದೇಶಕ್ಕೆ ಒಂದು ಉತ್ತೇಜನಕಾರಿಯಾದ ಹಾಗೂ ಬಹುಕಾಲ ಬಾಳುವ ಬಳುವಳಿ.

ಇಎಂಎಸ್‌ರವರ ಐದನೇ ವಿಶೇಷತೆ ಎಂದರೆ ಅವರೊಬ್ಬ ವಿಶಿಷ್ಟ ಅಚ್ಚಿನಲ್ಲಿ ಎರಕಗೊಂಡ ಕಮ್ಯುನಿಸ್ಟರಾಗಿದ್ದರು. ಅಗಾಧ ಬೌದ್ಧಿಕ ಶಕ್ತಿ ಹೊಂದಿದ್ದರೂ ಅವರು ವಿನಯಶೀಲರಾಗಿದ್ದರು, ದುರಭಿಮಾನ ಎಂಬುದು ಅವರಲ್ಲಿ ಇರಲೇ ಇಲ್ಲ. ಕೇರಳದ ಜನತೆಯ ಪ್ರೀತಿ ಮತ್ತು ಗೌರವ ಎ[illegible] ಅವರ ತಲೆಗೇರಲಿಲ್ಲ. ಅತ್ಯಂತ ಸರಳ ಜೀವನ ನಡೆಸಿದ ಅವರು ತನ್ನ ಆಸ್ತಿಯನ್ನು ಪಕ್ಷಕ್ಕೆ ಬಿಟ್ಟು ಕೊಟ್ಟರು. ಮುಂದಾಳುವಾಗಿ ಅವರು ಪ್ರಜಾಸತ್ತಾತ್ಮಕ ಕಾರ್ಯ ನಿರ್ವಹಣೆಯ ಮಾದರಿಯನ್ನು ಹಾಕಿಕೊಟ್ಟರು ಮತ್ತು ಕಾರ್ಯಕರ್ತರು ಜನಗಳ ನಿರೀಕ್ಷೆಗೆ ಅನುಗುಣವಾಗಿರುವಂತೆ ಕೇವಲ ತನ್ನ ಮೇಲ್ಪಂಕ್ತಿಯ ಮೂಲಕವೇ ದೊಡ್ಡ ನೈತಿಕ ಪ್ರಭಾವ ಬೀರಿದರು.

ಭಾರತದಲ್ಲಿ ಕಮ್ಯುನಿಸ್ಟ್ ಮತ್ತು ಎಡಪಂಥೀಯ ಆಂದೋಲನಕ್ಕೆ ಇಎಂಸ್ ನಂಬೂದಿರಿಪಾಡ್‌ರವರ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕೆಲಸ ಒಂದು ಶ್ರೀಮಂತ ಮತ್ತು ಶಾಶ್ವತ ಬಳುವಳಿ. ಆ ಬಳುವಳಿಯ ಸಾರವನ್ನು, ಅಂದರೆ ಮಾರ್ಕ್ಸ್‌ವಾದಿ ತತ್ವಗಳ ಅಧ್ಯಯನ, ಸಮಾಜದ ಜೀವಂತ ಮತ್ತು ಮೂರ್ತ ಪರಿಸ್ಥಿತಿಗಳಿಗೆ ಅವುಗಳ ಅನ್ವಯ, ಸಮಾಜವಾದದ ವಿಮೋಚಕ ಗುರಿಯ ಬಗ್ಗೆ ದೃಢ ನಂಬಿಕೆ ಮತ್ತು ಜನಗಳೊಂದಿಗೆ ಸಂಪೂರ್ಣ[illegible] ಗುರುತಿಸಿಕೊಳ್ಳುವುದು- ಇವನ್ನೆಲ್ಲ ಜನತೆಯ ಗುರಿ ಸಾಧನೆಗೆ ಬದ್ಧರಾದ ಕಾರ್ಯಕರ್ತರ ಮುಂದಿನ ಪೀಳಿಗೆಗಳಿಗೆ ಒಯ್ಯಬೇಕಾಗಿದೆ.

ಕಟ್ಟಡ ಕಟ್ಟುವ ಕಾರ್ಮಿಕರ ಬದುಕು ಸದಾ ಅಪಾಯದ ಆತಂಕಕ್ಕೆ ಒಡ್ಡಿಕೊಂಡಿರುವಂತಹದ್ದು. ಇವರಿಗೆ ಉದ್ಯೋಗ ಭದ್ರತೆ, ಜೀವನ ಸುರಕ್ಷತೆ, ಇತ್ಯಾದಿ ಆಗಬೇಕಾದದ್ದು ಹಲವಿದೆ. ಸರ್ಕಾರ ಸಾರುವ ಸೌಲಭ್ಯಗಳು ಕಾಗದದಲ್ಲೇ ಉಳಿದಿವೆ. ಎಷ್ಟೋ ಬಾರಿ ದುಡಿದದ್ದಕ್ಕೆ ಕೂಲಿಯೂ ದಕ್ಕುವುದಿಲ್ಲ. ಈ ಕಾರ್ಮಿಕರ ಸಂಕಷ್ಟಗಳ ಕುರಿತು ಬೆಳಕು ಚೆಲ್ಲುವ ಒಂದು ಬರಹ.

ಮೆಗಾಸಿಟಿ ಬೆಂಗಳೂರಿನಲ್ಲಿ ಕಟ್ಟಡ ಕಾರ್ಮಿಕರ ಸಂಕಷ್ಟಗಳು ಮತ್ತು ಸಂಘಟನೆ


ಎಸ್. ಶಂಕರ್

ಕಳೆದ ಕೆಲವು ತಿಂಗಳುಗಳ ಹಿಂದೆ ಸಿಪಿಐ(ಎಂ)ಪಕ್ಷದಿಂದ ಮನೆ ಇಲ್ಲದವರಿಗೆ ಮನೆ ನೀಡಬೇಕು, ರೇಷನ್ ಕಾರ್ಡ್‌ನಲ್ಲಿ 14 ಜೀವನ [illegible]ಶ್ಯಕ ವಸ್ತುಗಳನ್ನು ನೀಡಬೇಕು ಎಂದು ನಿರಂತರ ಧರಣಿ ಕಾರ್ಯಕ್ರಮ ನಡೆಯುತ್ತಿತ್ತು. ಅಂದು ಬುಧವಾರ. ಮಡಿವಾಳ ವಲಯದ ಮನೆ ಇಲ್ಲದ ರೇಷನ್ ಕಾರ್ಡ್ ಇಲ್ಲದ ದುಡಿಯುವ ಜನ ಧರಣಿಯಲ್ಲಿ ಕುಳಿತಿದ್ದರು. ನಾನು ಧರಣಿಯಲ್ಲಿ ಭಾಗವಹಿಸಿದ್ದೆ, ಅಂದು ಮಧ್ಯಾಹ್ನ 2 ಗಂಟೆಗೆ ರಾಯಚೂರಿನ ಬಸವರಾಜ್ ಎಂಬ ಕಟ್ಟಡ ಕಾರ್ಮಿಕ ಫೋನ್ ಮಾಡಿ ಸಂಜೆ 5 ಗಂಟೆಗೆ ಭೇಟಿ ಮಾಡಿದರು. ಬೆಂಗಳೂರಿನ ಮಲ್ಲೇಶ್ವರದ ಬಳಿ ಇರುವ ಜಕ್ಕರಾಯನ ಕೆರೆ ಹತ್ತಿರ ಒಂದು ನಿರ್ಮಾಣ ಕಾಮಗಾರಿಯಲ್ಲಿ ಸುಮಾರು 25 ಜನ ಕೆಲಸ ಮಾಡುತ್ತಿದ್ದು, ನಿರ್ಮಾಣಕ್ಕೆಂದು ದೊಡ್ಡ ಹಳ್ಳ ತೋಡಿ ಅಲ್ಲಿ ಕೆಲಸ ಮಾಡಲು ಮಾಲೀಕ ಒತ್ತಾಯಿಸಿದ, ಮಣ್ಣು ಕುಸಿದು ಕಾರ್ಮಿಕರಿಗೆ ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಇರುವುದರಿಂದ ಯಾರೂ ಕೆಲಸ ಮಾಡಲು [illegible]ಲ್ಲ. ಅದಕ್ಕೆ ಮಾಲೀಕ ಅವರಿಗೆ ಬರಬೇಕಾದ ವೇ[illegible] 20 ಸಾವಿರ ರೂ.ಗಳನ್ನು ನೀಡದೆ, 'ಕೊಡುವುದಿಲ್ಲ ಏನು ಬೇಕಾದರೂ ಮಾಡಿಕೊಳ್ಳಿ' ಎಂದ.

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್ (ಸಿಐಟಿಯು/ಸಿಡಬ್ಲೂಎಫ್ಐ) ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಕಾಂ:ವೀರಮಣಿ, ಖಜಾಂಚಿ ಕಾಂ: ಪಾರ್ಥಿಬನ್ ಹೋಗಿ ವೇತನ ನೀಡುವಂತೆ ಮಾಲೀಕನ ಮೇಲೆ ಒತ್ತಾಯಿಸಿದ ತಕ್ಷಣ ಕಾರ್ಮಿಕ ಬಸವರಾಜ್‌ಗೆ ಚೆಕ್‌ಕೊಟ್ಟು ಕಳುಹಿಸಿದ.

* * *

ಚಕ್ರವರ್ತಿ ಎಂಬ ಇನ್ನೊಬ್ಬ ಕಾರ್ಮಿಕ ರಾಮಮೂರ್ತಿನಗರದಲ್ಲಿ ತನ್ನ ಗೆಳೆಯನ ಮನೆಯನ್ನು ರಿಪೇರಿ ಮಾಡಿದ ಮತ್ತು ಎರಡು ಅಂತಸ್ತುಗಳ ಕೆಲಸ ಮಾಡಿ ಮುಗಿಸಿದ. ಗೆಳೆಯನ ಹತ್ತಿರ ಯಾವುದೇ ಲಿಖಿತ ಒಪ್ಪಂದ ಮಾಡಿಕೊಳ್ಳಲಿಲ್ಲ. ಚಕ್ರವರ್ತಿ ಕೆಲಸ ಮುಗಿದ ಮೇಲೆ ಕೊಡಬೇಕಾದ 35 ಸಾವಿರ ಬಾಕಿ ವೇತನ ಕೇಳಿದರೆ 'ನೀನು ಮನೆ ಕಟ್ಟಿರುವುದು ಸರಿಯಿಲ್ಲ, ಪಕ್ಕದ ಮನೆಯ ಮೇಲೆ ಇಟ್ಟಿಗೆ ಬೀಳಿಸಿ, ಶೀಟು ಹೊಡೆದು ಹಾಕಿದ್ದೀಯಾ. ನಾನು ನಿನಗೆ ಯಾವುದೇ ಹಣ ಕೊಡಬೇಕಾಗಿಲ್ಲ' ಎಂದ. ಸಂಘ ಮಧ್ಯ ಪ್ರವೇಶ ಮಾಡಿದ ಮೇಲೆ ಸ್ಥಳೀಯ ಪೋಲಿಸ್ ಠಾಣೆಗೆ 'ನನ್ನ ನಿರ್ಮಾಣದ ಎಲ್ಲಾ ಹಣ ನೀಡಿದ್ದು, ನನ್ನ ಮನೆ ಪೂರ್ಣ ಕೆಲಸ



ಮುಗಿಸಿಲ್ಲ' ಎಂದು ದೂರು ದಾಖಲಿಸಿ ಕಾರ್ಮಿಕನನ್ನು ಕರೆಸಿ ನನ್ನ ಹಣ ನನಗೆ ಕೊಡಿಸಿ, ಇಲ್ಲವೆ ನಿರ್ಮಾಣ ಕೆಲಸ ಪೂರ್ಣ ಮಾಡಿಸಿಕೊಡಿ' ಎಂದು ಪೋಲೀಸರ ಮೂಲಕ ಬೆದರಿಸಲು ಆರಂಭಿಸಿದ. ಕೆ.ಆರ್.ಪುರ ಪ್ರದೇಶದ ಸಿಐಟಿಯು, ಜೆಎಂಎಸ್, ಸಿಡಬ್ಲೂಎಫ್ಐ, ಮುಖಂಡರ ಮಧ್ಯ ಪ್ರವೇಶದಿಂದ ಆತನ ವೇತನ ಬಾಕಿ ಕೊಡಿಸಲಾಯಿತು.

* * *

ಬಿಡದಿಯ ಕೈಗಾರಿಕಾ ಪ್ರದೇಶದಲ್ಲಿ 'ಇನೋರ್ವ ಫಿಲಂ ಸಿಟಿ' ಯಲ್ಲಿ ಕಳೆದ ಐದು ವರ್ಷದಿಂದ ನಿರ್ಮಾಣ ಕೆಲಸದಲ್ಲಿ ತೊಡಗಿರುವ ರಾಯಚೂರಿನ ವೆಂಕಟೇಶ್, ಗುಲ್ಬರ್ಗಾದ ತಿಮ್ಮಣ್ಣ ಇಬ್ಬರಿಗೂ ಸೇರಿ 70 ಸಾವಿರ ರೂ. ವೇತನವನ್ನು ಮಾಲೀಕ ಬಾಕಿ ಉಳಿಸಿಕೊಂಡಿದ್ದು, ಕೇಳಲು ಹೋದರೆ ಸೆಕ್ಯೂರಿಟಿ ಒಳಗೇ ಬಿಡುವುದಿಲ್ಲ.

* * *

ಮೈಸೂರು ಬ್ಯಾಂಕ್ ವೃತ್ತದಲ್ಲಿ ಮಹಾರಾಣಿ ಕಾಲೇಜ್‌ಗೆ ಹೋಗುವ ರಸ್ತೆಯಲ್ಲಿ ಅಗಲೀಕರಣ ಕಾಮಗಾರಿಗೆ ಸೆಂಟ್ರಲ್ ಕಾಲೇಜಿನ ಕಾಂಪೌಂಡ್ ಗೋಡೆ ಕೆಡಿವಿದ್ದು, ಆಂಧ್ರದಿಂದ ವಲಸೆ ಬಂದ ಕಾರ್ಮಿಕ ರವಿ ಮತ್ತು ಶಂಕರ್ ಮಾಲೀಕನಿಂದ ಬರಬೇಕಾದ ವೇತನ ಬಾಕಿ 25 ಸಾವಿರ ರೂ.ಗಳನ್ನು ಕೇಳಿದ್ದಕ್ಕೆ, ಮಚ್ಚು, ಲಾಂಗು ತೆಗೆದುಕೊಂಡು ಬಂದು ಬೆದರಿಸಿದರು ಎಂದು ಗುತ್ತಿಗೆದಾರ ಅಲಸೂರು ಗೇಟ್ ಪೋಲೀಸ್ ಠಾಣೆಗೆ ದೂರು ನೀಡಿದ. ಕಾರ್ಮಿಕರನ್ನು ಬಂಧಿಸಿ ಠಾಣೆಗೆ ಕರೆದೊಯ್ದರು.

ಪುಟ 14ಕ್ಕೆ

ಮರೀಚಿಕೆಯಾದ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ

'ಫಲಾನುಭವಿಗಳಾಗಲು ಮರಣ ಹೊಂದಬೇಕೆ ?' ಕಟ್ಟಡ ಕಾರ್ಮಿಕರ ಪ್ರಶ್ನೆ

ಸತ್ಯಬೋಧ ಕಾಗಲಕರ್

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಗುಲ್ಬರ್ಗಾ ಜಿಲ್ಲೆಯ ಕಟ್ಟಡ [illegible]ರ್ಮಿಕರಿಗೆ ಗಗನಕುಸುಮವಾಗಿದೆ. ನೋಂದಣಿ ಮಾಡಿಸಿಕೊಂಡವರು ಫಲಾನುಭವಿ ಗಳಾಗಲು ಜಾತಕಪಕ್ಷಿಯಂತೆ ಕಾಯುತ್ತಿದ್ದಾರೆ. ಆದರೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಆರ್ಥಿಕವಾಗಿ ಸದೃಢವಾದರೂ ಅದು ಸಾಧ್ಯವಾಗುತ್ತಿಲ್ಲವೇಕೆ? ಇದಕ್ಕೆ ಕಾರಣ ಇಲ್ಲದಿಲ್ಲ.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ 2006ರ ನವೆಂಬರ್ 1 ರಂದು ಅಸ್ತಿತ್ವಕ್ಕೆ ಬಂದ ನಂತರ ಗುಲ್ಬರ್ಗಾ ಜಿಲ್ಲೆಯಲ್ಲಿ 2009ನೇ ಮಾರ್ಚ್ 31 ರವರೆಗೆ 2534 ಕಟ್ಟಡ ಕಾರ್ಮಿಕರು ನೋಂದಣಿ ಮಾಡಿಸಿಕೊಂಡಿದ್ದು, ನೋಂದಣಿ ಹಾಗೂ ನವೀಕರಣದ ಶುಲ್ಕ ಸೇರಿ 2,29,785 ರೂ. ಮಂಡಳಿಗೆ ಪಾವತಿಸಿದ್ದಾರೆ. ಅದೇ ರೀತಿ ಜಿಲ್ಲೆಯಿಂದ ಕಟ್ಟಡ ಸೆಸ್ ರೂಪದಲ್ಲಿ 55,84,244 ರೂ. ಸಂಗ್ರಹವಾಗಿದೆ. ಇವೆರಡರ ಒಟ್ಟಾರೆ ಮೊತ್ತ 58,75,029 ರೂ. ಎಂದು ಸರ್ಕಾರಿ ದಾಖಲೆಯೇ ಹೇಳುತ್ತದೆ.



58.75 ಲಕ್ಷ ರೂ. ಬೃಹತ್ ಮೊತ್ತ ಕಳೆದ 3 ವರ್ಷಗಳಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಹೆಸರಿನಲ್ಲಿ ಸಂಗ್ರಹಿಸಿ ಕೇವಲ ಇಬ್ಬರಿಗೆ ಮಾತ್ರ ಶವ ಸಂಸ್ಕಾರದ ಪರಿಹಾರ ಧನ 2 ಸಾವಿರ ರೂ.ನಂತೆ 4 ಸಾವಿರ ರೂ. ನೀಡಲಾಗಿದೆ. ನೋಂದಣಿ ಮಾಡಿಸಿಕೊಂಡವರೆಲ್ಲ ಫಲಾನುಭವಿ ಗಳಲ್ಲ ಎಂಬುದು ಮಾತ್ರ ಜಗಜ್ಜಾಹಿರಾಗಿದೆ. ಫಲಾನುಭವಿಗಳಾಗ ಬೇಕಾದರೆ ಮರಣ ಹೊಂದಬೇಕೆ?ಎಂಬ ಜಿಜ್ಞಾಸೆ ಕಟ್ಟಡ ಕಾರ್ಮಿಕರಲ್ಲಿ ಒಡ ಮೂಡಿದೆ.

ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಸಿಕೊಂಡರೆ ವರ್ಷವಾದ ಕೂಡಲೇ ಕೆಲವು ಸವಲತ್ತು ನೀಡಬೇಕೆಂಬ ನಿಯಮವಿದೆ. ಇದರಲ್ಲಿ ಮುಖ್ಯವಾದವುಗಳೆಂದರೆ ಮಹಿಳಾ ಕಟ್ಟಡ ಕಾರ್ಮಿಕರಿಗೆ ಹೆರಿಗೆಗೆ 4 ಸಾವಿರ ರೂ. ಕಟ್ಟಡ ಕಾರ್ಮಿಕರ ಮದುವೆಗೆ ಅಥವಾ ಅವರ ಮಕ್ಕಳ ಮದುವೆಗೆ 5 ಸಾವಿರ ರೂ. ಕಟ್ಟಡ ಕಾರ್ಮಿಕರ ವಿದ್ಯಾಭ್ಯಾಸಕ್ಕೆ ಎಸ್.ಎಸ್.ಎಲ್.ಸಿ. ಪಾಸಾದರೆ 700 ರೂ. ಪಿಯುಸಿ ಪಾಸಾದರೆ 1000 ರೂ. ಪದವಿ ಓದುತ್ತಿದ್ದರೆ 1500 ರೂ. ಐಟಿಐ ಓದುತ್ತಿದ್ದರೆ 2000 ರೂ. ಸ್ನಾತಕೋತ್ತರ ಪದವಿ ಓದುತ್ತಿದ್ದರೆ 5000 ರೂ. ಸಹಾಯಧನ ನೀಡಬೇಕು. ಆದರೆ ಇದುವರೆಗೂ ನೋಂದಣಿಯಾದ ಒಬ್ಬರಿಗೂ ನಯಾಪೈಸೆ ಮಂಡಳಿಯಿಂದ ಸಹಾಯಧನ ದೊರೆತಿಲ್ಲ!

ಗುಲ್ಬರ್ಗಾ ಜಿಲ್ಲೆಯಾದ್ಯಂತ 60 ಸಾವಿರಕ್ಕೂ ಅಧಿಕ ಕಟ್ಟಡ ಕಾರ್ಮಿಕರಿದ್ದಾರೆ. ಯುದ್ದೋಪಾದಿಯಲ್ಲಿ ಆಗಬೇಕಿದ್ದ ಕಟ್ಟಡ ಕಾರ್ಮಿಕರ ನೋಂದಣಿ ಕಾರ್ಯ ಆಮೆಗತಿಯಲ್ಲಿ ಸಾಗುತ್ತಿರುವುದಕ್ಕೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಒಕ್ಕೂಟದ ನಗರ ಕಾರ್ಯದರ್ಶಿ ನಾಗಯ್ಯಸ್ವಾಮಿ ಹಾಗೂ ತಾಲ್ಲೂಕು ಕಾರ್ಯದರ್ಶಿ

ಪುಟ 14ಕ್ಕೆ

ಕಟ್ಟಡ ಕಾರ್ಮಿಕರ ಸಂಕಷ್ಟಗಳು...

ಪುಟ 13 ರಿಂದ

* * *

08.03.09ರಂದು ಮಧ್ಯಾಹ್ನ 12.15ಕ್ಕೆ ವಯ್ಯಾಲಿಕಾವಲ್ ನ ಈಜುಕೊಳ ಬಡಾವಣೆಯಲ್ಲಿರುವ ಆಂಜನೇಯ ದೇವಸ್ಥಾನದ ಪಕ್ಕದ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಕಾಮಗಾರಿ ಕೆಲಸ. 5 ಅಡಿ ಕೆಳಗೆ ನಡೆಯುವಾಗ ಇಬ್ಬರು ಕಾರ್ಮಿಕರ ಮೇಲೆ ಮಣ್ಣು ಕುಸಿದು, ಕಾಂಕ್ರೀಟ್ ಸಹ ಬಿದ್ದು ಅಪಘಾತದಲ್ಲಿ ರಾಯಚೂರಿನ ಲಿಂಗಸೂರು ತಾಲ್ಲೂಕಿನ ಕನಕಪ್ಪ ಬಿನ್ ಅಂಕಪ್ಪ ಮೃತಪಟ್ಟ.

ಸಂಘ ತಕ್ಷಣ ಮಧ್ಯೆ ಪ್ರವೇಶ ಮಾಡಿ ಪತ್ರಿಕೆ ಟಿ.ವಿ. ಪೋಲೀಸ್ ಠಾಣೆ, ಕಾರ್ಮಿಕ ಇಲಾಖೆ, ಎಲ್ಲೆಡೆ ದೂರು ದಾಖಲಿಸಿ ಮೃತನ ಕುಟುಂಬಕ್ಕೆ ಪರಿಹಾರವಾಗಿ 3,94,120 ರೂ.ಗಳನ್ನು ನೀಡುವಂತೆ ನ್ಯಾಯಾಲಯದಲ್ಲಿ ಆದೇಶವನ್ನು ತರಲು ಕೆಲಸ ಮಾಡಿತು. ಆದರೆ ಮೃತನ ಕುಟುಂಬದವರು ಪೋಲೀಸ್ ಠಾಣೆಯಲ್ಲಿ ಕೇವಲ 1 ಲಕ್ಷ ರೂ. ನಗದನ್ನು ತೆಗೆದುಕೊಂಡು ಹೋದರು. ಬೆಂಗಳೂರು, ರಾಯಚೂರು ಎರಡು ಕಡೆ ಮನೆ ಖಾಲಿ ಮಾಡಿದ್ದರಿಂದ ಸಂಘದ ಪದಾಧಿಕಾರಿಗಳು ಅವರನ್ನು ಹುಡುಕುವಲ್ಲಿ ಸುಸ್ತಾದರು.

* * *

23.05.09ರಂದು ಶ್ರೀರಾಮಪುರದ ದೇವಯ್ಯ ಪಾರ್ಕ್ ಬಳಿ ಮೆಟ್ರೋ ಕಾಮಗಾರಿಗೆ ಕಟ್ಟಡ ಕೆಡುವುವಾಗ ಗೋಡೆ ಮೇಲೆ ಬಿದ್ದು ಕೊಳ್ಳೇಗಾಲದ ಪ್ರಕಾಶ್ (21 ವರ್ಷ) ಸ್ಥಳದಲ್ಲಿಯೇ ಮೃತಪಟ್ಟ. ತಕ್ಷಣ ಸಂಘ ಮಧ್ಯೆ ಪ್ರವೇಶ ಮಾಡಿ ಮಾಧ್ಯಮಗಳಿಗೆ, ಅಧಿಕಾರಿಗೆ, ಪೋಲೀಸ್ ಠಾಣೆಗೆ ದೂರು ದಾಖಲಿಸಿತು. ಆತನ ಕುಟುಂಬಕ್ಕೆ 10 ಲಕ್ಷ ರೂ. ಪರಿಹಾರ ನೀಡಬೇಕೆಂದು ಒತ್ತಾಯಿಸಿತು. ಮೂರೂವರೆ ಲಕ್ಷ ಪರಿಹಾರ ಪಡೆದ ಕಾರ್ಮಿಕನ ಕುಟುಂಬ ನಾಪತ್ತೆ, ಕಾಮಗಾರಿ ನಡೆಯುತ್ತಿದ್ದ ಪಕ್ಕದಲ್ಲಿ ಶೆಡ್‌ಗಳನ್ನು, ಕಾರ್ಮಿಕರನ್ನು ಬೇರೆಡೆಗೆ ವರ್ಗಾಯಿಸಲಾಯಿತು.

* * *

25.05.09ರಂದು ಪ್ರಕಾಶ್ ಮೃತ ಪಟ್ಟ ಸ್ಥಳದಲ್ಲಿ ಸಿಡಬ್ಲ್ಯೂಎಫ್‌ಐ ಪ್ರತಿಭಟನೆ ನಡೆಯಿತು. 'ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳ ಕಾಯ್ದೆ'ಯಲ್ಲಿನ ನಿಯಮ 50 ರಿಂದ 241 ರವರೆಗೆ ಇರುವ ನೆಲಸಮ, ನಿರ್ಮಾಣ ಕೆಲಸಗಳಲ್ಲಿ ಸುರಕ್ಷತೆಯ ಕ್ರಮಗಳನ್ನು ಜಾರಿ ಮಾಡದೆ ಇರುವ ನಿರ್ಮಾಣಗಾರರಿಗೆ ಮೂರು ತಿಂಗಳ ಸೆರೆಮನೆ ವಾಸವಾಗಬೇಕು ಎಂದು ಅದರ ಜಾರಿ ಮಾಡಲು ಕಾರ್ಮಿಕ ಇಲಾಖೆಯನ್ನು ಒತ್ತಾಯಿಸಲಾಯಿತು.

* * *

ಇವು ಸಂಘದ ಗಮನಕ್ಕೆ ಬಂದ ಕೆಲವು ಘಟನೆಗಳು. ಗಮನಕ್ಕೆ ಬಾರದ ದುರ್ಘಟನೆಗಳು ಸಾವಿರಾರು. ಬೆಂಗಳೂರಿನಲ್ಲಿ ಭವ್ಯ ಕಟ್ಟಡಗಳನ್ನು ನಿರ್ಮಾಣ ಮಾಡಿ ಮೆಗಾಸಿಟಿಯನ್ನಾಗಿ ಸುತ್ತಿರುವ ಕಟ್ಟಡ ಕಾರ್ಮಿಕ ಬವಣೆಗಳ ಕೆಲವು ಸ್ಯಾಂಪಲ್‌ಗಳು.

07.06.09ರಂದು ಈ ಎಲ್ಲಾ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಲು ಕಟ್ಟಡ ಕಾರ್ಮಿಕ ಕಾಯ್ದೆಯ ಸಮರ್ಪಕ ಜಾರಿಗೆ ಒತ್ತಾಯಿಸಲು, ಸಂಘದ ಸದಸ್ಯತ್ವ ಹೆಚ್ಚಿಸಲು, ಚಳುವಳಿ ಬಲಪಡಿಸಲು ಸಿಡಬ್ಲ್ಯೂಎಫ್‌ಐ ಬೆಂಗಳೂರು ಜಿಲ್ಲಾ ಸರ್ವ ಸದಸ್ಯರ ಸಭೆ ಸೂರಿ ಭವನದಲ್ಲಿ ನಡೆಯಿತು. ಸಭೆಗೆ



ಅತಿಥಿಗಳಾಗಿ ಬಂದಿದ್ದ ಕೆನರಾಬ್ಯಾಂಕ್ ನೌಕರರ ಸಂಘದ ಅಧ್ಯಕ್ಷರಾದ ಕಾಂ: ಶೆಣೈ ಮಾತನಾಡಿ 'ಸಂಘ ಎಂದರೆ ವೇದಿಕೆ ಮೇಲಿರುವ ಪದಾಧಿಕಾರಿಗಳಲ್ಲ. ಸಂಘ ಎಂದರೆ ಆ ಸಂಘದ ಸಗಸ್ಯರು. ಸಂಘ ಇರುವುದು, ಸಂಘ ಬೆಳೆಯುವುದು ಸದಸ್ಯರಿಂದ. ಇಂದು ಕಟ್ಟಡ ಕಾರ್ಮಿಕರ ಮೇಲೆ ಆಗುತ್ತಿರುವ ಅನ್ಯಾಯವನ್ನು ಕೇಳಲು ಬಲಿಷ್ಠವಾದ ಸಂಘವನ್ನು ನೀವು ಕಟ್ಟಡಬೇಕು' ಎಂದರು.

'ಕಟ್ಟಡ ಕಾರ್ಮಿಕ ಕಾಯ್ದೆ ಮತ್ತು ವಲಸೆ ಕಾರ್ಮಿಕ ಕಾಯ್ದೆ' ಬಗ್ಗೆ ತರಗತಿ ನೀಡಿದ ವಕೀಲರ ಸಂಘ[illegible] ನಾಯಕರಾದ ಕಾಂ: ರಾಮಯ್ಯ 'ನ್ಯಾಯ ಕೇಳುವುದ[illegible] ಬದುಕನ್ನು ಉತ್ತಮಪಡಿಸಿಕೊಳ್ಳುವುದಕ್ಕಾಗಿ, ಇದ[illegible] ಅನಾದಿಕಾಲದಿಂದಲೂ ನಡೆದುಬಂದಿದೆ. ಬಡ[illegible] ನ್ಯಾಯ ಕೇಳಲು ಇರುವ ಸಾಧನ ಸಂಘ[illegible] ಈಗಿರುವ ಕಾನೂನುಗಳು ಕಾರ್ಮಿಕರು ನ್ಯಾಯ[illegible] ಕೇಳಿರುವುದರಿಂದಲೇ ಬಂದಿರುತ್ತದೆ. ಅದನ[illegible] ಪಡೆಯಲು ಸಂಘ ಬಲಪಡಿಸಿ' ಎಂದರು.

ಸಿಡಬ್ಲ್ಯೂಎಫ್‌ಐ ರಾಜ್ಯ ಪ್ರಧಾ[illegible] ಕಾರ್ಯದರ್ಶಿಯಾದ ಕಾಂ[illegible] ವೀರಸ್ವಾಮಿ, ಕಲ್ಯಾಣ ಸೌಲಭ್ಯಗಳನ[illegible] ಕಾರ್ಮಿಕರ ಮಧ್ಯೆ ಪ್ರಚಾರ ಮಾಡಿ[illegible] ಸರ್ಕಾರದ ಮಂಡಳಿಯಲ್ಲಿ[illegible] ನೋಂದಾಯಿಸಿಕೊಂಡು ಸೌಲಭ[illegible] ಪಡೆಯಲು ಸಂಘ ಬೇಕು. ಆದರಿಂದ ಸಂಘ ಬಲಪಡಿಸಿ ಎಂದರು.

ಬೆಂಗಳೂರು ಜಿಲ[illegible] ಸಿಡಬ್ಲ್ಯೂಎಫ್‌ಐ ಅಧ್ಯಕ್ಷರಾದ[illegible] ಕೆ.ವೀರಮಣಿ ಸ್ವಾಗತಿಸಿದರು. [illegible] ಕಾರ್ಯದರ್ಶಿ ಎಸ್.ಶಂಕರ್ [illegible] ತಿಂಗಳ ಚಟುವಟಿಕೆ ವರದಿ ಮಾಡಿದರು. ಸಂಘಟನೆ ಕಾರ್ಯದರ್ಶಿ[illegible] ಟಿ.ಎಂ.ರಾಮಕೃಷ್ಣ ವಂದಿಸಿದರು. ಸಭೆಯ[illegible] ಹಾಜರಿದ್ದ ಕಾರ್ಮಿಕರು ಸಂಘವನ್ನು ಪ್ರದೇಶವಾರು[illegible] ಬಲಪಡಿಸುವುದಾಗಿ ವೇದಿಕೆಗೆ ಬಂದು[illegible] ಮಾತನಾಡಿದರು.

ಮರೀಚಿಕೆಯಾದ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ

ಪುಟ 13 ರಿಂದ

ಬಸವರಾಜ ಕೆಂಗಲ್‌ಕರ್ ಆಕ್ರೋಶ ವ್ಯಕ್ತಪಡಿಸುತ್ತಾರೆ. ಕಟ್ಟಡ ಕಾರ್ಮಿಕರ ಸಂಘ ನೋಂದಣಿಗೆ ಸಹಕರಿಸುತ್ತಿದ್ದರೂ ದಾಖಲೆಗಳ ತಗಾದೆ ತೆಗೆದು ಅಧಿಕಾರಿಗಳು ನೋಂದಣಿ ಮಾಡಿಕೊಳ್ಳುತ್ತಿಲ್ಲವೆಂದು ವಿಷಾದ ವ್ಯಕ್ತಪಡಿಸುತ್ತಾರೆ.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಸಿಕೊಂಡವರಲ್ಲಿ ಮೂವರು ಕೆಲಸ ನಿರ್ವಹಿಸುತ್ತಿದ್ದಾಗ ಅಪಘಾತಕ್ಕೀಡಾಗಿ ಗುಲ್ಬರ್ಗಾ ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಹಾಗೂ ಪಕ್ಕದ ಸೋಲಾಪುರದಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಆದರೆ ಕಲ್ಯಾಣ ಮಂಡಳಿ ಇದುವರೆಗೂ ನಯಾಪೈಸೆ ಸಹಾಯಧನ ಪಾವತಿಸಿಲ್ಲ. ಈ ಬಗ್ಗೆ ವಿಚಾರಿಸಿದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದರೆ ಮಾತ್ರ ವೆಚ್ಚ ಭರಿಸುವುದಾಗಿ ಕಲ್ಯಾಣ ಮಂಡಳಿ ಲಿಖಿತವಾಗಿ ತಿಳಿಸಿದೆ. ವಿಪರ್ಯಾಸವೆಂದರೆ ಹಾಸಿಗೆಗಳಿಗೆ ತಕ್ಕಂತೆ ವೈದ್ಯರಿಲ್ಲದೆ ಗುಲ್ಬರ್ಗಾ ಜಿಲ್ಲಾ ಆಸ್ಪತ್ರೆ ಅವ್ಯವಸ್ಥೆಯ ಆಗರವಾಗಿದೆ. ಹೀಗಾಗಿ ಕಟ್ಟಡ ಕಾರ್ಮಿಕರು ಸಾಲ ಸೋಲ ಮಾಡಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವುದು ಅನಿವಾರ್ಯವಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಪುಕ್ಕಟ್ಟೆ ಚಿಕಿತ್ಸೆ ಸಿಗುವಾಗ ಕಲ್ಯಾಣ ಮಂಡಳಿ ಯಾವುದಕ್ಕೆ ವೆಚ್ಚ ಭರಿಸುತ್ತದೆ? ಎಂದು ಪ್ರಶ್ನಿಸುತ್ತಾರೆ ಕಟ್ಟಡ ಕಾರ್ಮಿಕರ ಸಂಘದ ಮುಖಂಡ ಯಶವಂತ ಹೀರಾಪೂರ.



ಅದೇ ರೀತಿ ಮದುವೆ ನೋಂದಣಿ ಮಾಡಿಸಿಕೊಂಡರೆ ಮಾತ್ರ ಸಹಾಯ ಧನ ನೀಡುತ್ತೇವೆಂದು ಕಲ್ಯಾಣ ಮಂಡಳಿಯಿಂದ ಪತ್ರ ಬಂದಿದೆ. ಕಟ್ಟಡ ಕಾರ್ಮಿಕರು ಮದುವೆ ನೋಂದಣಿ ಮಾಡಿಸಿಕೊಳ್ಳಲು ಹೋದರೆ ಮನೆಯಲ್ಲಿ ಕೌಟುಂಬಿಕ ಕಲಹಗಳು ನಡೆದ ಉದಾಹರಣೆಗಳೂ ಇವೆ. ನನ್ನದು ಎರಡನೇ ಸಂಬಂಧ ಎಂದು ಹೆಂಡತಿ ಜಗಳ ತೆಗೆಯುತ್ತಿದ್ದಾಳೆಂದು ಕಟ್ಟಡ ಕಾರ್ಮಿಕರು ಹೇಳುತ್ತಿದ್ದಾರೆ.

ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಕಾರ್ಮಿಕರಿಗೆ ಮರಿಚಿಕೆಯಾಗಿದೆ. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಸಂಘಟಿತ ಕಾರ್ಮಿಕರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ಕಾರ್ಮಿಕರಿಗೆ ಸೌಲಭ್ಯ ನೀಡುವಲ್ಲಿ ಸಂಪೂರ್ಣ ವಿಫಲವಾಗಿದೆ.

ಜನಗಣತಿ ಮಾದರಿಯಲ್ಲಿ ಕಲ್ಯಾಣ ಮಂಡಳಿ ಅಧಿಕಾರಿಗಳು ಮನೆ ಮನೆಗೆ ಹಾಗೂ ಕಟ್ಟಡ ಕಾಮಗಾರಿ ನಡೆಯುವ ಸ್ಥಳಕ್ಕೆ ತೆರಳಿ ನೋಂದಣಿ ಮಾಡಿಸಿಕೊಳ್ಳಬೇಕು. ಇಲ್ಲ ಸಲ್ಲದ ದಾಖಲೆಗಳನ್ನು ಕೇಳಿ ಅನಕ್ಷರಸ್ಥ ಅಮಾಯಕ ಕಟ್ಟಡ ಕಾರ್ಮಿಕರಿಗೆ ತೊಂದರೆ ಕೊಡದೆ ನೋಂದಣೆಗೆ ಅವಕಾಶ ಮಾಡಿಕೊಡಬೇಕು. ನೋಂದಣಿಯಾದ ಕಟ್ಟಡ ಕಾರ್ಮಿಕರಿಗೆ ಸಹಾಯಧನ ಸೇರಿದಂತೆ ಮೂಲಭೂತ ಸೌಲಭ್ಯ ದೊರಕಿಸಿಕೊಡಬೇಕು. ಅಂದಾಗ ಮಾತ್ರ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿ ತನ್ನ ಉದ್ದೇಶ ಈಡೇರಿಸಿಕೊಳ್ಳಲು ಸಾಧ್ಯ. ○

ಏಜೆನ್ಸಿದಾರರು - ಚಂದಾದಾರರ ಗಮನಕ್ಕೆ

ಜನಶಕ್ತಿ ಪತ್ರಿಕೆಯ ಏಜೆನ್ಸಿದಾರರು ಪ್ರತಿ ತಿಂಗಳು ನಿಯಮಿತವಾಗಿ ವಿಳಂಬವಿಲ್ಲದಂತೆ ಜನಶಕ್ತಿ ಬಿಲ್‌ನ್ನು ಪಾವತಿಸಲು ಈ ಮೂಲಕ ಕೋರಲಾಗಿದೆ. ಬಿಲ್ ಪಾವತಿ ಸಂಬ[illegible] ಹಾಗೂ ಹೊಸ ಚಂದಾ, ಚಂದಾದಾರರ ವಿಳಾಸ ಬದಲಾವಣೆ, ಪತ್ರಿಕೆಯ ಪ್ರ[illegible] ಹೆಚ್ಚಳ, ವಿತರಣೆ, ಲೆಕ್ಕಪತ್ರ, ಹಣಕಾಸು ಇತ್ಯಾದಿ ವಿಷಯಗಳಿಗಾಗಿ ನೀವು ಸಂಪರ್ಕಿಸಬೇಕಾದವರು

ವೀರಣ್ಣ ಕಲ್ಮನಿ : 9379268990

(ಗಮನಿಸಿ: ದೂರವಾಣಿ ಸಂಖ್ಯೆ ಬದಲಾಗಿದೆ)

ಚಂದಾದಾರರಿಗೆ ಮನವಿ

ದಯಮಾಡಿ ಪತ್ರಿಕೆಯ ಚಂದಾ ಅವಧಿ ಮುಗಿಯುವ ಮೊದಲೇ ನವೀಕರಣ ಮಾಡಿ. ತಮಗೆ ತಲುಪುವ ಪತ್ರಿಕೆಯಲ್ಲಿ ವಿಳಾಸದ ಮೇಲೆ ಪತ್ರಿಕೆ ಕಳಿಸಲಾರಂಭಿಸಿದ ದಿನಾಂಕ - ಮುಗಿಯುವ ದಿನಾಂಕ ಎರಡನ್ನೂ ನಮೂದಿಸಲಾಗಿರುತ್ತದೆ ಗಮನಿಸಿ. ಮುಂಚಿತವಾಗಿ ನವೀಕರಿಸಿ.

ಚಂದಾ ದರ ವಿವರ

ವಾರ್ಷಿಕ	: 250.00 ರೂ.
ದ್ವೈ ವಾರ್ಷಿಕ	: 500.00 ರೂ.
ಪಂಚವಾರ್ಷಿಕ	: 1250.00 ರೂ.

- ಸಂ

ಒಂದಷ್ಟು ರಾಜಕೀಯ ಚಿಂತನೆ, ಶೋಷಿತ ಜನರಿಗಾಗಿ ದುಡಿಯಬೇಕೆಂಬ ಎಂಬ ಒಂದು ಪ್ರಜಾಸತ್ತಾತ್ಮಕ ಪ್ರಜ್ಞೆ ಒಬ್ಬ ಮನುಷ್ಯನನ್ನು ಹೇಗೆ ರೂಪಿಸಬಹುದು ಎಂಬುದಕ್ಕೆ ಈ ಚಿತ್ರದಲ್ಲಿ ಕಾಣುತ್ತಿರುವ ತಿಪ್ಪಣ್ಣ ಅವರ ಜೀವನ ಒಂದು ಉದಾಹರಣೆಯಾಗಬಲ್ಲದು. ತಿಪ್ಪಣ್ಣ ರಾಯಚೂರು ತಾಲ್ಲೂಕಿನ ರಘುನಾಥನ ಹಳ್ಳಿಯ ಬಡ ರೈತ. ತಮಗೆ ವಯಸ್ಸೆಷ್ಟು ಎಂಬುದು ಅಷ್ಟು ಸ್ಪಷ್ಟವಾಗಿ ಅವರಿಗೆ ಗೊತ್ತಿಲ್ಲ. 'ನಿಜಾಮನ ಕಾಲದ 4ನೇ ಕ್ಲಾಸು' ಓದಿದ್ದೇನೆ ಎನ್ನುವ ತಿಪ್ಪಣ್ಣ ಅವರ ಕನಿಷ್ಟ ವಯಸ್ಸನ್ನು ನಾವೇ ಅಂದಾಜು ಮಾಡಿಕೊಳ್ಳಬಹುದು. ಇತ್ತೀಚಿಗೆ ಅವರು 'ಜನಶಕ್ತಿ' ಕಾರ್ಯಾಲಯಕ್ಕೆ ಬಂದಿದ್ದಾಗ ಅವರು ಪಾಲ್ಗೊಂಡ ಹೋರಾಟಗಳ ಕುರಿತು ನಡೆಸಿದ ಒಂದು ಕಿರುಸಂದರ್ಶನ ಇಲ್ಲಿದೆ.



ತಿಪ್ಪಣ್ಣ ಎಂಬೊಬ್ಬ ಹೋರಾಟಗಾರನ ಮೆಲುಕು

ಸಂದರ್ಶಿಸಿದವರು : ಆರ್.ರಾಮಕೃಷ್ಣ

ಶಕ್ತಿ : ತಿಪ್ಪಣ್ಣ ಅವರೇ ನೀವು ಯವರೆಗೆ ಶಾಲೆ ಕಲಿತಿದ್ದೀರಿ ಮತ್ತು ಕಲಿತಿರಿ?

: ನಿಜಾಮನ ಕಾಲದಾಗ 4ನೇ ನವರೆಗೆ ಕಲಿತಿದ್ದೀನಿ. ಅದು ಖಾಸಗಿ ಶಾಲಿ, ಕ್ಕ ಕೊಟ್ಟು ಓದಿದ್ದೇವೆ. ರೊಕ್ಕ - ಇಲ್ಲಾ, ಳ, ಸಜ್ಜೆ, ಸೇರು, ಭತ್ತ, ಧಾನ್ಯ ಎಲ್ಲಾ ಡ್ತಾ ಇದ್ದೆವು. ನಮ್ಮೂರ್ರಿಗೆ ಸರ್ಕಾರಿ ಶಾಲೆ ದಿತ್ತು. ನಮ್ಮೂರ್ರ ಗೌಡ ಬಿಡಲಿಲ್ಲ. ಸರ್ಕಾರಿ ಲಿ ಮಾಸ್ತರ ತನ್ನ ಪಗಾರದಾಗ ಖಾಸಗಿ ಲಿ ಮಾಸ್ತರಿಗೆ ಅರ್ಧ ಪಾಲು ಡಬೇಕೆಂದದಕ್ಕ ಸರ್ಕಾರಿ ಶಾಲಿ ಮಾಸ್ತರರು ರಲಿಲ್ಲ (ಮಕ್ಕಳು ಶಾಲೆಗೆ ಹೋದರೆ). ತಮ್ಮ ನಿ ಎಮ್ಮಿ ದನ ಕಾಯುವವರು ಯಾರು?! ಬೋದು ಗೌಡನ ಲೆಕ್ಕ ಆಗಿತ್ತು.


ಆಮ್ಯಾಲ ಮತ್ತು ಶಾಲಿ ಬಂತು. ಮೊದಲಿಗೆ ನುಮನ ಗುಡಿಯಲ್ಲಿ ಶಾಲಿ ನಡೀತಿತ್ತು. ಊರ ಡರದೇ ಜಾಗ, ಗೌಡರದೇ ಜಮೀನು. ಒಂದು ಎಕರೆ ಜಾಗ ಕೇಳಿದ್ದಕ್ಕೆ ಗೌಡ, ವೇನು ಶಾಲಿ ಮಾಡ್ತಿರೋ ಇಲ್ಲ ಮೆಣಸಿನ ಲ ಮಾಡ್ತಿರೋ ಅಂತಂದು 20 ಗುಂಟೆ ಗ ಮಾತ್ರ ಕೊಟ್ಟ. ಮಂಡಲ ಪಂಚಾಯ್ತಿ ದ ಮ್ಯಾಲ ಶಾಲಿ ಕಟ್ಟಿದೆವು.

ಮೊದಲು 4ನೇ ಕ್ಲಾಸಿತ್ತು. 7ನೇ ಕ್ಲಾಸಿಗೆ ತರ ಹೋರಾಟ ಮಾಡಿ 7ನೇ ಕ್ಲಾಸ್ ಾಡಿಸಿದೆವು. ಕರ್ನಾಟಕ ಪ್ರಾಂತ ರೈತ ಘದಿಂದ ಹಳ್ಳಿಯಿಂದ ಜನರನ್ನು ತಗೊಂಡು ಯಚೂರು ತಹಸೀಲ್ ಆಫೀಸ್ ಮುಂದೆ ರಿ ಮಕ್ಕಳ ಸಮೇತ ಪ್ರತಿಭಟನೆ ಮಾಡಿದೆವು. ಲಿ ಬಂತು. ಮೊದಲು ಒಂದೇ ಕೋಣೆ ತ್ತು. ಈಗ 7 ಕೋಣೆ ಆಗಿದೆ.

ನಶಕ್ತಿ : ನೀವು ನಡೆಸಿದ, ಪಾಲ್ಗೊಂಡ ಪ್ರಮುಖ ಜನಪರ ಹೋರಾಟಗಳ ಗ್ಗೆ ಹೇಳಿ

: ರಾಯಚೂರು ತಾಲ್ಲೂಕಿನ ಲ್ತಾನ್‌ಪುರ ಲಿಂದ ಅಳ್ಳಾಲಪುರಕ್ಕೆ ೋಡ್ ಹಾಕಲು ಶುರು ಮಾಡಿದರು. ಸವಿ ಸರಿಯಾಗಿ ನೆನಪಿಲ್ಲ. ಯಾಕೋ ೋಡ್ ಹಾಕೋದು ನಡುಕ್ಕೆ ಲ್ಲಿಸಿಬಿಟ್ಟರು. ಜನಕ್ಕೆ ಕೆಲ್ಸ ಸಿಗದು ನಿಲ್ತು. ೋಡ್ ಆಗದು ನಿಲ್ತು. ಆವಾಗ ನಾನು ಲ್ಲರೂ ತಯಾರಾಗ್ರಿ' ಅಂತದ್ದು, ಪಿಐ(ಎಂ) ಪಾರ್ಟಿ ಆಫೀಸಿಗೆ ಹೋಗಿ ಂದ್ರಶೇಖರ ಬಾಳಿಯವರನ್ನು ಕಂಡೆವು. ನಕ್ಕೆ ಕೆಲಸ ಸಿಗಬೇಕು ಅನ್ನೋದು ಇತ್ತು. ಮ್ಮೂರ್ರಿಗೆ ಬಸ್ಸಿರಲಿಲ್ಲ. ಜಾಗರೆ ಂಕಟಾಪುರಕ್ಕೆ ಬಂದು ವಾಪಸ್ ರಾಯಚೂರಿಗೆ ೋಗುತ್ತಿತ್ತು. ಆಗ ನಾನು ಜೇಗರಕಲ್ ಂಡಲ್ ಪಂಚಾಯ್ತಿ ಸದಸ್ಯ. ಆಗ ಪಾರ್ಟಿ ಹೆಗಳು ಕೊಟ್ಟಿದ್ದರು. ನಾನು ಕಮ್ಯೂನಿಸ್ಟ್ (ಸಿಪಿಐಎಂ) ನಿಂದ ಆರಿಸಿಹೋಗಿದ್ದೆ. ವು ಊರ ಜನರನ್ನೆಲ್ಲ ಸೇರಿಸಿ ಮಾತಾಡಿ ಮ್ಮೂರ್ರಿಗೆ ರಸ್ತೆಯಿಲ್ಲ, ಜಾಗರೇ ಂಕಟಾಪುರದಿಂದ ಸುಲ್ತಾನ್‌ಪುರದವರೆಗೆ ರೋಡ್ ಮಾಡಬೇಕಂತ ಉಪವಾಸ ಕುಂತಿದ್ದೆವು. ಕರ್ನಾಟಕ ಪ್ರಾಂತ ರೈತ ಸಂಘದ ಬ್ಯಾನರ್‌ನಾಗೆ. ಎಂಟು ದಿನ ಹತ್ತತ್ತು ಜನ, ಉಪವಾಸ ಸತ್ಯಾಗ್ರಹ ಕೂರುತ್ತಿದ್ದೆವು. ಸರದಿ ಉಪವಾಸ ಸತ್ಯಾಗ್ರಹ.

ಎಂಟು ದಿನ ಆದ ಮ್ಯಾಲ ಛೇರ್‌ಮನ್ ಅಣ್ಣ ಶಂಕರ್ ಲಿಂಗಪ್ಪ ಗೌಡ ಬಂದು, 'ಇಲ್ಯಾರು ಲೀಡರ್' ಅಂತ ಕೇಳಿದ. 'ನಿನಗಿಲ್



ಯಾರು ಪೆಂಡಲ್ ಹಾಕಂತ ಹೇಳಿದ್ದು, ಸತ್ಯಾಗ್ರಹ ಕುಂದ್ರಲು ಯಾರು ಹೇಳಿದರು' ಅಂತ ದಬಾಯಿಸಿ, 'ನೀವು ಇಲ್ಲಿ ಹಾಕಂಗಿಲ್ಲ, ಜಿಲ್ಲಾ ಪಂಚಾಯ್ತಿ ಮುಂದೆ ಹೋಗಿ ಪ್ರತಿಭಟನೆ ಮಾಡ್ರಿ. ಸಾರ್ವಜನಿಕ ರಸ್ತೆ ಆಗಿದ್ದಕ್ಕೆ ಬಿಟ್ಟಿದೀನಿ, ಇಲ್ಲಾಂದರೆ ಕೆಂಪು ಬಾವುಟ ಸುಟ್ಟಾಕ್‌ಬಿಡ್ತಿದ್ದೆ' ಅಂತ ಬೆದರಿಸಿದ. ಬೆದರಿಕೆಗೆ ನಾವು ಜಗ್ಗಲಿಲ್ಲ. ಹೋರಾಟ ನಡೀತು. ಜಿಲ್ಲಾ ಪಂಚಾಯ್ತಿಯಿಂದ ರಸ್ತ ಜಾರಿಯಾಯ್ತು. ಆಮೇಲ ಊರಿಗೆ ಬಸ್ಸು ಬಂತು.

ಜನಶಕ್ತಿ : ಕೃಷ್ಣ ಬಲದಂಡೆ ಹೋರಾಟ ಬಗೆಗೆ ಸ್ವಲ್ಪ ಹೇಳಿ

ತಿಪ್ಪಣ್ಣ : ಕಲ್ಮಲ, ನೂರನ್‌ಪುರ, ಸುಲ್ತಾನ್‌ಪುರ, ಹಾಳ್ ವೆಂಕಟಾಪುರ, ರಘುನಾಥನ್ ಹಳ್ಳಿ ಹೀಗೆ 35 ಹಳ್ಳಿಗಳಿಗೆ ಹೋಗಿ ಜಾಥಾ ಮಾಡಿ, ಕೃಷ್ಣ ಬಲದಂಡೆ ಯೋಜನೆ ಬೇಗ ಜಾರಿ ಮಾಡಬೇಕಂತ ಹೋರಾಟ ಮಾಡಿದೆವು. 1993 ರಲ್ಲಿ ದೇವದುರ್ಗ ಎಪಿಎಂಸಿ ಬಳಿ ಬೃಹತ್ ಸಭೆ ನಡೀತು. ವೀರಪ್ಪ ಮೊಯ್ಲಿ ಆಗ ಮುಖ್ಯಮಂತ್ರಿ. 15ರಿಂದ 20 ಸಾವಿರ ಜನ ಸೇರಿದ್ದರು. ಇಂತಹ ಹೋರಾಟಗಳು ನಡೆದದ್ದರಿಂದ ಬಲದಂಡೆ ಯೋಜನೆ ಜಾರಿಯಾಯ್ತು. ಇಲ್ದಿದ್ರೆ ಕರ್ನಾಟಕಕ್ಕೆ ನೀರಿನ ಹಕ್ಕು ತಪ್ಪಿ ಹೋಗುತ್ತಿತ್ತು.

ಒಂದು ಸಾರಿ ಮಳೆ ಸುರಿದು ಸೂರ್ಯಪಾನ (ಸೂರ್ಯಕಾಂತಿ) ಎಲ್ಲ ಹುಳ ತಿಂದಿದ್ದವು. ನಾನು ಮಲ್ಲಯ್ಯ (ಮಲ್ಲಯ್ಯ ಜಾಲಹಳ್ಳಿ) ಎಲ್ಲಾ ತಿರುಗಾಡಿ ಎಲ್ಲ ಕಡೆ ಪ್ರಚಾರ ಮಾಡಿ ಡಿ.ಸಿ. ಆಫೀಸಿಗೆ ಮುತ್ತಿಗೆ ಹಾಕಿದೆವು. 2 ರಿಂದ 3 ಸಾವಿರ ಜನ ಸೇರಿದರು. ಆವಾಗ ಪರಿಹಾರ ಜಾರಿಯಾಯ್ತು. ಎಕರೆಗೆ ಇನ್ನೂರೋ, ಮುನ್ನೂರೋ ಕೊಟ್ಟರು.

ಜನಶಕ್ತಿ : ನಿಮ್ಮೂರ್ರಿನ ಭೂಮಾಲಕರು ಹೇಗಿದ್ದರು. ಸ್ವಲ್ಪ ಹೇಳಿ

ತಿಪ್ಪಣ್ಣ : ಅಮರಣ್ಣ ಗೌಡ ಅಂತ. ಅವರಿಗೆ 80 ಕೂರಗಿ ಅಂದರೆ 320 ಎಕರೆ ಜಮೀನು. ಹೆಚ್ಚು ಕಡಿಮೆ ಊರಿನ ಜಮೀನೆಲ್ಲಾ ಅವರದ್ದೇ. ಅವರ ಮಗ ಬೆಂಗಳೂರಲ್ಲಿ ಓದೋವಾಗ ದುಬಾರಿ ಹೋಟೆಲ್ ರೂಮಲ್ಲಿ ವಸತಿ ಇರುತ್ತಿದ್ದು, ಆತನ ವಸತಿ, ಊಟ, ಮೋಜುಗಳಿಗ ದಿನಕ್ಕೆ 5 ಸಾವಿರ ರೂಪಾಯಿ ಆ ಕಾಲಕ್ಕೇ ಖರ್ಚಾಗ್ತಾ ಇತ್ತು. ಅಂದರೆ ತಿಂಗಳಿಗೆ ಒಂದೂವರೆ ಲಕ್ಷ ರೂಪಾಯಿಗಳು.

ಸೀಲಿಂಗ್ ಬಂತು (ಭೂಮಿತಿ ಕಾನೂನು ಬಂತು) ಅಮರಣ್ಣ ಗೌಡರ 320 ಎಕರೆ ಜಮೀನಿನಲ್ಲಿ 100 ಎಕರೆ ಹೋಯ್ತು. ಅದನ್ನು ಬಡವರಿಗೆ ಹಂಚಿಸಲಾಯಿತು.

ಅಮರಣ್ಣ ಗೌಡರ ಮಗ ಗುಂಡಪ್ಪಗೌಡ, ಪಶ್ಚಿಮ ಬಂಗಾಳದ ಕಲ್ಕತ್ತದ ಕರಗ್‌ಪುರದಲ್ಲಿ ಓದಿ ಬಂದಾತ. ಆತ ಒಂದು ರೀತಿಯಲ್ಲಿ ಒಳ್ಳೆ ಮನುಷ್ಯ. ಅದಕ್ಕೆ ಭೂಮಿ ಹಂಚೋದಕ್ಕ ತಕರಾರು ಮಾಡ್ಲಿಲ್ಲ. ರಘುನಾಥನ ಹಳ್ಳಿಯಲ್ಲಿ ಒಡ್ಡರು, ಬ್ಯಾಡರು, ಬಡೀಗೇರ, ಪಾಂಚಾಳ, ಅಗಸರು, ಕ್ವಾಮಟಿಗರು, (ಶೆಟ್ಟರು) ಮುಸಲ್ಮಾನರು, ಹರಿಜನರು (ದಲಿತರು) ಲಿಂಗಾಯತರು ಎಲ್ಲರಿಗೂ ಅಷ್ಟಿಷ್ಟು ಅಂದರೆ 2 ಎಕರೆ, ಎರಡೂವರೆ ಎಕರ, ಪೂಣ ಮೂರೆಕರೆ ಜಾಗ ಸಿಕ್ಕಿತು.

ಜನಶಕ್ತಿ : ನಿಮ್ಮ ಓದಿನ ಹವ್ಯಾಸದ ಬಗ್ಗೆ ಹೇಳಿ

ತಿಪ್ಪಣ್ಣ : ಜನಶಕ್ತಿ ವಾರಕ್ಕೊಮ್ಮೆ ಬರುತ್ತದೆ. ತಪ್ಪದೇ ಎಲ್ಲವನ್ನು ಓದುತ್ತೇನೆ. ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಮಟ್ಟದ ವಿಚಾರ ಯಾವುದನ್ನು ಬಿಡುವುದಿಲ್ಲ. ನನ್ನ ಬಳಿ ಎ.ಕೆ.ಗೋಪಾಲನ್ ಜೀವನ ಚರಿತ್ರೆ, ಭಗತ್‌ಸಿಂಗ್, ಗೋದಾವರಿ ಪುರಳೇಕರ್, ಇ.ಎಂ.ಎಸ್ ನಂಬೂದರಿಪಾಡ್,ಜ್ಯೋತಿಬಸು ಇವರೆಲ್ಲರ ಜೀವನ ಚರಿತ್ರೆ ಇದೆ. ಅದನ್ನೆಲ್ಲಾ ಓದಿದ್ದೇನೆ.

ಜನಶಕ್ತಿ : ಇತ್ತೀಚಿಗೆ ಜನಶಕ್ತಿ ಆಫೀಸ್‌ಗೆ ಏನೋ ಬೇಕಂತ ಬಂದಿದ್ದೀರಂತಲ್ಲ ಯಾಕೆ?

ಅದಾ? ಪಾಪಿ ದೇಹದಲ್ಲಿ ನೆಲೆಸಿರುವ ದೇವರುಗಳ ಸಂಖ್ಯೆ ಎಷ್ಟು? ಅಂತ ಒಂದು ಲೇಖನ ಸ್ವಾಮೀಜಿಯೊಬ್ಬರ ಬಗ್ಗೆ ಇದ್ದ ಪತ್ರಿಕೆ ಕಳೆದಿತ್ತು. ಅದನ್ನು ಕೇಳಿ ತಗೊಂಡೆ.....

* * *

ತಿಪ್ಪಣ್ಣ ಅವರು ಹೊರಡಬೇಕಿತ್ತು. ಹೊರಟರು. ಕೇವಲ ನಾಲ್ಕನೇ ತರಗತಿ ಓದಿದ ತಿಪ್ಪಣ್ಣ ಅವರ ಓದುವ ಹಂಬಲ ಪತ್ರಿಕೆಯನ್ನು ವ್ಯವಸ್ಥಿತವಾಗಿ ಸಂಗ್ರಹಿಸಿ, ಜೋಡಿಸಿಕೊಳ್ಳುವ ಬದ್ಧತೆಗೆ ತಲೆದೂಗುತ್ತಾ ಅವರನ್ನು ಬೀಳ್ಕೊಟ್ಟೆವು.

ಸಿಇಟಿ ಸೀಟು ಹಂಚಿಕೆ, ಶುಲ್ಕ ನಿಗದಿ ಕ್ರಮವನ್ನು ವಿರೋಧಿಸಿ ಎಸ್‌ಎಫ್‌ಐ ನಿಂದ ಸಿಇಟಿ ಕಚೇರಿಗೆ ಮುತ್ತಿಗೆ

ಈ ವರ್ಷ ಸರ್ಕಾರವು ಖಾಸಗೀ ಶಿಕ್ಷಣ ಸಂಸ್ಥೆಗಳ ಲಾಭಿಗೆ ಮಣಿದು ಬಡ ವಿದ್ಯಾರ್ಥಿಗಳಿಗೆ ದ್ರೋಹ ಎಸಗಿದೆ. ಈ ಬಾರಿ ಶುಲ್ಕ ನಿಗದಿ ಹಾಗೂ ಸೀಟು ಹಂಚಿಕೆಯಲ್ಲಿ ಖಾಸಗೀಯವರಿಗೆ ಭಾರೀ ಲಾಭದಾಯಕವಾಗುವಂತೆ ನೋಡಿಕೊಳ್ಳಲಾಗಿದ್ದು ರಾಜ್ಯದ ಬಡ, ವಿದ್ಯಾರ್ಥಿಗಳಿಗೆ ತೀವ್ರ ರೀತಿಯಲ್ಲಿ ಅನ್ಯಾಯ ಮಾಡಲಾಗಿದೆ. ಸರ್ಕಾರದ ಇಂತಹ ಕ್ರಮವನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ರಾಜ್ಯದ ಸಿ.ಇ.ಟಿ ಕೌನ್ಸಿಲಿಂಗ್ ಕೇಂದ್ರಗಳಿಗೆ ಬೆಂಗಳೂರು, ಹುಬ್ಬಳ್ಳಿ ಹಾಗೂ ಗುಲ್ಬರ್ಗಗಳಲ್ಲಿ ಮುತ್ತಿಗೆ ಹಾಕಿ ಪ್ರತಿಭಟಿಸಿತು.

ಬೆಂಗಳೂರಿನ ಸಿ.ಇ.ಟಿ ಕೇಂದ್ರಕ್ಕೆ ಮುತ್ತಿಗೆ ಹಾಕಿದ ಎಸ್‌ಎಫ್‌ಐ ನ ಇನ್ನೂರಕ್ಕೂ ಹೆಚ್ಚು ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಿ.ಇ.ಟಿ. ಘಟಕದ ವಿಶೇಷಾಧಿಕಾರಿ ಕುಲಕರ್ಣಿ ಎಸ್‌ಎಫ್‌ಐ ನ ಮನವಿಯನ್ನು ಸ್ವೀಕರಿಸಿ ಸರ್ಕಾರದೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳಲಾಯಿತು. ಎಸ್‌ಎಫ್‌ಐನ ರಾಜ್ಯಾಧ್ಯಕ್ಷ ಹೆಚ್.ಆರ್.ನವೀನ್‌ಕುಮಾರ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು. ರಾಜ್ಯ ಉಪಾಧ್ಯಕ್ಷ ಪ್ರಸಾದ್, ಜಿಲ್ಲಾ ಮುಖಂಡರಾದ ಉದಯಕುಮಾರ್, ಮುನಿರಾಜು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಇನ್ನಿತರ ರಾಜ್ಯ ಮುಖಂಡರಾದ ಅಮರೇಶ್, ಅಂಬರೀಶ್, ದುರ್ಗೇಶ್, ಪವನ್ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಪ್ರತಿಭಟನಾಕಾರರ ಮೇಲೆ ಪೋಲೀಸರ ಹಲ್ಲೆಗೆ ಎಸ್‌ಎಫ್‌ಐ ಖಂಡನೆ

ಗುಲ್ಬರ್ಗಾದ ಸಿ.ಇ.ಟಿ ಕೌನ್ಸಿಲಿಂಗ್ ಕೇಂದ್ರದ ಬಳಿ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದ ಎಸ್‌ಎಫ್‌ಐ ಕಾರ್ಯಕರ್ತರ ಮೇಲೆ ಪೋಲೀಸರು ವಿನಾಕಾರಣ ಲಾಠಿ ಪ್ರಹಾರ ನಡೆಸಿರುವುದನ್ನು ಎಸ್‌ಎಫ್‌ಐ ತೀವ್ರವಾಗಿ ಖಂಡಿಸಿದೆ. ಇದು ಪ್ರಜಾಪ್ರಭುತ್ವ ವಿರೋಧಿ ಕೃತ್ಯವಾಗಿದ್ದು ಇಂತಹ ಕ್ರಮಗಳಿಂದ ವಿದ್ಯಾರ್ಥಿ ಹೋರಾಟಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲವೆಂದು ರಾಜ್ಯ ಸರ್ಕಾರವನ್ನು ಎಸ್‌ಎಫ್‌ಐ ಎಚ್ಚರಿಸಿದೆ. ಅಲ್ಲದೆ ಈ ಸಂದರ್ಭದಲ್ಲಿ ಬಂಧಿಸಲ್ಪಟ್ಟಿರುವ ಎಸ್‌ಎಫ್‌ಐ ಕಾರ್ಯಕರ್ತರ ಮೇಲೆ ಮೊಕದ್ದಮೆ ಹೂಡಿರುವ ಕ್ರಮವನ್ನು ಎಸ್‌ಎಫ್‌ಐ ತೀವ್ರವಾಗಿ ಖಂಡಿಸಿದೆ.

ಬಿಕ್ಕಟ್ಟನ್ನು ಬಳಸಿ ಕಾರ್ಮಿಕರನ್ನು ಹಿಂಡುವ ನೀತಿಯ ವಿರುದ್ಧ ಪ್ರತಿಭಟನೆ

ಆರ್ಥಿಕ ಹಿಂಜರಿತದ ನೆಪ ಮುಂದೆ ಮಾಡಿ ಕಾರ್ಖಾನೆಗಳಲ್ಲಿ ಲೇ ಆಫ್ ನೀಡುವುದು, ರಿಟ್ರೆಂಚ್‌ಮೆಂಟ್ ಮಾಡುವುದು, ವೇತನ ಕಡಿತ, ಕಾರ್ಖಾನೆಗಳನ್ನು ಮುಚ್ಚುವುದು ಇತ್ಯಾದಿ ಕ್ರಮಗಳ ಮೇಲೆ ಸರ್ಕಾರ ನಿಷೇಧ ಹೇರಬೇಕು. ಇಂದಿನ ಪರಿಸ್ಥಿತಿಯಲ್ಲಿ ಕಾರ್ಖಾನೆಗಳ ಮುಚ್ಚುವಿಕೆಯಿಂದ ಕೆಲಸ ಕಳೆದುಕೊಂಡಿರುವ ಕಾರ್ಮಿಕರಿಗೆ ರಾಜ್ಯ ಸರ್ಕಾರ ತಾತ್ಕಾಲಿಕ ಪರಿಹಾರ ನೀಡಬೇಕು ಎಂಬ ಬೇಡಿಕೆಗಳಿಗೆ ಒತ್ತಾಯಿಸಿ ಈ ಹಿಂದೆ 22.01.09ರಂದು ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಕರ್ನಾಟಕ ವರ್ಕರ್ಸ್ ಯೂನಿಯನ್ (ಸಿಐಟಿಯು) ನೇತೃತ್ವದಲ್ಲಿ ಸಾವಿರಾರು ಕಾರ್ಮಿಕರು ಧರಣಿ ನಡೆಸಿ ಮುಖ್ಯಮಂತ್ರಿಗಳಿಗೆ ಮನವಿ ಅರ್ಪಿಸಿದ್ದರು. ಈ ಸಂಬಂಧ ಮುಖ್ಯಮಂತ್ರಿಗಳು ಕಾರ್ಮಿಕರು ಅರ್ಪಿಸಿರುವ ಮನವಿಯನ್ನು ಮುಂದಿನ ಕ್ರಮಕ್ಕಾಗಿ ಕಾರ್ಮಿಕ ಇಲಾಖೆಯ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಲಾಗಿದೆ ಎಂದು ಲಿಖಿತವಾಗಿ ತಿಳಿಸಿದ್ದರು.

ಆದರೆ 5 ತಿಂಗಳ ನಂತರವೂ ಈ ಬಗ್ಗೆ ಸರ್ಕಾರದಿಂದ ಯಾವುದೇ ಕ್ರಮ ಜರುಗಿರುವುದಿಲ್ಲ. ದಿನೇ ದಿನೇ ಸಾವಿರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಸಿದ್ಧ ಉಡುಪು, ಎಲೆಕ್ಟ್ರಾನಿಕ್ಸ್, ಸಿಲ್ಕ್ ಟೆಕ್ಸ್‌ಟೈಲ್, ಸಣ್ಣ ಇಂಜಿನಿಯರಿಂಗ್ ಇತ್ಯಾದಿ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿರುವುದು ರಿಟ್ರೆಂಚ್‌ಮೆಂಟ್, ಲೇ ಆಫ್ ಇತ್ಯಾದಿ ಕ್ರಮಗಳಿಗೆ ಒಳಗಾಗುತ್ತಿದ್ದಾರೆ. 100ಕ್ಕೂ ಹೆಚ್ಚು ಕಾರ್ಮಿಕರು ದುಡಿಯುವ ಕಾರ್ಖಾನೆಗಳಲ್ಲಿ ಲೇ ಆಫ್, ಕಾರ್ಖಾನೆಗಳನ್ನು ಮುಚ್ಚುವುದು ರಿಟ್ರೆಂಚ್‌ಮೆಂಟ್ ಇತ್ಯಾದಿ ಕ್ರಮಗಳನ್ನು ಅನುಸರಿಸುವ ಮೊದಲು ಮಾಲೀಕರು ಕೈಗಾರಿಕಾ ವಿವಾದ ಕಾಯಿದೆ ಪ್ರಕಾರ ಸರ್ಕಾರದಿಂದ ಅನುಮತಿ ಪಡೆಯುವುದು ಕಾನೂನು ರೀತಿ ಅವಶ್ಯವಾಗಿದೆ. ಆದರೆ ಇಂದು ಮಾಲೀಕರು ಈ ಕಾನೂನಿಗೆ ಕಿಂಚಿತ್ತೂ ಬೆಲೆ ಕೊಡುತ್ತಿಲ್ಲ. ಸರ್ಕಾರದ ಕಾರ್ಮಿಕ ಇಲಾಖೆ ಸಹಾ ಈ ಬಗ್ಗೆ ಕಣ್ಣು ಮುಚ್ಚಿ ಕುಳಿತಿದೆ.



ಸರ್ಕಾರ ಈ ಪರಿಸ್ಥಿತಿಯಲ್ಲಿ ಕಾರ್ಮಿಕರ ಉಳಿವಿಗೆ ಯಾವುದೇ ಕ್ರಮಗಳಿಗೆ ಮುಂದಾಗುತ್ತಿಲ್ಲ. ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಲೇ ಆಫ್ ರಿಟ್ರೆಂಚ್‌ಮೆಂಟ್, ಕಾರ್ಖಾನೆಗಳ ಮುಚ್ಚುವಿಕೆ, ಸಂಬಳ ಕಡಿತ ಕ್ರಮಗಳ ಮೇಲೆ ಸರ್ಕಾರ ನಿಷೇಧ ಹೇರುವ ಕಾನೂನನ್ನು ಜಾರಿಗೆ ತರಬೇಕು. ಕಾರ್ಖಾನೆಗಳು ಮುಚ್ಚಿ ಕೆಲಸ ಕಳೆದುಕೊಂಡಿರುವ ಕಾರ್ಮಿಕರಿಗೆ ಸರ್ಕಾರ 6 ತಿಂಗಳವರೆಗೆ ತಾತ್ಕಾಲಿಕ ಪರಿಹಾರ ನೀಡಬೇಕು, ಸಂಕಷ್ಟದಲ್ಲಿರುವ ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳ ನೆರವಿಗೆ ಸರ್ಕಾರ ಮುಂದಾಗಬೇಕು, ಅಗತ್ಯವಸ್ತುಗಳ ಬೆಲೆ ಇಳಿಸಬೇಕು. ಅಸಂಘಟಿತ ವಲಯದ ಕಾರ್ಮಿಕರಿಗೆ ಜೀವನಾವಶ್ಯಕ ಕನಿಷ್ಟ ಕೂಲಿ ನಿಗದಿಪಡಿಸಬೇಕು ಎಂಬ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಗಳನ್ನು ಒತ್ತಾಯಿಸಿ ಸಾಮೂಹಿಕ ಮನವಿ ಪತ್ರಗಳಿಗೆ ವ್ಯಾಪಕವಾಗಿ ಕಾರ್ಮಿಕರಿಂದ ಸಹಿ ಸಂಗ್ರಹಿಸಲಾಯಿತು. ಹೀಗೆ ಸಹಿ ಸಂಗ್ರಹಿಸಿದ ಮನವಿ ಪತ್ರಗಳನ್ನು ಮುಖ್ಯಮಂತ್ರಿಗಳಿಗೆ ಅರ್ಪಿಸಲು 03.06.09ರಂದು ಮತ್ತೊಮ್ಮೆ ಬೆಂಗಳೂರಿನ ಎಂ.ಜಿ.ರಸ್ತೆಯಲ್ಲಿರುವ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಕರ್ನಾಟಕ ವರ್ಕರ್ಸ್ ಯೂನಿಯನ್ (ಸಿಐಟಿಯು) ನೇತೃತ್ವದಲ್ಲಿ ಸಾಮೂಹಿಕ ಧರಣಿ ಕಾರ್ಯಕ್ರಮ ನಡೆಸಲಾಯಿತು. ಕಾರ್ಮಿಕರು ಈ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಈ ಧರಣಿ ಸತ್ಯಾಗ್ರಹದ ನಂತರ ಕಾರ್ಮಿಕರು ಸಹಿ ಮಾಡಿರುವ ಮನವಿ ಪತ್ರಗಳನ್ನು ಮುಖ್ಯಮಂತ್ರಿಗಳ ಮನೆಗೆ ಇ.ಕೆ.ಎನ್. ರಾಜನ್ ನೇತೃತ್ವದಲ್ಲಿ ಕಾರ್ಮಿಕರ ನಿಯೋಗದೊಂದಿಗೆ ತೆರಳಿ ಮುಖ್ಯಮಂತ್ರಿಗಳು ರಾಜಧಾನಿಯಲ್ಲಿ ಇಲ್ಲದ ಕಾರಣ ಅವರ ಆಪ್ತ ಕಾರ್ಯದರ್ಶಿಗಳಿಗೆ ನೀಡಲಾಯಿತು. ನಿಯೋಗದೊಂದಿಗೆ ಚರ್ಚಿಸಿದ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು ಈ ಬಗ್ಗೆ ಸೂಕ್ತ ಕ್ರಮ ಕೂಡಲೇ ಕೈಗೊಳ್ಳುವುದಾಗಿ ತಿಳಿಸಿದರು. ಈ ಮನವಿಯ ಆಧಾರದಲ್ಲಿ ಸಮಸ್ಯೆಯ ಬಗ್ಗೆ ಚರ್ಚಿಸಲು 10.06.09ರಂದು ಮುಖ್ಯಮಂತ್ರಿಗಳು ಸಂಘದ ಪದಾಧಿಕಾರಿಗಳ ಸಭೆ ಕರೆದಿದ್ದರು.

ಸಭೆಯಲ್ಲಿ ಪರಿಹಾರ ನೀಡಿಕೆ ಸಂಬಂಧ ಕೇಂದ್ರ ಸರ್ಕಾರದ ಕಡೆ ಕೈ ತೋರಿದ ಮುಖ್ಯಮಂತ್ರಿಗಳು ಸಂಘದ ಮುಖಂಡರು ಒಪ್ಪದಿದ್ದಾಗ ಕಾರ್ಮಿಕ ಮಂತ್ರಿ, ಕೈಗಾರಿಕಾ ಮಂತ್ರಿಗಳ ಸಮ್ಮುಖದಲ್ಲಿ ಮತ್ತೊಂದು ಸಭೆ ಕರೆದಿದ್ದಾರೆ.ಹೋರಾಟವು ಮುಂದುವರಿಯಲಿದೆ.

ವರದಿ : ಛಾಯಾ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH